ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು – ೫೭೦ ೦೦೬

KARNATAKA STATE OPEN UNIVERSITY
Mukthagangotri, Mysore - 570 006

# ಇತಿಹಾಸ

## ಎಂ.ಎ. (ಪ್ರಥಮ)




**ಕೋರ್ಸ್ – 1**

**ಬ್ಲಾಕ್ – 1**

# KSOU NATIONAL INTERNATIONAL RECOGNITION

Karnataka State Open University (KSOU) was established on 1st June 1996 with the assent of H.E. Governor of Karnataka as a full fledged University in the Academic year 1996 vide Government notification No./EDI/UOV/dated 12th February 1996 (Karnataka State Open University Act – 1992). The Act was promulgated with the object to incorporate an Open University at the State Level for the introduction and promotion of Open University and Distance Education Systems in the education pattern of the State and the Country for the Co-ordination and determination of standard of such systems.

- With the virtue of KSOU Act of 1992, Karnataka State Open University is empowered to establish, maintain or recognize Institutions, Colleges, Regional Centres and Study Centres at such places in Karnataka and also open outside Karnataka at such places as it deems fit.
- All Academic Programmes offered by Karnataka State Open University are recognized by the Distance Education Council (DEC), Ministry of Human Resource Development (MHRD), New Delhi.
- Karnataka State Open University is a regular member of the Association of Indian Universities (AIU), New Delhi, since 1999.
- Karnataka State Open University is a permanent member of Association of Commonwealth Universities (ACU), London, United Kingdom since 1999. Its member code number: ZKASOPENUINI.
- Karnataka State Open University is a permanent member of Asian Association of Open Universities (AAOU), Beijing, CHINA, since 1999.
- Karnataka State Open University has association with Commonwealth of Learning (COL), Vancouver, CANADA, since 2003. COL is an intergovernmental organization created by commonwealth Heads of Government to encourage the development and sharing of open learning distance education knowledge, resources and technologies.

Higher Education To Everyone Everywhere

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ,
ಮೈಸೂರು - 570 006

ಎಂ.ಎ. (ಪ್ರಥಮ)
ಇತಿಹಾಸ
ಕೋರ್ಸ್ - 1

ಬ್ಲಾಕ್
1

# ಭೌಗೋಳಿಕ ಅಂಶ - ಆಧಾರಗಳು - ಪೂರ್ವ ಕಾಲದ ಸಂಸ್ಕೃತಿ


ಘಟಕ - 1 — 1
ಭೌಗೋಳಿಕ ಅಂಶಗಳು ಮತ್ತು ದಕ್ಷಿಣ ಭಾರತದ ಇತಿಹಾಸ

ಘಟಕ - 2 — 13
ಮೂಲಾಧಾರಗಳು : ಪುರಾತತ್ವ

ಘಟಕ - 3 — 25
ಆಧಾರಗಳು - ಸಾಹಿತ್ಯ

ಘಟಕ - 4 — 37
ಪ್ರಾಗೈತಿಹಾಸಿಕ ಸಂಸ್ಕೃತಿ

## ಪಠ್ಯಕ್ರಮವಿನ್ಯಾಸ ಮತ್ತು ಸಂಪಾದಕ ಮಂಡಳಿ

**ಪ್ರೊ. ಎಂ.ಜಿ. ಕೃಷ್ಣನ್**
ಕುಲಪತಿಗಳು ಮತ್ತು ಅಧ್ಯಕ್ಷರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಪ್ರೊ. ಎಸ್. ಎನ್. ವಿಕ್ರಂ ರಾಜೇ ಅರಸ್**
ಡೀನ್ (ಶೈಕ್ಷಣಿಕ) ಮತ್ತು ಸಮಾವೇಶಕರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

*ವಿಷಯ ಸಂಯೋಜಕರು*

**ಡಾ. ಎಂ. ಸುಶೀಲ ಅರಸ್**
ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು
ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರಾಮುವಿ, ಮೈಸೂರು

*ಸಂಪಾದಕರು*

**ಡಾ. ರವಿ ಕೋರಿ ಶೆಟ್ಟರ್**
ಪ್ರಾಧ್ಯಾಪಕರು
ಇತಿಹಾಸ ವಿಭಾಗ
ಕರ್ನಾಟಕ ವಿಶ್ವವಿದ್ಯಾನಿಲಯ
ಧಾರವಾಡ - 580 003.

## ಪಠ್ಯಕ್ರಮ ನಿರೂಪಕರು

1. *ಘಟಕ ಬರೆದವರು*

ಘಟಕಗಳು 5 ರಿಂದ 7

**ಡಾ. ಮಾದೇಗೌಡ**
ಪ್ರಾಧ್ಯಾಪಕರು,
ಇತಿಹಾಸ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು.

## ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶೈಕ್ಷಣಿಕ ವಿಭಾಗದಿಂದ ಸಿದ್ಧಪಡಿಸಲಾಗಿದೆ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ೨೦೧೭

ಎಲ್ಲಾ ಹಕ್ಕುಗಳನ್ನು ಕಾದಿರಿಸಿದೆ. ಅಪ್ಪಣೆ ಇಲ್ಲದೆ ಈ ಕೃತಿಯನ್ನು ಪೂರ್ಣವಾಗಿ ಅಥವಾ ಭಾಗವಾಗಿ ಪುನರ್ ಮುದ್ರಿಸಬಾರದು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕೋರ್ಸುಗಳ ಹೆಚ್ಚಿನ ವಿವರಣೆಗಳಿಗೆ ವಿಶ್ವವಿದ್ಯಾನಿಲಯದ ಕಾರ್ಯಾಲಯ, ಮಾನಸ ಗಂಗೋತ್ರಿ, ಮೈಸೂರು-06 ಇಲ್ಲಿಂದ ಪಡೆಯಬಹುದು.

ಮುದ್ರಕರು ಮತ್ತು ಪ್ರಕಾಶಕರು - ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು ಇವರ ಪರವಾಗಿ
ಕುಲಸಚಿವರು (ಆಡಳಿತ)

# ಇತಿಹಾಸ

## ಬ್ಲಾಕ್ - 1

## ಕೋರ್ಸ್ ೯ - 1

# ದಕ್ಷಿಣ ಭಾರತದ ಇತಿಹಾಸ ಕ್ರಿ.ಶ. 1336ರವರೆಗೆ

**ಪೀಠಿಕೆ**

ಪ್ರಥಮ ಎಂ.ಎ ಇತಿಹಾಸ ಅಧ್ಯಯನದಡಿಯಲ್ಲಿ ***'ದಕ್ಷಿಣ ಭಾರತದ ಇತಿಹಾಸ ಕ್ರಿ.ಶ. 1336 ರವರೆಗೆ'*** ಎಂಬ ವಿಷಯವನ್ನು ಪ್ರಥಮ ಪತ್ರಿಕೆ (ಅಥವಾ ಕೋರ್ಸ್) ಆಗಿ ನಿಗದಿಪಡಿಸಲಾಗಿದೆ. ಈ ಪತ್ರಿಕೆಯ ಒಟ್ಟು ಏಳು ಬ್ಲಾಕ್‌ಗಳನ್ನು ಹೊಂದಿರುತ್ತದೆ. ಬ್ಲಾಕ್-1 ರಲ್ಲಿ ನಾಲ್ಕು ಘುಟಕಗಳಿದ್ದು, ಅವುಗಳು ದಕ್ಷಿಣಭಾರತದ ಆರಂಭದ ಇತಿಹಾಸಕ್ಕೆ ಸಂಬಂಧಪಟ್ಟಿದೆ. ಇದರಲ್ಲಿ 1ನೆ ಘುಟಕವು 'ಭೌಗೋಳಿಕ ಅಂಶಗಳು ಮತ್ತು ದಕ್ಷಿಣಭಾರತದ ಇತಿಹಾಸ' ವನ್ನು ಕುರಿತು ಮಾಹಿತಿಯನ್ನು ನೀಡುತ್ತದೆ. 2ನೇ ಘುಟಕವು ಪುರಾತತ್ವ ಶಾಸ್ತ್ರ ಆಧಾರಗಳನ್ನೂ, ಮತ್ತು 3ನೇ ಘುಟಕವು ಸಾಹಿತ್ಯಧಾರಗಳನ್ನು ಕುರಿತು ಇತಿಹಾಸ ರಚನೆಯಲ್ಲಿ ಅವುಗಳ ಮಹತ್ವವನ್ನು ತಿಳಿಸಪಡಿಸುತ್ತದೆ. 4 ನೇ ಘುಟಕವು ದಖನ್ ಮತ್ತು ದಕ್ಷಿಣ ಭಾರತದಲ್ಲಿ ಇತಿಹಾಸ ಪೂರ್ವ ಕಾಲದ ಸಾಂಸ್ಕೃತಿಯ ಬೆಳವಣಿಗೆಯ ವಿವಿಧ ಹಂತಗಳನ್ನು ಕುರಿತು ಪರಿಚಯಿಸಿಕೊಡುತ್ತದೆ.

ಅಧ್ಯಕ್ಷರು,
ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,
ಮಾನಸ ಗಂಗೋತ್ರಿ, ಮೈಸೂರು.

# ಬ್ಲಾಕ್ - 1

## ಘಟಕ - 1

## ಭೌಗೋಳಿಕ ಅಂಶಗಳು ಮತ್ತು ದಕ್ಷಿಣ ಭಾರತದ ಇತಿಹಾಸ

ವಿಷಯ ಕ್ರಮ


**1.0** ಘಟಕದ ಉದ್ದೇಶ

**1.1** ಪೀಠಿಕೆ

**1.2** ಹಿನ್ನೆಲೆ

**1.3** ಭೌಗೋಳಿಕ ಅಂಶಗಳು

**1.3.1** ಪರ್ಯಾಯ ದ್ವೀಪ ಮತ್ತು ಸಮುದ್ರಗಳ ಪಾತ್ರ

**1.3.2** ದಖನ್ ಪ್ರಸ್ಥಭೂಮಿ

**1.3.3** ಪೂರ್ವ ಕರಾವಳಿ (ಕೋರಮಂಡಲ) ತೀರ ಪ್ರದೇಶ

**1.3.4** ಮೈಸೂರು ಪ್ರಸ್ಥಭೂಮಿ

**1.3.5** ಪಶ್ಚಿಮ ಕರಾವಳಿ ಪ್ರದೇಶಗಳು

**1.4** ನದಿ ಬಯಲುಗಳ ಪಾತ್ರ

**1.5** ಹವಾಮಾನ ಮತ್ತು ಬೆಳೆಗಳು

**1.6** ಉಪಸಂಹಾರ

**1.7** ಸಾರಾಂಶ

**1.8** ಸ್ವಪ್ರಶ್ನೆಗಳು

**1.9** ಹೆಚ್ಚಿನ ಅಧ್ಯಯನಕ್ಕಾಗಿ ಗ್ರಂಥಗಳು

## 1.0 ಘಟಕದ ಉದ್ದೇಶ

ದಕ್ಷಿಣ ಭಾರತದ ಇತಿಹಾಸ ಮತ್ತು ಸಂಸ್ಕೃತಿಯ ವಿಕಾಸದ ಮೇಲೆ ಭೌಗೋಳಿಕ ಅಂಶಗಳ ಪ್ರಭಾವವನ್ನು ಕುರಿತು ನಿಮಗೆ ಪರಿಚಯಿಸಿ ಕೊಡುವುದು ಈ ಘಟಕದ ಉದ್ದೇಶವಾಗಿದೆ. ಈ ಘಟಕದ ಅಧ್ಯಯನ ನಂತರ ನೀವು ಈ ಕೆಳಗಿನ ವಿಷಯಗಳನ್ನು ಕಲಿಯುವಿರಿ

* ದಕ್ಷಿಣ ಭಾರತದ ಭೌಗೋಳಿಕ ಮಹತ್ವ ಮತ್ತು ವ್ಯಾಪಕತೆಯನ್ನು ತಿಳಿಯುವಿರಿ
* ಸಮುದ್ರ ಮತ್ತು ಸಾಗರೋತ್ತರ ಚಟುವಟಿಕೆಯ ಇತಿಹಾಸವನ್ನು ಗಮನಿಸುವಿರಿ
* ದಖಿನ್ ಪ್ರಸ್ಥಭೂಮಿಯ ಐತಿಹಾಸಿಕ ಪಾತ್ರವನ್ನು ನೀವು ತಿಳಿಯುವಿರಿ
* ಕೋರಮಂಡಲ ಅಥವಾ ಪೂರ್ವ ಕರಾವಳಿ ಮಹಾ ಪ್ರದೇಶದ ಪಾತ್ರವನ್ನು ಗ್ರಹಿಸಲು ಸಮರ್ಥರಾಗಿವಿರಿ
* ಮೈಸೂರು ಪ್ರಸ್ಥಭೂಮಿ ದಖಿನ್ ಮತ್ತು ತಮಿಳು ಪ್ರದೇಶಗಳೊಡನೆ ನಿರ್ವಹಿಸಿದ ಸಂಪರ್ಕ ಸೇತುವೆಯ ಪಾತ್ರವನ್ನು ತಿಳಿಯುವಿರಿ
* ದಕ್ಷಿಣ ಭಾರತದ ನದಿಬಯಲುಗಳ ಪಾತ್ರ - ಕೃಷ್ಣ, ಗೋದಾವರಿ, ಮಲಪ್ರಭ, ತುಂಗಾಭದ್ರ ಮತ್ತು ಕಾವೇರಿಗಳ ಮಹತ್ವವನ್ನು ಗಮನಿಸುವಿರಿ
* ಹವಾಮಾನ ಮತ್ತು ಮಳೆ ಮಾರುತಗಳು ಹಾಗೂ ಬೆಳೆಗಳ ನಮೂನೆಗಳನ್ನು ತಿಳಿವಿರಿ.

## 1.1 ಪೀಠಿಕೆ

ಪ್ರತಿಯೊಂದು ದೇಶದ ಜನಜೀವನ ಮತ್ತು ಇತಿಹಾಸ ಅಲ್ಲಿನ ಭೌಗೋಳಿಕ ಅಂಶಗಳಿಂದ ಹೆಚ್ಚು ಪ್ರಭಾವಿತವಾಗಿರುತ್ತದೆ. ಪ್ರಾಚೀನ ಕಾಲದಲ್ಲಿ ಭೌಗೋಳಿಕ ಸನ್ನಿವೇಶ ಜನಜೀವನವನ್ನು ನಿರ್ಧರಿಸುವ ಮುಖ್ಯಾಂಶವಾಗಿದ್ದಿತು. ಮಾನವ, ಸ್ವಾಭಾವಿಕವಾಗಿ ನೈಸರ್ಗಿಕ ಅಂಶವನ್ನು ಅವಲಂಬಿಸಿರುತ್ತಿದ್ದ. ನೆಲದ ಗುಣ, ಅಲ್ಲಿ ದೊರೆಯುವ ಖನಿಜ ಸಂಪತ್ತು, ನದಿಗಳು, ಪರ್ವತಗಳು, ಪ್ರಸ್ಥಭೂಮಿ, ಮರಳು ಗಾಡು, ತೀರಪ್ರದೇಶ ಮೊದಲಾದ ಅಂಶಗಳು ಅಲ್ಲಿನ ನಿವಾಸಿಗಳ ಕಸಬು, ಉಡಿಗೆ-ತೊಡಿಗೆ, ಧಾರ್ಮಿಕ ಸ್ವಭಾವ ಮತ್ತು ಆಚಾರ - ವಿಚಾರಗಳನ್ನು ರೂಪಗೊಳಿಸುವಲ್ಲಿ ಮಹತ್ತರ ಪಾತ್ರವನ್ನು ಬೀರಿವೆ. ಆಧುನಿಕ ಕಾಲದಲ್ಲಿ ನೈಸರ್ಗಿಕ ಅಡ್ಡಿ ಆತಂಕಗಳನ್ನು ತನಗನುಕೂಲವಾಗುವಂತೆ ಪರಿವರ್ತಿಸಿಕೊಳ್ಳಲು ಮಾನವ ಸತತವಾಗಿ ಹೋರಾಡುತ್ತಿದ್ದಾನೆ.

ಇತಿಹಾಸ ಬರವಣಿಗೆಗಳಲ್ಲಿ ದಕ್ಷಿಣ ಭಾರತದ ವ್ಯಾಖ್ಯಾನವನ್ನು ಬಹಳ ವಿಶಾಲ ಅರ್ಥದಲ್ಲಿ ವಿವರಿಸಲಾಗಿದೆ. ಇಂದಿನ ನಾಲ್ಕು ಭಾಷವಾರು ರಾಜ್ಯಗಳಾದ ಕರ್ನಾಟಕ, ತಮಿಳುನಾಡು, ಆಂದ್ರ, ಕೇರಳಗಳನ್ನೊಳಗೊಂಡ ಭೂಪ್ರದೇಶವನ್ನು ದಕ್ಷಿಣ ಭಾರತವೆಂದು ಕರೆಯಲಾಗಿದೆ ಮತ್ತು ದ್ರಾವಿಡ ಭಾಷೆಗಳನ್ನು ಮಾತನಾಡುವ ಭೂಭಾಗವೆಂದು ನಿರ್ದೇಶಿಸಲಾಗಿದೆ. ಇಲ್ಲಿ ಕ್ರಿಸ್ತಶಕ ಆರಂಭದ ಕಾಲದಿಂದ ಒಂದೇ ನಮೂನೆಯ ಸಾಂಸ್ಕೃತಿಕ ವಿಕಾಸವನ್ನು ಗುರುತಿಸಬಹುದಾಗಿದೆ. ಇಲ್ಲಿ ವಿಶಿಷ್ಟವಾದ ದಕ್ಷಿಣ ಭಾರತದ ಸಂಸ್ಕೃತಿ ಹೊರಹೊಮ್ಮಿರುವುದನ್ನು ಕಾಣಬಹುದಾಗಿದೆ. ಆದರೆ ಮತ್ತೊಂದು ಅರ್ಥ ವಿವರಣೆ ಪ್ರಕಾರ ವಿಂಧ್ಯಪರ್ವತದ ದಕ್ಷಿಣದಲ್ಲಿರುವ ಭೂಭಾಗವನ್ನು ಸೇರಿಸಿ ದಕ್ಷಿಣ ಭಾರತವೆಂದು ಕರೆಯಲಾಗಿದೆ. ಈ ವ್ಯಾಖ್ಯಾನವು ದಖ್ಖಿನ ಪ್ರಸ್ಥಭೂಮಿಯು ದಕ್ಷಿಣ ಭಾರತದಲ್ಲಿ ಒಳಗೊಂಡಿರುತ್ತದೆ. ಆದುದರಿಂದ ದಖ್ಖಿನ್ ಪ್ರಸ್ಥ ಭೂಮಿಯನ್ನೊಳಗೊಂಡ ದಕ್ಷಿಣ ಭಾರತದ ಭೌಗೋಳಿಕ ಅಂಶವನ್ನು ಅಧ್ಯಯನ ಮಾಡಬೇಕಾಗುತ್ತದೆ. ಈ ವ್ಯಾಖ್ಯಾನದ ಪ್ರಕಾರ ದಕ್ಷಿಣ ಭಾರತದ ಭೌಗೋಳಿಕ ಮೇಲ್ಮೈ ಲಕ್ಷ್ಯಗನುಗುಣವಾಗಿ ಈ ಭೂಭಾಗದಲ್ಲಿ ನಾಲ್ಕು ಪ್ರಧಾನ ವಲಯ ಪ್ರದೇಶಗಳನ್ನು ಕಾಣಬಹುದು. ಅವು ಯಾವುವು ಎಂದರೆ 1) ದಖಿನ್ ಪ್ರಸ್ಥಭೂಮಿ

2) ಆಂದ್ರ ಮೈದಾನ, ತಮಿಳುನಾಡಿನ ಮೈದಾನ ಪ್ರದೇಶ ಹಾಗೂ ಮೈಸೂರು ಪ್ರಸ್ಥಭೂಮಿ 3) ಮಹಾರಾಷ್ಟ್ರದಿಂದ ಕೇರಳದವರೆಗೂ ವಿಸ್ತರಿಸಿರುವ ಕರಾವಳಿ ಪ್ರದೇಶ 4) ಪೂರ್ವದ ಕೋರಮಂಡಲ ತೀರ ಪ್ರದೇಶಗಳು ಇತಿಹಾಸ ರೂಪಿಸುವುದರಲ್ಲಿ ಈ ನಾಲ್ಕು ಭೂಭಾಗಗಳು ತನ್ನದೇ ಆದ ಪ್ರಭಾವವನ್ನು ಬೀರಿದೆ. ಈ ಪ್ರದೇಶಗಳಿಂದಲೇ ಸುಪ್ರಸಿದ್ಧ ದಕ್ಷಿಣ ಭಾರತದ ರಾಜಮನೆತನವನ್ನು ಪ್ರಾಬಲ್ಯಕ್ಕೆ ಬಂದು ಇತಿಹಾಸದಲ್ಲಿ ತಮ್ಮ ಸಾಧನೆಯ ಅಚ್ಚೊತ್ತಿಹೋಗಿವೆ. ದಖಿನ್ ಪ್ರಸ್ಥಭೂಮಿ ಮತ್ತು ದಕ್ಷಿಣದಲ್ಲಿ ಶಾತವಾಹನ, ಚಾಳುಕ್ಯ, ರಾಷ್ಟ್ರಕೂಟ, ಪಲ್ಲವ ಮತ್ತು ಚೋಳ ಮುಂತಾದ ಸಂತತಿಗಳ ರಾಜರು ಸಾಮ್ರಾಜ್ಯವನ್ನು ಸ್ಥಾಪಿಸಿ ಆಳಿದರು. ಆರಂಭದ ಇತಿಹಾಸಕಾರರು ದಕ್ಷಿಣ ಭಾರತದ ಇತಿಹಾಸ ಅಧ್ಯಯನ ಮಾಡುವಾಗ ಭೌಗೋಳಿಕ ಪ್ರಾಮುಖ್ಯತೆಗೆ ಹೆಚ್ಚು ಗಮನ ಹರಿಸಿರಲಿಲ್ಲ. ಅವರ ಆಸಕ್ತಿ ರಾಜಕೀಯ ಮತ್ತು ಆಡಳಿತ ಇತಿಹಾಸದ ಮೇಲೆ ಕೇಂದ್ರೀಕೃತವಾಗಿದ್ದಿತ್ತೆನ್ನಬಹುದು. ಇತ್ತೀಚೆಗೆ ದಕ್ಷಿಣ ಭಾರತದ ಇತಿಹಾಸದ ಭೌಗೋಳಿಕ ಅಂಶಗಳ ಪ್ರಭಾವವನ್ನು ಕುರಿತು ಅಧ್ಯಯನಗಳು ಆರಂಭಿಸಲಾಗಿದೆ. ಪುರಾಣ ಪರಂಪರೆಯ ಹೇಳಿಕೆಗಳೇನೇ ಇರಲಿ, 'ಭಾರತ' ಎಂಬ ಪದ ನಮ್ಮ ದೇಶದ ಐತಿಹಾಸಿಕ ರಾಜಕೀಯ, ಆಧ್ಯಾತ್ಮಿಕ, ಜನಾಂಗಿಕ - ಸಾಂಸ್ಕೃತಿಕ ಮತ್ತು ಧಾರ್ಮಿಕ ಪ್ರಜ್ಞೆಗಳನ್ನು ಪ್ರತಿಬಿಂಬಿಸುತ್ತದೆ ಮತ್ತು ಸಾಂಸ್ಕೃತಿಕ ಐಕ್ಯತೆ ಸಂಕೇತವಾಗಿದೆ. ಆದರೂ ಹಲವಾರು ವಿದ್ವಾಂಸರು ಈ ಅಖಂಡ ಭಾರತದಲ್ಲಿ ಎರಡು ನಿರ್ದಿಷ್ಟ ಸಾಂಸ್ಕೃತಿಕ ವಲಯಗಳು ಐತಿಹಾಸಿಕ ಕಾಲದಿಂದಲೂ ಅಸ್ತಿತ್ವದಲ್ಲಿರುವುದನ್ನು ಗುರುತಿಸಿದ್ದಾರೆ. ಅವು ಯಾವುವು ಎಂದರೆ ಉತ್ತರದ ಗಂಗಾನದಿಬಯಲಿನ "ವೈದಿಕ ಆರ್ಯರ ಭಾರತ" ವೆಂದೂ, ದಕ್ಷಿಣದ ಪರ್ಯಾಯ ದ್ವೀಪವನ್ನು 'ದ್ರಾವಿಡ ಭಾರತ 'ಎಂಬುದಾಗಿ ಗುರುತಿಸಿದ್ದಾರೆ. ಐತಿಹಾಸಿಕ ಕಾಲದಿಂದಲೂ ದಕ್ಷಿಣ ಭಾರತವನ್ನು "ದಕ್ಷಿಣಪಥ " ಎಂಬುದಾಗಿ ನಿರ್ದೇಶಿಸಿರುವ ಉಲ್ಲೇಖನಗಳಿವೆ. ಮಹಾಭಾರತ, ವರಾಹ ಮಿಹಿರನ ಬೃಹತ್ ಸಂಹಿತೆ ಹಾಗೂ ಸಂಗಂ ತಮಿಳು ಗ್ರಂಥಗಳಲ್ಲಿ ಕರ್ನಾಟಕ ಮತ್ತು ದಕ್ಷಿಣ ಭಾರತಕ್ಕೆ ಸಂಬಂಧಿಸಿದ ಉಲ್ಲೇಖನಗಳಿವೆ. ಉತ್ತರ ಮತ್ತು ದಕ್ಷಿಣದ ಮಧ್ಯೆ ಸಾಂಸ್ಕೃತಿಕ ಸಂಪರ್ಕ ಪ್ರಾಚೀನ ಕಾಲದಿಂದಲೂ ನಿರಂತರವಾಗಿ ಸ್ಥಾಪಿತವಾಗಿದ್ದು ಈ ಭೌಗೋಳಿಕ ವಿಭಜನೆಯು ಎಂದೂ ಈ ಸಾಂಸ್ಕೃತಿಕ ಸಂಪರ್ಕಕ್ಕೆ ಅಡ್ಡಿಯುಂಟು ಮಾಡಲಿಲ್ಲ. ಆದರೂ ದಕ್ಷಿಣ ಭಾರತದ ಭೌಗೋಳಿಕ ಮೇಲ್ಮೈ ಲಕ್ಷಣಗಳು ವಿಶಿಷ್ಟವಾದ ಸಾಮಾಜಿಕ ಮತ್ತು ಸಾಂಸ್ಕೃತಿಕ ವ್ಯವಸ್ಥೆ ದಕ್ಷಿಣದಲ್ಲಿ ರೂಪುಗೊಳ್ಳಲು ಪ್ರಭಾವ ಬೀರಿರುವುದನ್ನು ನಾವು ಸ್ಪಷ್ಟವಾಗಿ ಗುರುತಿಸಬಹುದು.

## 1.2 ಹಿನ್ನೆಲೆ

ಮೇಲೆ ನೀಡಿದ ವ್ಯಾಖ್ಯಾನದಷ್ಟು ದಕ್ಷಿಣ ಭಾರತದ ಪರಿಕಲ್ಪನೆ ಸರಳವಾಗಿಲ್ಲ. ಅದು ಭೌತಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕವಾಗಿ ವೈವಿಧ್ಯಮ ಅಂಶಗಳನ್ನು ಒಳಗೊಂಡ ಸಮ್ಮಿಶ್ರ ಹಾಗೂ ಸಂಕೀರ್ಣ ಪ್ರದೇಶವಾಗಿದೆ. ಆದಿಕಾಲದಿಂದ ನಮ್ಮ ದೇಶ ಭಾರತ ಮತ್ತು ಇಂಡಿಯ ಎಂಬ ಎರಡು ಹೆಸರುಗಳಿಂದಲೂ ಪ್ರಸಿದ್ದಿಯಾಗಿದೆ. ಈ ಹೆಸರನ್ನೆ ದಕ್ಷಿಣ ಭಾಗಕ್ಕೂ ಅನ್ವಯಿಸಿ 'ಸೌತ್ ಇಂಡಿಯಾ ' ಮತ್ತು 'ದಕ್ಷಿಣ ಭಾರತ ' ಎಂಬುದಾಗಿ ಗ್ರಹಿಸುವುದು ಇತಿಹಾಸಕಾಲದಿಂದಲೂ ರೂಡಿಗೆ ಬಂದಿದೆ. ಇಂಡಿಯಾ ಎಂಬ ಹೆಸರು 'ಸಿಂಧೂ' ಪದದಿಂದ ಉಗಮವಾದುದು. ಪರ್ಷಿಯನ್ ಮತ್ತು ಗ್ರೀಕರ ಸಂಭೋದನೆಯಿಂದ ರೂಡಿಗೆ ಬಂದಿದೆ. ಮೊದಲು ಪರ್ಷಿಯನ್ನರು 'ಹಿಂದ್' ಎಂಬುದಾಗಿ ಸಿಂಧೂ ನದಿಯಿಂದಾವೃತವಾಗಿದ್ದ ಪ್ರದೇಶವನ್ನು ಕರೆದರು. ಅನಂತರ ಗ್ರೀಕರು 'ಇಂಡಸ್' ಎಂದು ಕರೆದರು. ಈ ಮೂಲದಿಂದ ನಮ್ಮ ದೇಶಕ್ಕೆ ಇಂಡಿಯಾ ಎಂಬ ಹೆಸರು ಥೂಡಿಗೆ ಬಂದಿತು.

ಹಾಗೆಯೇ ಭರತ ಖಂಡ, ಭರತವರ್ಷ, ಭಾರತ ಎಂಬ ಹೆಸರುಗಳಿಂದ ನಾವು ವಾಸಿಸುವ ಆ ಭೂಭಾಗವನ್ನು ಕರೆಯುವುದು ಅನಾದಿಕಾಲದಿಂದಲೂ ರೂಡಿಯಲ್ಲಿದೆ. ಈ ಹೆಸರಿನ ಉತ್ಪತ್ತಿ ಬಗ್ಗೆ ಅನೇಕ ಪೌರಾಣಿಕ ವಿವರಣೆಗಳಿವೆ. ಪುರಾಣ ಪ್ರಸಿದ್ಧನಾದ ಭರತ ಚಕ್ರವರ್ತಿ ಇಡೀ ದೇಶವನ್ನೆಲ್ಲ ಒಂದುಗೂಡಿಸಿ ಅಕಂಡ ಸಾಮ್ರಾಜ್ಯವನ್ನು ಬಹುಕಾಲ ಆಳಿದುದರಿಂದ ನಮ್ಮ ದೇಶಕ್ಕೆ 'ಭರತ

ಖಂಡ' ಎಂಬ ಹೆಸರಾಯಿತೆಂದು ನಂಬಲಾಗಿದೆ. ಹಾಗೆಯೇ 'ಭರತ ' ಎಂಬ ಪುರಾಣದಿಂದಲೂ ಹಾಗೂ 'ಭರತ್' ಎಂಬ ಹೆಸರಿನ ಮಹಾದರ್ಶಕ ವ್ಯಕ್ತಿಯೊಬ್ಬನಿಂದಲೂ ಈ ಹೆಸರು ಬಂದಿರಬಹುದಿಂದಲೂ ಪ್ರತೀತಿಯಿದೆ. ಭಾರತದ ಅಖಂಡತೆಯ ಕಲ್ಪನೆಯನ್ನು ವಿಷ್ಣುಪುರಾಣದಲ್ಲಿ ಕಾಣಬಹುದು. ಈಪುರಾಣದಲ್ಲಿ ಕಾಶ್ಮೀರ, ಕೈಲಾಸಗಳಿಂದ ಕನ್ಯಾಕುಮಾರಿವರೆಗಿನ ಅಖಂಡ ಭೂಭಾಗವನ್ನು 'ಭಾರತ' ಎಂಬುದಾಗಿ ಕರೆಯಲಾಗಿದೆ.

## 1.3 ಭೌಗೋಳಿಕ ಅಂಶಗಳು

### *1.3.1 ಪರ್ಯಾಯದ್ವೀಪ ಮತ್ತು ಸಮುದ್ರಗಳ ಪಾತ್ರ*

ಭಾರತದ ಪರ್ಯಾಯ ದ್ವೀಪದ ಭಾಗವು ಕಾಲ್ಪನಿಕ ರೇಖೆಗಳಾದ ಉತ್ತರ ಅಕ್ಷಾಂಶಗಳ ದಕ್ಷಿಣ ಭಾಗದಲ್ಲಿ ಮೂಡಿದೆ. ಈ ಉತ್ತರ ರೇಖಾಂಶವು ಪಶ್ಚಿಮದಲ್ಲಿ ಘಟಕದಲ್ಲಿ 13$^{o}$ ಯಿಂದ ಬಂಗಾಳ ಕೊಲ್ಲಿಯ 18$^{o}$ ಡಿಗ್ರಿ ಮೂಲಕ ಹಾದೂ ಹೋಗಿದೆ. ವಿಂಧ್ಯ ಪರ್ವತ ಶ್ರೇಣಿ ದಕ್ಷಿಣ ಭಾರತವನ್ನು ಉತ್ತರದಿಂದ ಪ್ರತ್ಯೇಕಿಸಿದೆ. ಪಶ್ಚಿಮದಲ್ಲಿ ಭರುಚ್ ಮತ್ತು ಸೂರತ್ ಪ್ರದೇಶದಿಂದ ಪೂರ್ವದಲ್ಲಿ ರಾಜಮಹಲ್ ಬೆಟ್ಟಗಳವರೆಗೂ ವಿಂದ್ಯಾ ಪರ್ವತಗಳು ಹರಡಿಕೊಂಡಿವೆ. ಭಾರತದ ಭೂಪಠವನ್ನು ವೀಕ್ಷಿಸಿದರೆ ಭಾರತದ ಈ ಭಾಭಾಗವು ಸಮುದ್ರದೊಳಕ್ಕೆ ಚಾಚಿಕೊಂಡಿರುವುದು ಕಂಡುಬಂರುತ್ತದೆ ಮತ್ತು ಮೂರು ದಿಕ್ಕುಗಳಲ್ಲೂ ಸಮುದ್ರದಿಂದ ಆವರಿಸಿರುವುದು ಸ್ಪಷ್ಟವಾಗುತ್ತದೆ. ಪಶ್ಚಿಮದಲ್ಲಿ ಅರಬ್ಬೀಸಮುದ್ರ, ಪೂರ್ವದಲ್ಲಿ ಬಂಗಾಳಕೊಲ್ಲಿ ಮತ್ತು ದಕ್ಷಿಣದಲ್ಲಿ ಹಿಂದುಮಹಾಸಾಗರವನ್ನು ಗುರುತಿಸಬಹುದು. ಹಿಂದು ಮಹಾಸಾಗರದಲ್ಲಿರುವ ಕನ್ಯಾಕುಮಾರಿ ಕಡೆ ಹೋಗುತ್ತಾ ಈ ಭೂಭಾಗವು ಕಿರಿದಾಗಿ ರೂಪಗೊಂಡಿದೆ. ಕನ್ಯಾಕುಮಾರಿಯಿಂದ ಎರಡು ಬೃಹದ ತೀರ ಪ್ರದೇಶಗಳನ್ನು ಕಾಣಬಹುದು. ಪಶ್ಚಿಮದ ಮಲಬಾರ್ ತೀರಪ್ರದೇಶ. ಇದು ವಾಯುವ್ಯದ ಕಡೆ ವಿಸ್ತರಿಸಿದೆ. ಹಾಗೆ ಬಂಗಾಳಕೊಲ್ಲಿಯ ಕಡೆ ಬರುವ ಕೋರಮಂಡಲ ತೀರಪ್ರದೇಶ. ಕನ್ಯಾಕುಮಾರಿಯಿಂದ ಈಶಾನ್ಯ ಕಡೆಗೆ ವಿಸ್ತರಿಸಿ ಬೃಹದ ತೀರ ಪ್ರದೇಶವನ್ನು ಉಂಟುಮಾಡಿ ಈ ತೀರ ಪ್ರದೇಶಗಳು ಸಾವಿರಾರು ಮೈಲಿ ದೂರದಷ್ಟಿದೆ. ಈ ಎರಡು ತೀರ ಪ್ರದೇಶಗಳು ಸ್ವಲ್ಪ ನೈಸರ್ಗಿಕ ಬಂದರುಗಳನ್ನು ಒದಗಿಸಿಕೊಟ್ಟಿವೆ. ನೌಕಾಯಾನಕ್ಕೆ ಪೂರ್ವ ಕರಾವಳಿ ಪ್ರದೇಶಕ್ಕಿಂತ ಪಶ್ಚಿಮ ತೀರ ಪ್ರದೇಶಗಳು ಹೆಚ್ಚು ಅನುಕೂಲಕರವಾಗಿವೆ. ಕೊಚಿ, ಗೋವ, ಮುಂಬಯಿಗಳು ಪಶ್ಚಿಮ ತೀರ ಪ್ರದೇಶ ಅತ್ಯುತ್ತಮ ಬಂದರುಗಳಾಗಿದೆ. ಕೆ.ಎ. ನಿಲಕಂಠ ಶಾಸ್ತ್ರಿಗಳ ಪ್ರಕಾರ ಭಾರತದ ಪರ್ಯಾಯ ದ್ವೀಪವು ಪ್ರಾಚೀನ ಕಾಲದಿಂದ ಎರಡು ದಿಕ್ಕುಗಳೊಡನೆಯು ಜಲಮಾರ್ಗ ಸಂಪರ್ಕವನ್ನು ಹೊಂದಿದ್ದೆತ್ತೆನ್ನುತ್ತಾರೆ. ಈ ಜಲಮಾರ್ಗಗಳು ಮೆಡಿಟರೇನಿಯನ್ ಮತ್ತು ಆಫ್ರಿಕದಿಂದ ಚೀನವರೆಗೆ ಹಿಂದೂ ಸಾಗರೋತ್ತರ ವ್ಯಾಪಾರ ಚಟುವಟಿಕೆ ಬೆಳೆಯಲು ಕಾರಣವಾಯಿತು. ಈ ಭೂಭಾಗವು ಬಂಗಾಳ ಕೊಲ್ಲಿಯ ಮೂಲಕ ಆಗ್ನೇಯೇಷ್ಯದಲ್ಲಿ ಭಾರತದ ಸಂಸ್ಕೃತಿ ಪ್ರಸಾರಗೊಳ್ಳಲು ಈ ಭೂಭಾಗ ಹೆಚ್ಚು ನೆರವಾಗಿದ್ದಿತು. ಪೆರಿಪ್ಲಸ್ ಮಾರೀಸ್ ಏರಿತ್ರಿ ಎಂಬ ಕೃತಿಯ ಅನಾಮದೇಯ ಲೇಖಕನು ಪರ್ಯಾಯ ದ್ವೀಪದ ಬಂದರುಗಳಲ್ಲಿ ನಡೆಯುತ್ತಿದ್ದ ಸಾಗರೋತ್ತರ ಚಟುವಟಿಕೆಗಳನ್ನು ಪ್ರಶಂಸಿಸಿದ್ದಾನೆ. ಇದೇ ರೀತಿಯಲ್ಲಿ ಗ್ರೀಕ್ ಮತ್ತು ಈಜಿಪ್ಟ್ ಲೇಖಕರು ಕಾವೇರಿ ಪಟ್ಟಣಂ ಮತ್ತು ಇತರೆ ರೇವುಗಳಲ್ಲಿ ನಡೆಯುತ್ತಿದ್ದ ಸಾಗರೋತ್ತರ ವ್ಯಾಪಾರ ಚಟುವಟಿಕೆಗಳ ಬಗ್ಗೆ ಉಲ್ಲೇಖನಗಳನ್ನು ಬಿಟ್ಟುಹೋಗಿದ್ದಾರೆ. ಆದುದರಿಂದ ದಕ್ಷಿಣ ಭಾರತದ ಇತಿಹಾಸ ಮತ್ತು ಸಂಸ್ಕೃತಿ ವಿಕಾಸಗೊಳ್ಳಲು ಸಾಗರಗಳ ಪ್ರಭಾವ ಅಪಾರವಾದುದು. ಕೆಲವು ವಿದ್ವಾಂಸರು ದಕ್ಷಿಣ ಭಾರತದ ಜನಸಂಖ್ಯೆಯಲ್ಲಿ ಮಿಶ್ರಣದ ಅಂಶವು ಸಾಗರೋತ್ತರ ವಲಸೆಯಿಂದ ಸೇರ್ಪಡೆಯಾಗಿದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಈ ಸಾಗರೋತ್ತರ ವ್ಯಾಪಾರ ಚಟುವಟಿಕೆಯನ್ನು ಮೊದಲು ಆರಂಭಿಸಿದವರು ಶಾತವಾಹನರು ಅನಂತರ ಪಲ್ಲವ, ಚೋಳರು ಮುಂದುವರಿಸಿ ಬೆಳೆಸಿದರೆನ್ನಬಹುದು. ಈ ವ್ಯಾಪಾರ ಚಟುವಟಿಕೆಯ ಮೂಲಕ ಸಾಂಸ್ಕೃತಿಕ ಪ್ರಸಾರವಾಯಿತು. ಆಂಕೋರದ ಕಾಂಬೋಡಿ ರಾಜ್ಯದ ಮೇಲೆ ಪಲ್ಲವರ ಸಾಂಸ್ಕೃತಿಕ ಪ್ರಭಾವವನ್ನು ಕಾಣಬಹುದು. ಚೋಳರ ಸೈನಿಕ ದಿಗ್ವಿಜಯವನ್ನು ಶ್ರೀಲಂಕ, ಇಂಡೋನೇಷಿಯ ದ್ವೀಪಗಳ ಶಾಸನಗಳಲ್ಲಿ ದಾಖಲಾಗಿವೆ. ಆರಂಭದಿಂದ ಸುಮಾರು 14ನೇ ಶತಮಾನದವರೆಗೆ ಈ ಸಮುದ್ರಗಳು ದಕ್ಷಿಣ ಭಾರತೀಯರಿಗೆ ವ್ಯಾಪಾರದಿಂದ ಸಂಪತ್ತುಗಳಿಸಲು ಸುವರ್ಣ ಅವಕಾಶವನ್ನೇ ಕಲ್ಪಿಸಿಕೊಟ್ಟವೆನ್ನಬಹುದು. ಚೀನಿ ದಾಖಲೆಗಳಲ್ಲಿ ಕಂಚಿಯನ್ನು ಪ್ರಮುಖ ವ್ಯಾಪಾರಕೇಂದ್ರವೆಂದು ಗುರುತಿಸಿದ್ದಾರೆ. ಕೋರಮಂಡಲ ತೀರ ಪ್ರದೇಶದಲ್ಲಿ ಪ್ರಮುಖ ಬಂದರುಗಳ ಹೆಸರುಗಳನ್ನು ಪಾಶ್ಚಿಮಾತ್ಯ ಲೇಖಕರು ತಿಳಿಸಿದ್ದಾರೆ. ಅವು ಯಾವುವೆಂದರೆ ಕಾವೇರಿ ಪಟ್ಟಣಂ, ತಂಜಾವೂರು, ಪದುಚೇರಿ, ಸಪಟ್ಮ, ಮಚಲಿ ಪಟ್ಟಣಗಳು ಪ್ರಮುಖವಾದವು. ಈ ವ್ಯಾಪಾರ ವ್ಯವಾಟುಗಳು ಶ್ರೇಣಿಗಳ ಮೂಲಕ ಸಂಘಟನೆಯಾಗಿದ್ದವು. ಇಲ್ಲಿಯ ರೇವುಗಳಿಂದ ಸಾಗರೋತ್ತರ ರೇವುಗಳಿಗೆ ನೌಕಾಯಾನ ಮಾಡಿ ವ್ಯಾಪಾರ ಕೈಗೊಂಡು ಅಪಾರ ಸಂಪತ್ತನ್ನು ಗಳಿಸುತ್ತಿದ್ದರು.

ಈ ತೀರ ಪ್ರದೇಶಗಳ ಬಂದರುಗಳು ಒಳನಾಡಿ ಪಟ್ಟಣಗಳೊಡನೆ ವ್ಯಾಪಾರ ಸಂಪರ್ಕ ಜಾಲವನ್ನು ಹೊಂದಿದ್ದವು. ಘಟ್ಟ ಪ್ರದೇಶಗಳಲ್ಲಿ ಹೇರಳವಾಗಿ ದೊರೆಯುತ್ತಿದ್ದ ಶ್ರೀಗಂಧ, ತೀಗ, ಹೊನ್ನೆ ಮೊದಲಾದ ವೃಕ್ಷಸಂಪತ್ತು, ಸಂಬಾರ ಪದಾರ್ಥಗಳು ಪ್ರಾಚೀನ ಕಾಲದಿಂದಲೂ ಹೊರ ದೇಶಗಳಿಗೆ ರಫ್ತಾಗುತ್ತಿದ್ದು ವ್ಯಾಪಾರ ಸಂಪರ್ಕವೇರ್ಪಟ್ಟಿತ್ತು. ಈ ವ್ಯಾಪಾರವು ದಕ್ಷಿಣ ಭಾರತೀಯರನ್ನು ವಿಶಾಲ ಜಗತ್ತಿನೊಡನೆ ಸಂಪರ್ಕ ಕಲ್ಪಿಸಿತ್ತು. ಈ ವ್ಯವಸ್ಥೆ ಕ್ರಿಸ್ತಶಕ ಆರಂಭದಿಂದ 14ನೇ ಶತಮಾನದವರೆಗೂ ಅವಿಚಿನ್ನವಾಗಿ ಮುಂದುವರಿಯಿತು. 14ನೇ ಶತಮಾನದ ಮೇಲೆ ಸಾಗರ ಮತ್ತು ಭೂಭಾಗದ ಮೇಲೆ ಮುಸ್ಲಿಮರು ತಮ್ಮ ಅಧಿಕಾರ ಸ್ಥಾಪಿಸಿದ ಮೇಲೆ ಇನ್ನು ಹೆಚ್ಚಿನ ಪ್ರಮಾಣದಲ್ಲಿ ವ್ಯಾಪಾರ ಸಂಪರ್ಕ ಮತ್ತು ಸಾಂಸ್ಕೃತಿಕ ಸಂಬಂಧಗಳು ಇಸ್ಲಾಂ ಮೂಲಕ ಮುಂದುವರಿಯುತ್ತದೆ.

### *1.3.2 ದಖನ್ ಪ್ರಸ್ಥಭೂಮಿ*

ದಖನ್ ಪ್ರಸ್ಥಭೂಮಿಯ ಇತಿಹಾಸವನ್ನು ಪ್ರತ್ಯೇಕ ಘಟಕವಾಗಿ ಪರಿಗಣಿಸಿ, ಗಂಭೀರ ಅಧ್ಯಯನ ಮಾಡಿದ ಕೀರ್ತಿ ಆರ್.ಜಿ. ಬಂಡಾರ್‌ಕರ್ ಅವರಿಗೆ ಸಲ್ಲುತ್ತದೆ. ಈ ಭೂಭಾಗ ತ್ರಿಕೋನ ಆಕೃತಿಯಲ್ಲಿದೆ ಹಾಗೂ ಉತ್ತರ ಭಾರತದ ಮೈದಾನ ಪ್ರದೇಶದಿಂದ ವಿಂಧ್ಯ ಮತ್ತು ಸತ್ಪುರ ಬೆಟ್ಟ ಶ್ರೇಣಿಗಳಿಂದ ಪ್ರತ್ಯೇಕಗೊಂಡಿದೆ. ಈ ಬೆಟ್ಟದ ಶ್ರೇಣಿಗಳು ಗಂಗಾನದಿ ಬಯಲು ಪ್ರದೇಶದಿಂದ ದಕ್ಷಿಣದ ಕಡೆಗೆ ಸುಲಭವಾಗಿ ವಲಸೆ ಬರುವುದಕ್ಕೆ ಅಡೆತಡೆಯನ್ನೊಡ್ಡಿವೆ. ಸ್ವಲ್ಪ ಮಟ್ಟಿಗೆ ಮೌರ್ಯ ಮತ್ತು ಗುಪ್ತರನ್ನು ಹೊರತುಪಡಿಸಿದರೆ ಉತ್ತರದ ಬೇರೆಯಾವ ರಾಜಸಂತತಿಗೂ ದಕ್ಷಿಣ ಭಾರತವನ್ನು ಸಂಪೂರ್ಣವಾಗಿ ಗೆದ್ದು ತಮ್ಮ ಸಾಮ್ರಾಜ್ಯಕ್ಕೆ ಸೇರಿಸಿಕೊಳ್ಳಲಾಗಲಿಲ್ಲ. ನಂದ ಮತ್ತು ಮೌರ್ಯರು ಪರ್ಯಾಯ ದ್ವೀಪದ ನೈರುತ್ಯ ಮತ್ತು ಆಗ್ನೇಯ ದಿಕ್ಕುಗಳಲ್ಲಿರುವ ಕೃಷ್ಣ - ಗೋದಾವರಿ ಭೂಶಿರಗಳಲ್ಲಿ ತಮ್ಮ ದೂರದ ಆಡಳಿತ ಕೇಂದ್ರಗಳನ್ನು ಸ್ಥಾಪಿಸುವಲ್ಲಿ ಯಶಸ್ವೀಯಾದರು. ದಕ್ಷಿಣದಲ್ಲಿ ದೊರೆಯುವ ಕಬ್ಬಿಣ ಮತ್ತು ತಾಮ್ರ ಖನಿಜಗಳನ್ನು ಪಡೆಯುವ ಉದ್ದೇಶದಿಂದ ಗಂಗಾ ಬಯಲು ರಾಜ್ಯಗಳು ರಾಜ್ಯ ವಿಸ್ತರಣೆಯಲ್ಲಿ ತೊಡಗುತ್ತಿದ್ದವೆಂದು ಬರ್ಟನ್ ಸ್ಟೀನರು ಹೇಳಿದ್ದಾರೆ. ಈ ದಖ್ಖನ್ ಪ್ರಸ್ಥಭೂಮಿಯ ಬಯಲನ್ನು ಪೂರ್ವ ಪಶ್ಚಿಮ ಘಟ್ಟಗಳು ಸಮುದ್ರ ತೀರಗಳಿಂದ ಪ್ರತ್ಯೇಕಿಸಿರುವ ಈ ಭೂಭಾಗದ ಮತ್ತೊಂದು ವಿಶೇಷತೆ ಎನ್ನಬಹುದು. ಶಾತವಾಹನರಿಂದ ಮರಾಠರವರೆಗೂ ದಖ್ಖನ್ ಪ್ರಸ್ಥಭೂಮಿಯಲ್ಲಿ ಸ್ಥಾಪಿತವಾದ ರಾಜಮನೆತನಗಳು ವಿಂಧ್ಯಾ ಪರ್ವತ ಶ್ರೇಣಿಗಳನ್ನು ದಾಟಿ ಉತ್ತರ ಭಾರತ ಬಯಲು ಪ್ರದೇಶದ ಮೇಲೆ ಅಧಿಕಾರ ಸ್ಥಾಪಿಸುವ ಆಕಾಂಕ್ಷೆಯನ್ನು ಹಾಗೂ ದಕ್ಷಿಣ ಭಾರತದಲ್ಲಿ ತಮ್ಮ ಸಾರ್ವಭೌಮ ಅಧಿಕಾರ ಸ್ಥಾಪಿಸಿ ಕಪ್ಪ ಕಾಣಿಕೆ ವಸೂಲು ಮಾಡಲು ಹವಣಿಸುತ್ತಿದ್ದವು. ಈ ರಾಜಕೀಯ ಉದ್ದೇಶದ ಜೊತೆಗೆ

ಸಾಂಸ್ಕೃತಿಕ ಸಂಪರ್ಕ ಏರ್ಪಡಿಸಲು ಯಾವಾಗಲು ತವಕಿಸುತ್ತಿದ್ದವೆನ್ನಬಹುದು. ಹೀಗೆ ದಖ್ಖನ್ ಪ್ರಸ್ಥಭೂಮಿ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸವನ್ನು ರೂಪಿಸುವಲ್ಲಿ ಅಪಾರ ಪರಿಣಾಮ ಬೀರಿದೆ.

### 1.3.3 ಪೂರ್ವ ಕರಾವಳಿ (ಕೋರ ಮಂಡಲ) ತೀರಪ್ರದೇಶ

ಕೋರಮಂಡಲ ತೀರಪ್ರದೇಶದ ಬಯಲು ದಕ್ಷಿಣ ಭಾರತ ಇತಿಹಾಸವನ್ನು ರೂಪಿಸುವಲ್ಲಿ ಮಹತ್ತರ ಪಾತ್ರ ವಹಿಸಿದೆ. ಇದು ಪರ್ಯಾಯದ್ವೀಪದ ತುಟ್ಟ ತುದಿಯಿಂದ ಕೃಷ್ಣ - ಗೋದಾವರಿ ಮತ್ತು ಕಾವೇರಿ ನದಿಗಳು ಪಶ್ಚಿಮ ಘಟ್ಟದಲ್ಲಿ ಉದ್ಭವಿಸಿ, ದಖಿನ್ ಪ್ರಸ್ಥ ಭೂಮಿಯಲ್ಲಿ ಹರಿಯುತ್ತ ಪೂರ್ವ ಕರಾವಳಿ ಬಯಲು ಪ್ರದೇಶದ ಮೂಲಕ ಸಮುದ್ರವನ್ನು ಸೇರುತ್ತವೆ. ಉತ್ತರ ನೀಲಿಗಿರಿ ಮತ್ತು ದಕ್ಷಿಣದ ಅಣ್ಣಾಮಲೈ, ಪಲಣಿ ಮತ್ತು ಕಾರ್ಡಮಮ್ ಬೆಟ್ಟಗಳಿಂದ ಹರಿದು ಬರುವ ಜಲದಾರಿಗಳು ಕೋರಮಂಡಲ ಬಯಲಿನ ಮೂಲಕ ಸಮುದ್ರ ಸೇರುತ್ತವೆ. ಅವುಗಳಲ್ಲಿ ಮುಖ್ಯವಾದ ನದಿಗಳೆಂದರೆ ಗೋದಾವರಿ, ಕೃಷ್ಣ ಮತ್ತು ಕಾವೇರಿ. ಈ ನದಿಗಳು ತಮ್ಮದೇ ಆದ ಫಲವತ್ತಾದ ಬಯಲು ಪ್ರದೇಶಗಳನ್ನು ನಿರ್ಮಿಸಿ ಕೃಷಿ ಮತ್ತು ಕೈಗಾರಿಕೆಗಳ ಅಭಿವೃದ್ಧಿಗೆ ಕಾರಣವಾಗಿವೆ. ಈ ಮೇಲಿನ ಪ್ರಮುಖ ನದಿಗಳಲ್ಲದೆ ಪೆನ್ನಾರ್, ಪಾಲರ್, ತಾಂಪ್ರಪಾಣಿ ಮತ್ತು ವಾಗೈ ನದಿಗಳು ಈ ಕೋರಮಂಡಲ ಪ್ರದೇಶದ ಫಲವತ್ತತೆಯನ್ನು ಹೆಚ್ಚಿಸಿವೆ. ಈ ಭೂಪ್ರದೇಶ ಸ್ಥಿರ ಕೃಷಿನಾಗರೀಕತೆಯು ಸ್ಥಾಪನೆಯಾಗಲು ನೆರವಾಗಿದ್ದಿತು. ಕೃಷಿ ಪಂಚಾಂಗವನ್ನು ತಯಾರಿಸಿ, ಕೃಷಿ ನೆಲೆಗಳ ಸ್ಥಾಪನೆಗೆ ಅನುಕೂಲಕರ ವಾತಾವರಣವನ್ನು ಕಲ್ಪಿಸಿದ್ದಿತು. ಇದನ್ನು ಪ್ರಥಮ ಕೃಷಿಯ ಕೇಂದ್ರವೆಂದು ಕೆಲವು ಇತಿಹಾಸಕಾರರು ವಿವರಿಸಿದ್ದಾರೆ.

ದಕ್ಷಿಣ ಭಾಗದಲ್ಲಿ ಮತ್ತೊಂದು ಸ್ಥಿರ ಕೃಷಿ ನಾಗರೀಕತೆ ಕೇಂದ್ರವೆಂದರೆ ಕೊಯಮತ್ತೂರು ಮತ್ತು ದಕ್ಷಿಣ ಸೇಲಂ ಪ್ರದೇಶ. ಇದು ಕೋರಮಂಡಲ ಮತ್ತು ಎತ್ತರದ ನೀಲಗಿರಿಯ ಪರ್ವತ ಶ್ರೇಣಿಗಳ ನಡುವೆ ಬರುತ್ತದೆ. ಈ ಪ್ರದೇಶ ಶೆವರಾಮ್, ಕೊಳ್ಳಮಲೈ ಮತ್ತು ಪಾಚಮಲೆ ಎಂಬ ಗುಡ್ಡ ಬೆಟ್ಟಗಳ ಶ್ರೇಣಿಯಿಂದ ಆವರಿಸಲ್ಪಟ್ಟಿದೆ. ದಕ್ಷಿಣದ ಸೇಲಂ ಮತ್ತು ಕೊಯಮತ್ತೂರು ನಡುವೆ ಕಾವೇರಿಯೂ ಆಂತರಿಕ ಗಡಿಯಾಗಿ ಮಾನ್ಯತೆ ಪಡೆದಿದೆ. ಪಾಲರ್ ಮತ್ತು ಪೊನ್ನೇಯರ್ ನದಿಗಳು ಕೃಷಿ ಸಮುದಾಯಗಳು ನೆಲೆಸಲು ಸಹಕಾರಿಯಾಗಿದ್ದವು. ಕಾವೇರಿ ಬಯಲಿಗೂ ದಕ್ಷಣದ ತಮಿಳು ಮೈದಾನ ಪ್ರದೇಶಗಳನ್ನು ಸೇಲಂ - ಕೊಯಮತ್ತೂರು ಭೂಪ್ರದೇಶಗಳ ಸಂಪರ್ಕ ಕಲ್ಪಿಸುವುದರಲ್ಲಿ ಸಹಾಕಾರಿಯಾಗಿದೆ. ಕಾವೇರಿ ಮತ್ತು ಪೋನ್ನಾನ್ನಿ ಪಾಲ್‌ಘಾಟ್ ಒಳಗೊಂಡಂತೆ ಕೊಯಮತ್ತೂರು ಮತ್ತು ಪರ್ಯಾಯ ದ್ವೀಪದ ಎರಡು ತೀರ ಪ್ರದೇಶಗಳ ಮೈದಾನಕ್ಕೆ ಸಂಪರ್ಕ ಕಲ್ಪಿಸಿ ಇತಿಹಾಸದ ಮೇಲೆ ಪರಿಣಾಮಕಾರಿಯಾದ ಪ್ರಭಾವ ಬೀರಿವೆ.

### 1.3.4 ಮೈಸೂರು ಪ್ರಸ್ಥ ಭೂಮಿ

ಮೈಸೂರು ಪ್ರಸ್ಥಭೂಮಿ ಕೊಯಮತ್ತೂರು ಮತ್ತು ಸೇಲಂಗಿಂತ ಭೂ - ಮೇಲ್ಮೈ ಲಕ್ಷಣಗಳಲ್ಲಿ ಭಿನ್ನವಾಗಿದ್ದು ದಖ್ಖನ್ ಪ್ರಸ್ಥಭೂಮಿ ಕೇಂದ್ರಕ್ಕೆ ಹೆಚ್ಚು ಸಮೀಪವಾಗಿದೆ ಎನ್ನಬಹುದು. ಆದರೆ ಈ ಮೈಸೂರು ಭೂಪ್ರದೇಶವು ಐತಿಹಾಸಿಕವಾಗಿ ಎತ್ತರ ಭೂಪ್ರದೇಶದ ತಮಿಳುನಾಡಿನ ಒಳನಾಡುಗಳೊಡನೆ ನಿರಂತರ ಸಂಪರ್ಕವನ್ನು ಹೊಂದಿರುವುದನ್ನು ಕಾಣಬಹುದು. ಮೈಸೂರು ದಖ್ಖನ್ ಪ್ರಸ್ಥಭೂಮಿ ಕೃಷಿ ಕೇಂದ್ರದ ಮೈದಾನವಾಗಿದ್ದು ಐತಿಹಾಸಿಕವಾಗಿ ಕೊಯಮತ್ತೂರು ಸೇಲಂಗಳೊಡನೆ ನಿಕಟ ಸಂಪರ್ಕವನ್ನು ಹೊಂದಿದೆ. ದಕ್ಷಿಣ ಕರ್ನಾಟಕದ ಭೂಪ್ರದೇಶದ ಮತ್ತು ಕೊಯಮತ್ತೂರು - ಸೇಲಂನ ಮೇಲ್ಮೈ ಲಕ್ಷಣ ಮತ್ತು ಹವಾಗುಣ ಸಾಮಾನ್ಯವಾಗಿ ಒಂದೆ ನಮೂನೆ ಕಂಡುಬರುತ್ತದೆ. ಇದು ಶುಷ್ಕ ಪ್ರದೇಶವಾಗಿದ್ದು ಸಾಧಾರಣ ಮಳೆಯನ್ನು ಅವಲಂಬಿಸಿರುತ್ತದೆ.

ಕೋರಮಂಡಲ ಮತ್ತು ಪೂರ್ವ ತೀರಪ್ರದೇಶದ ಮೈದಾನವು ಗೋದಾವರಿಯ ಉತ್ತರ ಭಾಗದವರೆಗೆ ವಿಸ್ತರಿಸಿದೆ. ಇದು ಸೇರುವ ಭಾಗದ ಮಾರ್ಗಗಳನ್ನು ಬ್ರಿಟಿಷರು 'ಉತ್ತರ

ಸರ್ಕಾರ'ಗಳೆಂದು ಕರೆದಿದ್ದರು. ವಿಶಾಖಪಟ್ಟಣ ಶ್ರೀಕಾಕುಲಂ (ಆಂಧ್ರಪ್ರದೇಶ) ಮತ್ತು ಗಂಜಾಂ ಮತ್ತು ಪುರಿ (ಒರಿಸ್ಸಾ) ಜಿಲ್ಲೆಗಳನ್ನು ಈ 'ಉತ್ತರದ ಸರ್ಕಾರ್' ಗೊಳಗೆ ಸೇರಿಸಿಕೊಳ್ಳಲಾಗಿದ್ದಿತು. ಈ ಪ್ರದೇಶವು ಕೋರಮಂಡಲ ತಗ್ಗು ಪ್ರದೇಶವನ್ನು ಆಂಧ್ರದ ಮೈದಾನಕ್ಕೆ ಸಂಪರ್ಕವನ್ನು ಕಲ್ಪಿಸಿಕೊಟ್ಟಿದ್ದಿತು. ಈ ಮಾರ್ಗವಾಗಿಯೇ ಉತ್ತರದ ಗಂಗಾ ನದಿಯ ಮೈದಾನದ ಜನತೆ ಪರ್ಯಾಯ ದ್ವೀಪದ ಪೂರ್ವ ತೀರ ಪ್ರದೇಶವನ್ನು ದೊರಕಿಸಿಕೊಂಡು ಸಾಂಸ್ಕೃತಿಕ, ವ್ಯಾಪಾರ, ರಾಜಕೀಯ ಸಂಪರ್ಕಗಳನ್ನು ಬೆಳೆಸಿಕೊಳ್ಳುತ್ತಿದ್ದರು. ಇದೇ ರೀತಿಯಲ್ಲಿ ತಮಿಳು ಮೈದಾನ ಪ್ರದೇಶಗಳಿಂದ ಧಾರ್ಮಿಕ ವಿಚಾರಗಳು, ಚಿಂತನ ಮನಂತನಗಳು ಈ ಮಾರ್ಗವಾಗಿ ಒರಿಸ್ಸಾವನ್ನು ತಲುಪುತ್ತಿದ್ದವು. ಹೀಗೆ ಉತ್ತರ ಭಾಗದ ಕೋರಮಂಡಲ ಮೈದಾನ ತೀರ ಪ್ರದೇಶವು ಒಂದು ಆಯಕಟ್ಟಿನ ಪ್ರದೇಶವಾಗಿದ್ದು ಸೇತುವೆಯನ್ನು ಬೆಸೆದಿದೆ.

### *1.3.5 ಪಶ್ಚಿಮ ಕರಾವಳಿ ಪ್ರದೇಶ*

ದಕ್ಷಿಣ ಭಾರತದ ಪಶ್ಚಿಮ ತೀರ ದೇಶವು ತನ್ನದೇ ಆದ ವಿಶಿಷ್ಟ ಭೌಗೋಳಿಕ ಲಕ್ಷಣಗಳನ್ನು ಹೊಂದಿದೆ. ಪಶ್ಚಿಮ ಘಟ್ಟಗಳಿಂದ ಬೇರ್ಪಟ್ಟು ಪ್ರತ್ಯೇಕವಾಗಿದ್ದು ತನ್ನದೆ ಆದ ಸಾಮಾಜಿಕ ಮತ್ತು ಆರ್ಥಿಕ ನೆಲೆಗಳನ್ನು ರೂಡಿಸಿಕೊಂಡಿದೆ. ಆದರೂ ಅದರ ಸಮಾಜ ಮತ್ತು ಸಾಂಸ್ಕೃತಿಕ ರೂಪ ರೇಶೆಗಳು ದ್ರಾವಿಡ ಸಂಸ್ಕೃತಿಯ ಅಂಶಗಳಿಂದ ಸಂಪೂರ್ಣವಾಗಿ ಪ್ರತ್ಯೇಕಿಸಲಾಗಿದೆ ಎಂದು ಹೇಳಲು ಬರುವುದಿಲ್ಲ. ದ್ರಾವಿಡ ಸಂಸ್ಕೃತಿಯ ನಮೂನೆಗಳನ್ನು ಇಲ್ಲಿಯೂ ಸಹ ಗುರುತಿಸಬಹುದು. ಪಶ್ಚಿಮ ಕರಾವಳಿಯ ತೀರ ಪ್ರದೇಶದ ಸಂಪರ್ಕ ಮತ್ತು ಪ್ರತಿಕ್ರಿಯೆಗಳು ದಕ್ಷಿಣ ಕರ್ನಾಟಕ, ಕೋರಮಂಡಲ ಮೈದಾನ ಪ್ರದೇಶ ಮತ್ತು ಕೊಯಮತ್ತೂರು ಸೇಲಂ ಮಧ್ಯಪ್ರದೇಶದೊಡನೆ ಬಹಳ ಸಣ್ಣ ಪ್ರಮಾಣದಲ್ಲಿ ನಡೆದಿದೆ ಎನ್ನಬಹುದಾಗಿದೆ. ಆದರೆ ವೈನಾಡು ಭೂಪ್ರದೇಶವು ಈ ಪ್ರದೇಶಗಳೊಡನೆ ಹೆಚ್ಚಿನ ನಿಕಟ ಮತ್ತು ನಿರಂತರ ಸಂಪರ್ಕವನ್ನು ಹೊಂದಿದ್ದಿತು. ಈ ಭೌಗೋಳಿಕ ಅಡೆತಡೆಗಳು ಸಾಂಸ್ಕೃತಿಕ ಐಕ್ಯತೆ ಮತ್ತು ಏಕತೆಗೆ ಯಾವುದೆ ಅಡ್ಡಿಯನ್ನು ಒಡ್ಡಲಿಲ್ಲ. ಐಕ್ಯತೆಯಲ್ಲಿ ಭಿನ್ನಭಿನ್ನ ಸಾಂಸ್ಕೃತಿಕ ಲಕ್ಷಣಗಳು ಕಾಣಿಸಿಕೊಳ್ಳಲು ಕಾರಣವಾಗಿದೆ. ಪೂರ್ವ ಕರಾವಳಿಯನ್ನು ಕೋರಮಂಡಲವೆಂದು ಪರಿಗಣಿಸಿದರೆ ಪಶ್ಚಿಮ ಕರಾವಳಿಯನ್ನು ಕೊಂಕಣವೆಂದು ಕರೆಯಬೇಕಾಗುವುದು.

ದಖನ್ ಪ್ರಸ್ಥಭೂಮಿಯ ಒಂದು ಭಾಗವಾದ ಮುಂಬಯಿ ಕರ್ನಾಟಕ ಭಾಗವು ಸಾಂಸ್ಕೃತಿಕ ಭಿನ್ನತೆಯ ವಿಕಾಸದಲ್ಲಿ ಮಹತ್ತರ ಪಾತ್ರವನ್ನು ವಹಿಸಿದೆ ಎನ್ನಬಹುದು. ಬೀದರ್, ಗುಲ್ಬರ್ಗಾ, ಬಿಜಾಪುರ, ಬೆಳಗಾಂ, ರಾಯಚೂರು ಮತ್ತು ಧಾರವಾಡ ಮತ್ತು ಬಳ್ಳಾರಿಯ ಕೆಲವು ಭಾಗಗಳು ದಖ್ಖನ್ ಪ್ರಸ್ಥಭೂಮಿ ಸಂಸ್ಕೃತಿ ಪ್ರಭಾವಕ್ಕೆ ಒಳಗಾಗಿರುವುದು ಸ್ಪಷ್ಟವಾಗಿರುವುದು ಕಂಡು ಬರುತ್ತದೆ. ದಕ್ಷಿಣ ಕರ್ನಾಟಕ ಮತ್ತು ಉತ್ತರ ಕರ್ನಾಟಕದ ಜಿಲ್ಲೆಗಳ ನಡುವೆ ಭಾಷೆಯ ಒಳಭೇದಗಳು ಎದ್ದು ಕಾಣುವುದಕ್ಕೆ ಭೌಗೋಳಿಕ ಅಂಶಗಳು ಕಾರಣವಾಗಿರುವುದು ಮನಗಾಣಬಹುದಾಗಿದೆ. ಧಾರವಾಡ ಮತ್ತು ಮೈಸೂರು ಭಾಷೆಗಳೆಂದು ಸ್ಥಳೀಯ ಒಳಬೇದಗಳು ಉಗಮಿಸಲು ಮೈಸೂರು ಪ್ರಸ್ಥಭೂಮಿ ಮತ್ತು ದಖ್ಖನ್ ಪ್ರಸ್ಥಭೂಮಿಯ ಪ್ರಭಾವ ಬಹುತೇಕ ಕಾರಣವಾಗಿದೆ. ಹಾಗೆಯೇ ಕೃಷ್ಣ ಮತ್ತು ಕಾವೇರಿ ಜಲಾನಯನ ಪ್ರದೇಶಗಳು ಈ ಭಾಷಾ ಭಿನ್ನತೆಗೆ ಕಾರಣವಾಗಿವೆ. ಆದುದರಿಂದ ಕನ್ನಡ ಭಾಷೆ ವೈವಿಧ್ಯತೆಗೆ ಭೌಗೋಳಿಕ ಮೇಲ್ಮೈ ಲಕ್ಷಣಗಳ ವಿಭಜನೆ ಮತ್ತು ಇತರ ಸಾಂಸ್ಕೃತಿಕ ಭಿನ್ನತೆ ಅಂಶಗಳ ಕಾಣಿಕೆ ನೀಡಿದೆ ಎನ್ನಬಹುದು.

## 1.4 ನದಿ ಬಯಲುಗಳ ಪಾತ್ರ

ಕೃಷಿ ಆಧಾರಿತ ನಾಗರೀಕತೆಯ ಬೆಳವಣಿಗೆಗೆ ದಕ್ಷಿಣ ಭಾರತದ ನದಿಗಳು ಪೂರಕವಾಗಿದೆ. ತುಲನಾತ್ಮಕವಾಗಿ ನೋಡಿದರೆ ನರ್ಮದಾ ಮತ್ತು ಮಹಾನದಿ ನದಿಗಳು ಕೃಷಿಗೆ ಅಷ್ಟು ಪೂರಕವಾಗಿಲ್ಲ. ಕಾರಣ ಅವು ಬಂಡೆ ಮತ್ತು ಗುಡ್ಡ ಪ್ರದೇಶಗಳಲ್ಲಿ ಹರಿದು ಅನೇಕ ಸಂದರ್ಭದಲ್ಲಿ

ಉತ್ತರದ ಕಡೆಯಿಂದ ಬರುತ್ತಿದ್ದ ವಿಸ್ತರಣಾವಾದಿಗಳಿಗೆ ನೈಸರ್ಗಿಕ ಅಡಚಣೆಯಿಗಾ ಪರಿಣಿಸಿದ್ದವು. ದಕ್ಷಿಣ ಭಾರತದ ನಾಗರೀಕತೆಯ ಇತಿಹಾಸದಲ್ಲಿ ಕೃಷ್ಣಾ, ಗೋದಾವರಿ ಮತ್ತು ಕಾವೇರಿಗಳು ಜೀವ ನದಿಗಳಾಗಿವೆ. ಇವು ಸಮುದ್ರ ಸೇರುವ ಮುನ್ನ ಹೊಲಗದ್ದೆ, ತೋಟ ಕಾಡುಗಳಲ್ಲಿ ಸಸ್ಯ ಸಮೃದ್ಧಿಯನ್ನು ಉಂಟುಮಾಡುತ್ತವೆ. ಈ ನದಿಗಳು ಉತ್ತರ ಭಾರತದ ಗಂಗಾನದಿಯಷ್ಟೆ ಜನರ ಮನದಲ್ಲಿ ಪಾವಿತ್ರತೆಯನ್ನು ಪಡೆದಿವೆ. ಕಾವೇರಿಯು ಕೊಡಗಿನ ಬ್ರಹ್ಮಗಿರಿಯಲ್ಲಿ ಆರಂಭವಾಗಿ ದಕ್ಷಿಣ ಕರ್ನಾಟಕ ಮತ್ತು ತಮಿಳುನಾಡಿನ ಮೂಲಕ ಹರಿದು ಸಮುದ್ರವನ್ನು ತಲುಪುತ್ತದೆ. ಶ್ರೀರಂಗಮನೂರ್ ದ್ವೀಪ ಪಟ್ಟಣಗಳು, ಅನೇಕ ಸುಪ್ರಸಿದ್ಧ ಪುಣ್ಯಕ್ಷೇತ್ರಗಳು, ದೇವಾಲಯಗಳು ಈ ನದಿಯ ಬಯಲಿನಲ್ಲಿದ್ದು, ಅನೇಕ ಭಕ್ತರಿಗೆ ಕವಿಗಳಿಗೆ ಮತ್ತು ದಾರ್ಶನಿಕರಿಗೆ ಸ್ಫೂರ್ತಿ ನೀಡಿದೆ.

ದಖಿನ್ ಪ್ರಸ್ಥಭೂಮಿಯು ಪಶ್ಚಿಮ ಘಟ್ಟ ಪ್ರದೇಶದಲ್ಲಿ ಎತ್ತರವಾಗಿದ್ದು ಪೂರ್ವದತ್ತ ಸ್ವಲ್ಪ ಮಟ್ಟಿಗೆ ತಗ್ಗಾಗಿರುವುದರಿಂದ ಎಲ್ಲಾ ಮುಖ್ಯ ನದಿಗಳು ಮತ್ತು ಅವುಗಳ ಉಪನದಿಗಳು ಪೂರ್ವದಿಕ್ಕಿನತ್ತ ಹರಿದು ತಮಿಳುನಾಡು ಮತ್ತು ಆಂಧ್ರಪ್ರದೇಶಗಳ ಮೂಲಕ ಬಂಗಾಳ ಕೊಲ್ಲಿಯನ್ನು ಸೇರುತ್ತವೆ. ಈ ನದಿಗಳ ಪಾತ್ರಗಳು ಪ್ರಾಚೀನ ಕಾಲದಿಂದಲೂ ರಾಜಕೀಯ, ಆರ್ಥಿಕ ಹಾಗೂ ಸಾಸ್ಕೃತಿಕ ಚಟುವಟಿಕೆಗಳ ಮೇಲೆ ಹೆಚ್ಚು ಪ್ರಭಾವ ಬೀರಿವೆ. ದಖ್ಖಿನ್ ಪ್ರದೇಶದಲ್ಲಿ ರಾಜ್ಯ ಕಟ್ಟಿದ ಶಾತವಾಹನರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು ಮತ್ತು ಕಲ್ಯಾಣ ಚಾಲುಕ್ಯರೂ ಮುಖ್ಯವಾಗಿ ಕೃಷ್ಣಾ, ಮಲಪ್ರಭ ಹಾಗೂ ಅದರ ಉಪನದಿಗಳ ಹಾಗೂ ಗೋದಾವರಿ ಬಯಲಿನ ಮೇಲೆ ತಮ್ಮ ಪ್ರಭುತ್ವವನ್ನು ಸ್ಥಾಪಿಸಿ ತಮ್ಮ ತಮ್ಮ ರಾಜ್ಯಗಳ ರಕ್ಷಣೆಗಾಗಿ ಮಹಾರಾಷ್ಟ್ರ ಮತ್ತು ವಿಂಧ್ಯದ ಆಜುಬಾಜಿನವರೆಗೆ ತಮ್ಮ ಹತೋಟಿಯನ್ನು ಸ್ಥಾಪಿಸಿದ್ದರು. ಕ್ರಮೇಣ ಸೇವಣರು ಮತ್ತು ಕಾಕತೀಯರು ಈ ಫಲವತ್ತಾದ ಭೂಮಿಯ ಸ್ವಾಮ್ಯಕ್ಕಾಗಿ ಯುದ್ಧಗಳು ನಡೆಸಿದರು. ತುಂಗಭದ್ರಾ ಮತ್ತು ಕೃಷ್ಣ ನದಿಯ ಫಲವತ್ತಾದ ಬಯಲಾದ ರಾಯಚೂರ್ ದೋ-ಅಬ್ ದ್ವಿನದಿ ಪ್ರದೇಶದ ಹತೋಟಿಗಾಗಿ ವಿಜಯನಗರದವರಿಗೂ ಬಹುಮನಿ ಅರಸರಿಗೂ ನಿರಂತರ ಯುದ್ಧಗಳು ಜರುಗಿದುವು.

ಕಾವೇರಿ ಮತ್ತು ಅದರ ಉಪನದಿಗಳ ಬಯಲು ಪ್ರದೇಶವೂ ಸಹ ರಾಜ್ಯಗಳ ಉಗಮ ಮತ್ತು ವಿಸ್ತರಣೆ ಕಾರ್ಯದಲ್ಲಿ ಪ್ರಮುಖ ಪಾತ್ರ ನಿರ್ವಹಿಸಿವೆ. ಗಂಗರ ರಾಜಧಾನಿಯಾದ ತಲಕಾಡು, ಕಾವೇರಿ ನದಿಯ ದಂಡೆಯ ಮೇಲಿದೆ. ಸುಧೀರ್ಘ ಅಂದರೆ ಏಳುಶತಮಾನಗಳ ಕಾಲ ಆಳ್ವಿಕೆ ನಡೆಸಲು ಈ ನದಿಗಳ ಫಲವತ್ತಾದ ಬಯಲುಗಳು ಗಂಗರಿಗೆ ಸಹಕಾರಿಯಾಗಿರಬೇಕು. ಮಿಗಿಲಾಗಿ ಕಾವೇರಿ ಬಯಲಿನ ಒಡೆತನಕ್ಕಾಗಿ ಮೊದಲು ತಲಕಾಡಿನ ಗಂಗರಿಗೂ, ಪಲ್ಲವರಿಗೂ, ಅನಂತರ ಚೋಳರಿಗೂ, ಗಂಗರಿಗೂ ನಿರಂತರ ಯುದ್ಧಗಳು ನಡೆದವು. ಹೊಯ್ಸಳ ರಾಜ್ಯ ಸ್ಥಾಪಕರು ಮೊದಲು ಯಗಿಚಿ, ಹೇಮಾವತಿಯ ಪ್ರದೇಶದಲ್ಲಿ ಒಡೆತನವನ್ನು ಸ್ಥಾಪಿಸಿ ಅನಂತರ ಕಾವೇರಿಯ ಬಯಲಾದ ಗಂಗವಾಡಿಯನ್ನು ವಶಪಡಿಸಿಕೊಂಡು ಕ್ರಮೇಣ ತುಂಗಭದ್ರ ನದಿಯ ಬಯಲು ಹಾಗೂ ಕೃಷ್ಣಾ ದಂಡೆಯತ್ತ ರಾಜ್ಯ ವಿಸ್ತರಿಸಿತು. ಸುಪ್ರಸಿದ್ಧ ಐತಿಹಾಸಿಕ ಸಾಮ್ರಾಜ್ಞವಾದ ವಿಜಯನಗರದ ರಾಜಧಾನಿಯು ತುಂಗಭದ್ರಾ ತೀರದಲ್ಲಿ ಸ್ಥಾಪನೆಯಾಗಿದ್ದು ಸಂಪತ್ತಿನ ಬೀಡಾಗಿದ್ದಿತ್ತೆಂದು ವರ್ಣಿಸಲಾಗಿದೆ. ಅನಂತರ ತುಂಗಭದ್ರಾ ನದಿತೀರದಲ್ಲಿ ಸ್ಥಾಪಿತವಾದ ಇಕ್ಕೇರಿ ಹಾಗೂ ಕಾವೇರಿ ತೀರದಲ್ಲಿ ಸ್ಥಾಪಿತವಾದ ಪಾಳೆಯಗಾರ ಮನೆತನಗಳು ಹಲವು ಕಾಲ ಪ್ರಸಿದ್ಧವಾಗಿದ್ದವು. ಹಾಗೆಯೇ ಕಾವೇರಿ ದಂಡೆಯಲ್ಲಿದ್ದ ಮೈಸೂರು ಸಂಸ್ಥಾನವು ಪ್ರಸಿದ್ಧಿಗೆ ಬಂದಿತು. ನದಿಯ ಬಯಲುಗಳ ಪ್ರದೇಶಗಳು ಬಹುಮಟ್ಟಿಗೆ ರಾಜ್ಯ ನಿರ್ಮಾಪಕರ ಗಮನವನ್ನು ಸೆಳೆದವು. ಐತಿಹಾಸಿಕ ರಾಜಧಾನಿಗಳಾದ ಬಾದಾಮಿ, ತಲಕಾಡು, ವಿಜಯನಗರ, ಶ್ರೀರಂಗ ಪಟ್ಟಣ ಮೊದಲಾದವು ನದಿಗಳ ದಂಡೆಯಲ್ಲಿ ಸ್ಥಾಪಿತವಾಗಿದ್ದವು. ನದೀ ಬಯಲುಗಳ ಪ್ರದೇಶದಲ್ಲಿ ಪ್ರಮುಖ ವ್ಯಾಪಾರ ಸ್ಥಳಗಳೂ, ಧಾರ್ಮಿಕ ಸ್ಥಳಗಳೂ ಬೆಳೆದವು. ಬೇಲೂರು, ಬಾದಾಮಿ, ತಲಕಾಡು, ಮೇಲ್ಕೋಟೆ, ಶ್ರೀರಂಗಪಟ್ಟಣ, ಸೋಮನಾಥಪುರ, ವಿಜಯ ನಗರಗಳು ಅನೇಕ ದೇವಾಲಯಗಳಿಂದ ಕೂಡಿರುವುದನ್ನು ನೋಡಬಹುದು.

## 1.5 ಹವಮಾನ ಮತ್ತು ಬೆಳೆಗಳು

ದಕ್ಷಿಣ ಭಾರತವು ವಿಭಿನ್ನ ಹವಾಮಾನದಿಂದ ಕೂಡಿದೆ. ಭಾರತ ಪರ್ಯಾಯ ದ್ವೀಪದ ಪ್ರದೇಶವಾಗಿ ಸಮಭಾಜಿಕ ವೃತ್ತಕ್ಕೆ ಹತ್ತಿರವಾಗಿರುವುದರಿಂದ ಸಾಮಾನ್ಯವಾಗಿ ಉಷ್ಣತೆ ಪ್ರಧಾನವಾದ ವಾಯುಗುಣವನ್ನು ಹೊಂದಿದೆ. ಕರಾವಳಿ ಪ್ರದೇಶಗಳಲ್ಲಿ ವಾಯುಗುಣದಲ್ಲಿ ಹೆಚ್ಚಿನ ಬದಲಾವಣೆ ಕಂಡು ಬರುತ್ತದೆ. ಮಾರ್ಚ್, ಏಪ್ರಿಲ್, ಮೇ ತಿಂಗಳುಗಳು ಬೇಸಗೆಯ ಕಾಲ. ಒಳನಾಡುಗಳಿಗಿಂತ ತೀರಪ್ರದೇಶಗಳಲ್ಲಿ ಉಷ್ಣಾಂಶ ಹೆಚ್ಚು. ಬೇಸಿಗೆಯ ಕಾಲದಲ್ಲಿ ಮಾತ್ರ ಒಳಭಾಗಗಳಲ್ಲಿ ಸ್ವಲ್ಪ ಮಟ್ಟಿನ ಒಣ ಹವೆ ಹೆಚ್ಚಿಗಿರುತ್ತದೆ. ಆದರೂ ಭಾರತದ ಇತರ ಭಾಗಗಳೊಡನೆ ಹೋಲಿಸಿದರೆ ಬೇಸಿಗೆಯ ಉಷ್ಣಾಂಶ ದಕ್ಷಿಣ ಒಳ ನಾಡುಗಳಲ್ಲಿ ಹೆಚ್ಚೆನಿಸುವುದಿಲ್ಲ. ಜೂನ್ ತಿಂಗಳಿಂದ ಸೆಪ್ಟೆಂಬರ್ ತಿಂಗಳ ಕೊನೆಯವರೆಗೆ ಮಳೆಗಾಲವಾಗಿರುತ್ತದೆ. ಮಳೆಯ ಹಂಚಿಕೆ ಎಲ್ಲಾ ಭಾಗಗಳಲ್ಲಿ ಏಕ ಪ್ರಕಾರವಾಗಿರುವುದಿಲ್ಲವಾದರೂ ಎಲ್ಲಾ ಭಾಗಗಳಿಗೂ ಸಾಮಾನ್ಯ ಮಳೆಯಾಗಿರುತ್ತದೆ. ಅಕ್ಟೋಬರ್ ಮಧ್ಯದಿಂದ ಜನವರಿಯವರೆಗೂ ಚಳಿಗಾಲವಾಗಿರುತ್ತದೆ. ಕರ್ನಾಟಕದ ದಕ್ಷಿಣ ಭಾಗದ ಹವೆಯು ಹಿತಕರವಾಗಿರುತ್ತದೆ. ಬೆಂಗಳೂರು, ಮೈಸೂರು ಪ್ರದೇಶವು ಸರ್ವ ಕಾಲದಲ್ಲೂ ಹಿತಕರವಾದ ವಾಯುಗುಣವನ್ನು ಹೊಂದಿದ್ದು 'ನೈಸರ್ಗಿಕ ಹವಾನಿಯಂತ್ರಿತ' ಪ್ರದೇಶದಂತಿದೆ ಎಂದು ಹೇಳಲಾಗಿದೆ.

ದಕ್ಷಿಣ ಭಾರತದ ಎಲ್ಲಾ ಭಾಗಗಳಲ್ಲಿ ಒಂದೇ ಸಮನೆ ಮಳೆಯೂ ಬೀಳುವುದಿಲ್ಲ. ಮುಂಗಾರು ಹಿಂಗಾರು ಮಳೆಯ ಮಾರುತಗಳು ಮಳೆಯನ್ನು ಸುರಿಸುತ್ತವೆ. ಒಟ್ಟಿನಲ್ಲಿ ವರ್ಷದಲ್ಲಿ ಸರಾಸರಿ ಕೇವಲ 10 ಅಂಗುಲದಿಂದ 500 ಅಂಗುಲಗಳವರೆಗೂ ಮಳೆಯನ್ನು ಪಡೆಯುವ ಸ್ಥಳಗಳಿವೆ. ಮಳೆಯು ಹೆಚ್ಚಾಗಿ ಜೂನ್ ತಿಂಗಳಿನಿಂದ ಸೆಪ್ಟೆಂಬರ್ ಅಂತ್ಯದವರೆಗೆ ಸರ್ವೇಸಾಮಾನ್ಯವಾಗಿ ಬೀಳುತ್ತದೆ. ಮಲೆನಾಡು ಪ್ರದೇಶಗಳಲ್ಲಿ ವಿಶೇಷವಾಗಿ ಮಳೆಯಾಗುತ್ತದೆ. ಬಯಲು ಪ್ರದೇಶದಲ್ಲಿ ಕಡಿಮೆ ಮಳೆಯಾಗುತ್ತದೆ. ಬಿಜಾಪುರ, ಗುಲ್ಬರ್ಗಾ, ರಾಯಲ ಸೀಮೆಯಲ್ಲಿ ಕಡಿಮೆ ಪ್ರಮಾಣದ ಮಳೆಯಾಗಿ ಆಗಾಗ ಬರಗಾಲ ಪೀಡಿತವಾಗಿರುವ ಸಂದರ್ಭಗಳುಂಟು. ಪರ್ಯಾಯ ದ್ವೀಪದ ಪೂರ್ವ ಮತ್ತು ಪಶ್ಚಿಮ ಕರಾವಳಿ ಪ್ರದೇಶಗಳು ಅಧಿಕ ಮಳೆಯಿಂದಾಗಿ ಆಗಿಂದಾಗ ನೆರೆ ಹಾವಳಿಗೆ ತುತ್ತಾಗುತ್ತಿರುತ್ತವೆ. ಒಟ್ಟಿನಲ್ಲಿ ಹೇಳುವುದಾದರೆ ಮಧ್ಯಭಾರತ ಮತ್ತು ಉತ್ತರ ಭಾರತದಲ್ಲಿ ಅನುಭವಿಸುವ ಹವಮಾನ ವೈಪರಿತ್ಯ ಪ್ರಮಾಣ ದಕ್ಷಿಣ ಭಾರತದಲ್ಲಿ ಕಂಡು ಬರುವುದಿಲ್ಲ.

ದಕ್ಷಿಣ ಭಾರತದ ಹವಮಾನವು ಮೂರು ಬಗೆಯ ಸಂಪ್ರದಾಯಿಕ ಬೆಳೆಗಳಿಗೆ ಪೂರಕವಾಗಿದೆ. (1) ಮದಲನೆ ನಮೂನೆ ಬೆಳೆಗಳು ಶುಷ್ಕ ಬೆಳೆಗಳೆಂದು ಪರಿಗಣಿಸಲಾಗಿದೆ. ಜೋಳ, ಗೋಧಿ, ಧಾನ್ಯ, ಕಾಳುಗಳು, ರಾಗಿ, ಹತ್ತಿ, ಎಣ್ಣೆ ಬೀಜಗಳು ಮತ್ತು ಸಾಂಬಾರ ಪದಾರ್ಥಗಳು ಈ ಗುಂಪಿಗೆ ಸೇರಿವೆ. (2) ಭತ್ತ, ಕಬ್ಬುಗಳು ನೀರಾವರಿ ಸೌಲಭ್ಯದ ತರಿ ಬೆಳೆಗಳ ಎರಡನೆಯ ಗುಂಪಿಗೆ ಸೇರಿವೆ. (3) ಮೂರನೆ ನಮೂನೆ ಬೆಳೆಗಳು ತೋಟಗಾರಿಕೆಗೆ ಸಂಬಂಧಪಟ್ಟಿರುತ್ತವೆ. ತೆಂಗು, ಅಡಿಕೆ, ಬಾಳೆ, ರೇಷ್ಮೆ ಇತ್ಯಾದಿ ಬೆಳೆಗಳು ಸೇರಿರುತ್ತವೆ. ಆಧುನಿಕ ಕಾಲದಲ್ಲಿ ಈ ಬೆಳೆಗಳ ಜೊತೆಗೆ ಕಾಫಿ, ಟೀ, ಏಲಕ್ಕಿ, ಮೆಣಸು, ಸಿಂಚೋನಗಳನ್ನು ಬೆಳೆಯಲಾಗುತ್ತಿದೆ.

## 1.6 ಉಪಸಂಹಾರ

ಯುಗಾಂತರದಲ್ಲಿ ದಕ್ಷಿಣ ಭಾರತದ ಸಮಾಜ ಹೇಗೆ ವೈವಿಧ್ಯಮಯ ಭೌಗೋಳಿಕ ಪರಿಸರದೊಡನೆ ಪ್ರತಿಕ್ರಿಯಿಸಿ ತನ್ನ ಇತಿಹಾಸ ಮತ್ತು ನಾಗರೀಕತೆಯನ್ನು ರೂಪಿಸಿಕೊಂಡ ಬಗೆಯನ್ನು ಮೇಲಿನ ಭೌಗೋಳಿಕ ಅಂಶಗಳ ವಿವರಣೆಯಿಂದ ತಿಳಿದು ಬರುತ್ತದೆ. ದಕ್ಷಿಣ ಭಾರತ ಇತಿಹಾಸದಲ್ಲಿ ತುಂಡು - ತುಂಡು ರಾಜಕೀಯ ವ್ಯವಸ್ಥೆ ಮತ್ತು ಉಪ ಸಾಂಸ್ಕೃತಿಕ ವಲಯಗಳು ಉಗಮದಲ್ಲಿ ಭೌಗೋಳಿಕ ಅಂಶಗಳ ಪ್ರಭಾವವು ಸ್ಪಷ್ಟವಾಗಿ ಗೋಚರಿಸುತ್ತದೆ. ದಕ್ಷಿಣ ಭಾರತ ಪ್ರಾಚೀನ ಕಾಲದಲ್ಲಿ ಸ್ಥಳೀಯ ರಾಜಕೀಯ ನಿಷ್ಠೆ ಬಹಳ ವ್ಯಾಪಕವಾಗಿ ಪ್ರಸರಿಸಿದ್ದನು ಗುರುತಿಸಬಹುದು. ಇದಕ್ಕೆ ಬಹುಮುಖ್ಯ ಕಾರಣವೆಂದರೆ ಭೂಪ್ರದೇಶಗಳ ವಿಭಜನೆಯೇ ಮೂಲ ಕಾರಣವೆನ್ನಲಾಗಿದೆ. ಈ

ಲಕ್ಷಣವು ದ್ರಾವಿಡ ಸಂಸ್ಕೃತಿಯ ಅವಿಭಾಜ್ಯ ಅಂಶವಾಗಿ ಆರಂಭದಿಂದಲೂ ಅಡಕವಾಗಿರುವುದನ್ನು ಕಾಣಬಹುದು. ಹಾಗೇ ಈ ವೈವಿಧ್ಯಮಯ ಭೂಪ್ರದೇಶಗಳು ಪ್ರಾಚೀನ ಕಾಲದಲ್ಲಿ ಅಖಿಲ ದಕ್ಷಿಣ ಭಾರತದ ಮಟ್ಟದಲ್ಲಿ ಏಕಚಕ್ರಾಧಿಪತ್ಯ ಹೊಂದಿದ್ದ ರಾಜಕೀಯ ವ್ಯವಸ್ಥೆಯನ್ನು ಕಟ್ಟಲು ದೊಡ್ಡ ಅಡಚಣೆಯಾಗಿದ್ದಿತು. ಇದಕ್ಕೆ ಮುಖ್ಯ ಕಾರಣ ಉತ್ತರ ಭಾರತಗಳಲ್ಲಿದ್ದ ಹಾಗೆ ಇಲ್ಲಿ ವಿಶಾಲವಾದ ಬೃಹತ್ ಮೈದಾನ ಪ್ರದೇಶ ಇಲ್ಲದೆ ಇರುವುದು. ತುಂಡು ರಾಜಕೀಯ ವ್ಯವಸ್ಥೆ 14ನೇ ಶತಮಾನದ ವಿಜಯನಗರ ಸ್ಥಾಪನೆಯಾಗುವವರೆಗೆ ಮುಂದುವರಿಯಿತು. ಈ ವೈಪರೀತ್ಯದಿಂದ ಕೂಡಿದ ದಕ್ಷಿಣ ಭಾರತ ಭೂಪ್ರದೇಶಗಳು ಇಲ್ಲಿಯ ಸಂಸ್ಕೃತಿ ಏಕತೆಗೆ ಯಾವುದೇ ಅಡ್ಡಿ ಉಂಟುಮಾಡಲಿಲ್ಲ. ಅವು ನಿರಂತರವಾಗಿ ವಿವಿಧ ಪ್ರದೇಶಗಳ ನಡುವೆ ಸಾಂಸ್ಕೃತಿಕ ವಿನಿಮಯಕ್ಕೆ ಸಂಬಂಧಿಸಿದ ಭಾಷೆ, ನಡವಳಿಕೆ, ಧರ್ಮ ಪ್ರಚಾರ ಕಾರ್ಯಕ್ಕೆ ಭೌಗೋಳಿಕ ಅಂಶಗಳು ಯಾವುದೇ ರೀತಿಯ ಅಡಚಣೆ ಉಂಟು ಮಾಡಲಿಲ್ಲ.

## 1.7 ಸಾರಾಂಶ

ಈ ಘಟಕದಲ್ಲಿ ದಕ್ಷಿಣ ಭಾರತದ ಇತಿಹಾಸ ಮತ್ತು ನಾಗರೀಕತೆ ಬೆಳೆಯಲು ಭೌತಿಕ ಅಂಶಗಳ ಮಹತ್ವ ಹಾಗೂ ಭೂಗೋಳವು ಇತಿಹಾಸಕ್ಕೆ ರಂಗ ಭೂಮಿಯಾಗಿದ್ದು ಅದರ ಉದಯ, ಬೆಳವಣಿಗೆ ಮೇಲೆ ಅದು ಬೀರಿರುವ ಪ್ರಭಾವವನ್ನು ಅರಿತ್ತಿದ್ದಿರಿ.

ದಕ್ಷಿಣ ಭಾರತದ ಭೌಗೋಳಿಕ ಲಕ್ಷಣಗಳು ಮಾತ್ರ ಪ್ರಾದೇಶಿಕ ಸ್ವರೂಪಗಳು ದಕ್ಷಿಣ ಭಾರತ ಸಮಾಜ, ಸಂಸ್ಕೃತಿಯ ಭಿನ್ನತೆ, ವೈಪರೀತ್ಯಗಳಿಗೆ ಕಾರಣವಾಗಿರುವ ಅಂಶವನ್ನು ಗಮನಿಸಿದ್ದೇವೆ.

ದಖ್ಖಿನ್ ಪ್ರಸ್ಥಭೂಮಿಯ ಮಹತ್ವ, ಅದರ ಪ್ರಭಾವ, ಹಾಗೂ ಪಶ್ಚಿಮ ಮತ್ತು ಪೂರ್ವ ಕರಾವಳಿ ಪ್ರದೇಶಗಳು ನಾಗರೀಕತೆ ಇತಿಹಾಸ ರೂಪಿಸುವುದರಲ್ಲಿ ಅವುಗಳ ಪಾತ್ರವನ್ನು ಗ್ರಹಿಸಿದ್ದೇವೆ.

ಹಾಗೆಯೇ ನದಿ ಬಯಲುಗಳ ಪಾತ್ರ, ವೈವಿಧ್ಯಮಯ ಹವಾಮಾನ ಪ್ರಭಾವ ಮತ್ತು ದಕ್ಷಿಣಭಾರತದ ಭೌಗೋಳಿಕ ಅಂಶಗಳು ಕೃಷಿ ಉತ್ಪನ್ನಗಳಿಗೆ ಹೇಗೆ ಪೂರಕವಾಗಿವೆ ಎಂಬ ಅಂಶಗಳನ್ನು ಗಮನಿಸಿದ್ದೇವೆ.

ವಿಂಧ್ಯಪರ್ವತ ಶ್ರೇಣಿಗಳು, ಪಶ್ಚಿಮ ಮತ್ತು ಪೂರ್ವ ಘಟ್ಟಗಳು, ಮತ್ತು ತ್ರಿಸಮುದ್ರಗಳು ದಕ್ಷಿಣ ಭಾರತ ಇತಿಹಾಸ ರೂಪಿಸುವುದರಲ್ಲಿ ನಿರ್ವಹಿಸಿದ ಪಾತ್ರವನ್ನು ಗಮನಿಸಿದ್ದೇವೆ.

ವೈವಿಧ್ಯಮಯ ಭೌಗೋಳಿಕ ಅಂಶಗಳು ವೈವಿಧ್ಯಮಯ ರಾಜಕೀಯ, ಆರ್ಥಿಕ, ಸಾಮಾಜಿಕ ಪದ್ಧತಿಗಳಿಗೆ ಎಡೆಮಾಡಿಕೊಟ್ಟಿರುವುದನ್ನು ಈ ಘಟಕದಿಂದ ತಿಳಿದಿದ್ದೇವೆ. ಆದರೆ ಈ ಭೌಗೋಳಿಕ ಭಿನ್ನತೆ ದಕ್ಷಿಣ ಭಾರತದ ಸಂಸ್ಕೃತಿ ಐಕ್ಯತೆ ಮತ್ತು ಏಕತೆಗೆ ಎಂದೂ ಅಡ್ಡಿಯಾಗಲಿಲ್ಲವೆಂಬ ಅಂಶವನ್ನು ಗಮನಿಸಿದ್ದೇವೆ.

## 1.8 ಸ್ವಪ್ರಶ್ನೆಗಳು

1. ದಕ್ಷಿಣ ಭಾರತದ ಇತಿಹಾಸದ ಮೇಲೆ ಭೌಗೋಳಿಕ ಪ್ರಭಾವವನ್ನು ಗುರುತಿಸಿ.
2. ದಕ್ಷಿಣ ಭಾರತದ ರಾಜಕೀಯ ಮತ್ತು ಸಾಮಾಜಿಕ ಭಿನ್ನತೆಗೆ ಭೌಗೋಳಿಕ ಅಂಶಗಳು ಎಷ್ಟರ ಮಟ್ಟಿಗೆ ಕಾರಣವಾಗಿವೆ ತಿಳಿಸಿ

3. ಟಿಪ್ಪಣಿ ಬರೆಯಿರಿ

ಪಶ್ಚಿಮ ಕರಾವಳಿ ಪ್ರದೇಶಗಳು

ಪೂರ್ವ ಕರಾವಳಿ ಪ್ರದೇಶ (ಕೋರಮಂಡಲ ಪ್ರದೇಶ)

ದಖನ್ ಪ್ರಸ್ಥಭೂಮಿಯ ಮಹತ್ವ ಮತ್ತು ಅದರ ಪಾತ್ರ

ವಿಂಧ್ಯ ಪರ್ವತ ಶ್ರೇಣಿಗಳು, ಪಶ್ಚಿಮ ಮತ್ತು ಪೂರ್ವ ಘಟ್ಟಗಳು.

ನದಿ ಬಯಲುಗಳ ಪಾತ್ರ

## 1.8 ಹೆಚ್ಚಿನ ಅಧ್ಯಯನಕ್ಕಾಗಿ ಗ್ರಂಥಗಳು


1. Burton Stein : Peasant state and Society in Medieval South India
2. Subbarayalu .Y. : Political Geography of the Chola Country
3. Yazdani .G. : The Early History of the Deccan , II Vols.
4. Romila Thappar(Ed) : Recent Perspectives of Early Indian History
5. ಪ್ರೊ. ರಂಗಸ್ವಾಮಯ್ಯ ಜಿ.ಆರ್. : ಪ್ರಾಚೀನ ಭಾರತ
6. ಪ್ರೊ. ರಂಗಸ್ವಾಮಯ್ಯ ಜಿ.ಆರ್. : ಕರ್ನಾಟಕದ ಸಂಕ್ಷಿಪ್ತ ಚರಿತ್ರೆ
7. Diwakar .R.R. (Ed) : Karnataka Through the Ages.
8. Karashinna .N. : South Indian History and Society
9. A. Sundar (Ed) : ಕರ್ನಾಟಕ ಚರಿತ್ರೆ. ಸಂ. 1, ಕನ್ನಡ ವಿಶ್ವವಿದ್ಯಾನಿಲಯ, ಹಂಪೆ


**ಪ್ರೊ|| ಮಾದೇಗೌಡ**

# ಟಿಪ್ಪಣಿಗಳು

## ಬ್ಲಾಕ್ - 1

## ಘಟಕ - 2

# ಮೂಲಾಧಾರಗಳು : ಪುರಾತತ್ವ

*ವಿಷಯ ಕ್ರಮ*


**2.0** ಘಟಕದ ಉದ್ದೇಶ

**2.1** ಪೀಠಿಕೆ

**2.2** ಪ್ರಾಕ್ತನ ಆಧಾರಗಳು

**2.2.1** ಉತ್ಖನನ ಅಥವಾ ಭೂಸಂಶೋಧನೆಗಳು

**2.2.2** ಶಾಸನಾಧಾರಗಳು

**2.2.3** ನಾಣ್ಯಾಧಾರಗಳು

**2.2.4** ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪಗಳು ಮತ್ತು ಪ್ರಾಕ್ತನ ಹಾಗೂ ಐತಿಹಾಸಿಕ ನೆಲೆಗಳು

**2.3** ಸಾರಾಂಶ

**2.4** ಸ್ವಪರೀಕ್ಷೆ ಪ್ರಶ್ನೆಗಳು

**2.5** ಹೆಚ್ಚಿನ ಅಧ್ಯಯನಕ್ಕಾಗಿ ಗ್ರಂಥಗಳು

## 2.0 ಘಟಕದ ಉದ್ದೇಶ

ಇತಿಹಾಸ ರಚನೆ ಕಾರ್ಯದಲ್ಲಿ ನಮಗೆ ದೊರಕಿರುವ ಮೂಲಾಧರಗಳ ಸಾಮಾಗ್ರಿಗಳ ಸ್ವರೂಪವನ್ನು ಪರಿಚಯಿಸುವುದು ಈ ಘಟಕದ ಉದ್ದೇಶವಾಗಿದೆ. ಇವು ಲಿಖಿತ ಮತ್ತು ಅಲಿಖಿತ ರೂಪದಲ್ಲಿದ್ದು ವೈವಿಧ್ಯತೆಯಿಂದ ಕೂಡಿವೆ ಎಂಬ ವಿಷಯವನ್ನು ನೀವು ಗಮನಿಸಬೇಕಾಗುತ್ತದೆ. ಈ ಘಟಕದ ಅಧ್ಯಯನದಿಂದ ಈ ಕೆಳಗಿನ ವಿಷಯಗಳನ್ನು ಗ್ರಹಿಸುವಿರಿ.

* ಪ್ರಾಚೀನ ಭಾರತದ ಇತಿಹಾಸವನ್ನು ಅರಿಯುವಾಗ ನಮಗೆ ಎದ್ದು ಕಾಣುವ ಸಮಸ್ಯೆ ಎಂದರೆ ಐತಿಹಾಸಿಕ ಕೃತಿಗಳ ಕೊರತೆ.
* ಪ್ರಾಚೀನ ಭಾರತೀಯರ ಐತಿಹಾಸಿಕ ಪ್ರಜ್ಞೆಯನ್ನು ಕುರಿತು ಆಲ್ಬರೂನೀಯ ಪ್ರತಿಕ್ರಿಯೆಯನ್ನು ತಿಳಿಯುವಿರಿ.
* ಪೂರಾತತ್ವದ ನಾಲ್ಕು ಪ್ರಮುಖ ಶಾಖೆಗಳನ್ನು ಪರಿಚಯಿಸಿ ಕೊಳ್ಳುವಿರಿ.
* ಭೂ ಉತ್ಖನದದಿಂದ ದೊರೆಯುವ ಪಳೆಯುಳಿಕೆ ಆಧಾರಗಳು ಇತಿಹಾಸ ಪೂರ್ವಕಾಲದ ನಾಗರೀಕತೆ ರಚನೆಯಲ್ಲಿ ಅವು ನಿರ್ವಹಿಸುವ ಪಾತ್ರವನ್ನು ನೀವು ತಿಳಿಯುವಿರಿ
* ಇತಿಹಾಸ ಪುನರ್ ರಚನೆಯಲ್ಲಿ ಶಾಸನಗಳನ್ನು ಪರಿಪೂರ್ಣ ಐತಿಹಾಸಿಕ ದಾಖಲೆಗಳಾಗಿ ಮಾನ್ಯ ಮಾಡಿರುವ ವಿಷಯಗಳನ್ನು ತಿಳಿಯುವಿರಿ
* ವಿವಿಧ ಬಗೆಯ ನಾಣ್ಯಗಳು ಒದಗಿಸುವ ಮಾಹಿತಿಗಳು ಇತಿಹಾಸ ಪುನರ್ ರಚನೆಗೆ ನೆರವು ನೀಡಿರುವ ಸಂಗತಿಯನ್ನು ಗಮನಿಸುವಿರಿ
* ಸ್ಮಾರಕಗಳಿಗೆ ಸಂಬಂಧಿಸಿದಂತೆ ಬೌದ್ಧ, ಜೈನ, ಹಿಂದೂ ದೇವಾಲಯಗಳ ಸ್ಮಾರಕಗಳು ಧಾರ್ಮಿಕ ಮತ್ತು ಸಾಮಾಜಿಕ ಇತಿಹಾಸ ರಚನೆ ಅವು ಒದಗಿಸುವ ಮಾಹಿತಿಗಳ ಮಹತ್ವವನ್ನು ನೀವು ಗ್ರಹಿಸುವಿರಿ
* ಒಟ್ಟಾರೆ ಪೂರಾತತ್ವ ಶಾಸ್ತ್ರವು ಸಾಹಿತ್ಯ ಆಕರಗಳೊಡನೆ ಸಹಕರಿಸಿ ಸಮಗ್ರ ಭೂತಕಾಲದ ಇತಿಹಾಸ ರಚನೆಗೆ ನೆರವಾಗುವ ವಿಷಯವನ್ನು ನೀವು ಈ ಘಟಕದಲ್ಲಿ ಗಮನಿಸುವಿರಿ

## 2.1 ಪೀಠಿಕೆ

ಗತಕಾಲದ ಮಾನವನ ಬದುಕು ಮತ್ತು ಅವನ ಸಾಧನೆಯನ್ನು ಚಿತ್ರಿಸುವ ಶಾಸ್ತ್ರವೇ ಇತಿಹಾಸ. ಇತಿಹಾಸ ರಚನೆಗೆ ಆಧಾರಗಳು ಅತ್ಯಮೂಲ್ಯ ಸಾಮಗ್ರಿಗಳು. ಆಧಾರಗಳಿಲ್ಲದೆ ಇತಿಹಾಸ ರಚನೆ ಸಾಧ್ಯವಿಲ್ಲ. ಗತಕಾಲದಲ್ಲಿ ಬದುಕಿ ಬಾಳಿದ ಮಾನವ ತನ್ನ ಚಟುವಟಿಕೆಗಳ ಅಥವಾ ಸಾಧನೆಯ ಕುರುಹುಗಳಾಗಿ ದಾಖಲೆಗಳನ್ನು ಮತ್ತು ಅವಶೇಷಗಳನ್ನು ಬಿಟ್ಟು ಹೋಗಿರುತ್ತಾನೆ. ಈ ಆಧಾರಗಳೂ ಲಿಖಿತ ಅಥವಾ ಅಲಿಖಿತ ರೂಪದಲ್ಲಿರಬಹುದು. ಅವುಗಳನ್ನು ಸಂಶೋಧಿಸಿ ಕಲೆಹಾಕುವುದು ಇತಿಹಾಸಕಾರನ ಆದ್ಯಕರ್ತವ್ಯ. ಇದರಿಂದ ಇತಿಹಾಸ ರಚನೆ ಮತ್ತು ಪುನರ್ ರಚನೆ ಸಾಧ್ಯವಾಗುತ್ತದೆ. ಆಧಾರಗಳೇ ಚರಿತ್ರೆಯ ರಚನೆಗೆ ಅಡಿಗಲ್ಲು. ಐತಿಹಾಸಿಕ ಮಾಹಿತಿಯ ಅಭಾವದಿಂದಾಗಿ ಕಾಲಕಾಲದಲ್ಲಿ ಮಾನವ ಹಾಗೂ ನಾಗರೀಕತೆಗೆ ಸಂಬಂಧಿಸಿದ ಅನೇಕ ವಿಷಯಗಳು ಲಭ್ಯವಾಗಿಲ್ಲ. ಮಾನವನ ಉಗಮ, ನಾಗರೀಕತೆಯ ಬೆಳವಣಿಗೆಯಲ್ಲಿ ಕ್ರಮಿಸಿದ ರೀತಿ ಮತ್ತು ಪ್ರಾಚೀನ ಕಾಲದಲ್ಲಿ ನಡೆದ ಘಟನಾವಳಿಗಳು, ಚಿಂತನೆಗಳು, ಅವುಗಳ ಕಾರಣ, ಪರಿಣಾಮ ಮತ್ತು ನಾಗರೀಕತೆಯ ಮುಖ್ಯ ಮಜಲುಗಳು ಮೊದಲಾದವನ್ನು ಕುರಿತಾದ ಮಾಹಿತಿಯ ಅಭಾವದಿಂದ ಗತಕಾಲದ ಹೆಚ್ಚು ಭಾಗ ಬೆಳಕನ್ನು ಕಂಡಿಲ್ಲ. ತಿಳಿದಿರುವುದಕ್ಕಿಂತ ಅಗೋಚರವಾಗಿರುವುದೇ ಅತಿಹೆಚ್ಚು ಭಾಗ ಎನ್ನಬಹುದು. ಮಾಹಿತಿಯ ಅಭಾವವೇ ಇದಕ್ಕೆ ಕಾರಣವಾಗಿದೆ. ಮಾಹಿತಿಯ ಮೂಲ ಬಿಂದುಗಳೇ

ಆಧಾರಗಳು. ಆದ್ದರಿಂದ 'ಆಧಾರಗಳಿಲ್ಲದೆ ಇತಿಹಾಸವೂ ಇಲ್ಲ' ಎಂಬ ಉಕ್ತಿ ಸೂಕ್ತವಾಗಿದೆ. ಸತ್ಯಾಂಶಗಳನ್ನು ಪ್ರಕಟಿಸುವುದೇ ಚರಿತ್ರೆಕಾರನ ಮೂಖ್ಯ ಧ್ಯೇಯ. ಇತಿಹಾಸವು ಗತಕಾಲದ ಚಿಂತನೆ ಹಾಗೂ ಘಟನೆಗಳ ನೈಜ ಪ್ರತಿಬಿಂಬ. ಭೂತ ಕಾಲದಲ್ಲಿ ನಡೆದ ಸರ್ವ ಘಟನೆಗಳ ಸಮಗ್ರ ನಿರೂಪಣೆ ಸಾಧ್ಯವಿಲ್ಲ. ಅವುಗಳೆಲ್ಲವನ್ನೂ ಬರೆದು ಇತಿಹಾಸವೆಂದು ಕರೆಯುವುದರ ಪ್ರಯೋಜನ ಅತ್ಯಲ್ಪವಾದುದು. ಚಾರಿತ್ರಿಕ ಘಟನೆಗಳಿಗೆ ತಮ್ಮದೇ ಆದ ವೈಶಿಷ್ಟ್ಯವಿರುತ್ತದೆ. ಯಾವ ಚಿಂತನೆ ಮತ್ತು ಘಟನೆಗಳ ಅಧ್ಯಯನದಿಂದ ಮಾನವಕೋಟಿಯ ಮುನ್ನಡೆಗೆ ಒಳಿತಾಗುತ್ತದೋ ಅಂತಹ ಚಿಂತನೆ ಮತ್ತು ಘಟನೆಗಳನ್ನು ಇತಿಹಾಸದಲ್ಲಿ ಅಭ್ಯಸಿಸಲಾಗುತ್ತದೆ.

ಭಾರತವು ಆದಿ ಹಳೇ ಶಿಲಾಯುಗದ ಕಾಲದಿಂದಲೂ ಮಾನವನ ನಿವಾಸವಾಗಿದ್ದು ನಾಗರೀಕತೆಯನ್ನು ಪೋಷಿಸಿದ ದೇಶ. ಇದರ ಪ್ರಾಚೀನತೆ, ವೈಶಾಲ್ಯ ಮತ್ತು ಭಿನ್ನ ಭಿನ್ನ ಭಾಷೆಗಳ ಪರಿಣಾಮಗಳಿಂದ ಆಕರಗಳ ಶೋಧನೆ ಮತ್ತು ಇತಿಹಾಸ ರಚನೆಯ ಕಾರ್ಯದಲ್ಲಿ ಅನೇಕ ಕ್ಲಿಷ್ಟಕರವಾದ ಸಮಸ್ಯೆಗಳು ಕಂಡುಬರುತ್ತದೆ. ಈ ಕಾರಣದಿಂದ ಪ್ರಾಚೀನ ಭಾರತದಲ್ಲಿ ಇತಿಹಾಸ ರಚನೆಯ ಕಲೆ ಮತ್ತು ಅದಕ್ಕೆ ಬೇಕಾದ ಪ್ರಜ್ಞೆ ಅಷ್ಟಾಗಿ ಬೆಳೆದಿರಲಿಲ್ಲವೆಂದು ಹಲವು ಚರಿತ್ರೆಕಾರರು ಅಭಿಪ್ರಾಯಪಟ್ಟಿದ್ದಾರೆ. ಇವರಲ್ಲಿ ಮೊದಲನೆಯವನೇ ಆಲ್ಬರೂನಿ. ಇವನು ಹನ್ನೊಂದನೆಯ ಶತಮಾನದ ಆರಂಭದಲ್ಲಿ ಭಾರತಕ್ಕೆ ಬಂದಿದ್ದು ಭಾರತೀಯರಲ್ಲಿ ಐತಿಹಾಸ ಪ್ರಜ್ಞೆಯ ಕೊರತೆ ಇದೆ ಎಂದು ಹೇಳಿದ್ದಾನೆ. ಹತ್ತೊಂಬತ್ತನೇ ಶತಮಾನದಲ್ಲಿ ಭಾರತದ ಪ್ರಾಚೀನ ಇತಿಹಾಸದ ರಚನೆಯಲ್ಲಿ ತೊಡಗಿದ ಪಾಶ್ಚಾತ್ಯ ವಿದ್ವಾಂಸರು ಆಲ್ಬರೂನಿಯ ಅಭಿಪ್ರಾಯವನ್ನು ಸಮರ್ಥಿಸಿದ್ದಾರೆ. ಇದನ್ನು ಲೌಕಿಕ ದೃಷ್ಟಿಯಿಂದ ಗಮನಿಸಿದರೆ ಸತ್ಯವೂ ಹೌದು. ಪ್ರಾಚೀನ ಗ್ರೀಕರಲ್ಲಿದ್ದ ಪ್ರಖ್ಯಾತ ಇತಿಹಾಸಕಾರರಾದ ಹೆರೊಡೋಟಸ್, ಥುಸಿ ಡೈಡಸ್‌ರಂತಹ ಇತಿಹಾಸಕಾರರನ್ನು ಪ್ರಾಚೀನ ಭಾರತದಲ್ಲಿ ಕಾಣಬರುವುದಿಲ್ಲ. ಪ್ರಾಚೀನ ಭಾರತೀಯರು ಆಧ್ಯಾತ್ಮಿಕ ಹಾಗೂ ಮೋಕ್ಷಗಳಿಗೆ ಹೆಚ್ಚು ಗಮನ ಕೊಟ್ಟಿದ್ದು ತಮ್ಮ ದೇಶದ ಇತಿಹಾಸ ರಚನೆಗೆ ಸೂಕ್ತ ಗಮನ ಕೊಡಲಿಲ್ಲ ಎಂಬುವುದು ಈ ವಿದ್ವಾಂಸರ ವಾದವಾಗಿದೆ.

ಮೇಲ್ಕಂಡ ಅಭಿಪ್ರಾಯಗಳು ವಿವಾದಾಸ್ಪದ. ಈ ಅಭಿಪ್ರಾಯಗಳನ್ನು ಪೂರ್ಣ ಸತ್ಯಾಂಶಗಳೆಂದು ನಂಬಲಾಗದಿದ್ದರೂ ಸಂಪೂರ್ಣ ಉತ್ಪ್ರೇಕ್ಷೆಯಿಂದ ಕೂಡಿವೆಯೆಂದು ತಳ್ಳಿ ಹಾಕಲಾಗುವುದಿಲ್ಲ. ಪ್ರಾಚೀನ ಭಾರತದಲ್ಲಿ, ದಕ್ಷಿಣ ಭಾರತವು ಸೇರಿಕೊಂಡಹಾಗೆ, ಪ್ರಚಲಿತವಾಗಿದ್ದ ಸಾಮಾಜಿಕ ರೀತಿನೀತಿಗಳು, ಧಾರ್ಮಿಕ, ಆಧ್ಯಾತ್ಮಿಕ, ಮತೀಯ ಮತ್ತು ತತ್ವಶಾಸ್ತ್ರಗಳಿಗೆ ಸಂಬಂಧಿಸಿದ ಸಾಹಿತ್ಯವು ವಿಪುಲವಾಗಿ ದೊರಕುತ್ತದೆ. ರಾಜಕೀಯ ಘಟನಾವಳಿಗಳ ವೈಜ್ಞಾನಿಕ ನಿರೂಪಣೆಯಲ್ಲಿ ಕೊರತೆ ಕಾಣುತ್ತದೆ. ಪ್ರಾಚೀನ ಗ್ರೀಕರಂತೆ ಭಾರತದಲ್ಲಿ ಇತಿಹಾಸಕಾರರು ಉದಯಿಸಲಿಲ್ಲ. ಭಾರತದ ಪ್ರಾಚೀನತೆ, ವ್ಯಾಪ್ತಿ ಹಾಗೂ ಭಿನ್ನ ಭಿನ್ನ ಭಾಷೆಗಳು ಮತ್ತಿತರ ಕಾರಣಗಳಿಂದಾಗಿ, ಸಮಗ್ರವಾದ ಹಾಗೂ ವೈಜ್ಞಾನಿಕವಾದ ಐತಿಹಾಸಿಕ ಗ್ರಂಥಗಳ ಕೊರತೆಯನ್ನು ಕಾಣುತ್ತೇವೆ. ಆದರೆ ಈ ಕೊರತೆ ಇತಿಹಾಸ ರಚನೆಗೆ ಅನಿವಾರಣೀಯವಲ್ಲ. ಪ್ರಾಚೀನ ಭಾರತದಲ್ಲಿ ನಾನಾ ಭಾಷೆಗಳಲ್ಲಿ ರಚನೆಯಾಗಿರುವ ಹೇರಳವಾದ ಸಾಹಿತ್ಯ ರಾಶಿಯಲ್ಲಿ ಇತಿಹಾಸ ರಚನೆಗೆ ಬೇಕಾದ ಮಾಹಿತಿಗಳನ್ನು ಪರಿಶೋಧಿಸಿ ಪಡೆಯಬೇಕಾಗುತ್ತದೆ. ಇವುಗಳ ಜೊತೆಗೆ ಪರಕೀಯರ ಬರವಣಿಗೆಗಳು ಮತ್ತು ಪುರಾತತ್ವ ಆಕರಗಳು ಇತಿಹಾಸ ರಚನೆಗೆ ಪ್ರಮುಖ ಸಾಧನಗಳಾಗಿವೆ. ಇವುಗಳು ನಮ್ಮ ದೇಶದ ಇತಿಹಾಸ ರಚನೆಗೆ ನೆರವಾಗಿ ಐತಿಹಾಸಿಕ ದಾಖಲೆಗಳ ಕೊರತೆಯನ್ನು ನೀಗಿಸುತ್ತವೆ. ಐತಿಹಾಸಿಕ ಆಧಾರಗಳನ್ನು ಎರಡು ಭಾಗಗಳಾಗಿ ವಿಂಗಡಿಸಿಕೊಳ್ಳಬಹುದು. : (1) ಬರವಣಿಗೆ ಆಧಾರಗಳು ಅಥವಾ ಸಾಹಿತ್ಯ ಆಧಾರಗಳು ಮತ್ತು (2) ಪ್ರಾಕ್ತನ ಅಥವಾ ಪುರಾತತ್ವ ಆಧಾರಗಳು. ಮೊದಲಿಗೆ ಪುರಾತತ್ವ ಆಧಾರಗಳನ್ನು ಪರಿಚಯಿಸಿಕೊಳ್ಳೋಣ.

## 2.2 ಪ್ರಾಕ್ತನ ಆಧಾರಗಳು

ಪುರಾತತ್ವ ಸಂಶೋಧನೆಗಳು ಇತಿಹಾಸ ರಚನೆಗೆ ಬಹು ಉಪಯುಕ್ತ ಮಾಹಿತಿಯನ್ನು ಒದಗಿಸುತ್ತವೆ. ಮಹಮ್ಮದೀಯರ ಆಡಳಿತ ಪೂರ್ವ ಇತಿಹಾಸ ರಚನೆಗೆ ಪ್ರಾಚೀನ ವಸ್ತುಗಳ ಪರಿಶೋಧನೆ ಮತ್ತು ಸಂಶೋಧನೆ ಮುಖ್ಯವಾದ ಆಧಾರಗಳಾಗಿವೆ. ಸರ್ ವಿಲಿಯಂ ಜೋನ್ಸ್‌ರವರಿಂದ ಕ್ರಿ.ಶ. 1784 ರಲ್ಲಿ ಕಲ್ಕತ್ತದಲ್ಲಿ ಸ್ಥಾಪಿತವಾದ ಏಷ್ಯಾಟಿಕ್ ಸೊಸೈಟಿ ಸಂಶೋಧನೆಗೆ ಸಂಬಂಧಿಸಿದ ಬಹು ಮುಖ್ಯವಾದ ಘಟನೆ. ಜೇಮ್ಸ್ ಪಿನ್ಸೆಪ್ ಎಂಬ ಸಂಶೋಧಕ ಏಳು ವರ್ಷಗಳ ನಿರಂತರ ಶ್ರದ್ಧೆ ಮತ್ತು ಶ್ರಮದಿಂದ ಶತಮಾನಗಳ ಕಾಲಮೂಖವಾಗಿದ್ದ ಅಶೋಕನ ಹಲವು ಶಾಸನಗಳನ್ನು ಓದಿ ಕ್ರಿ.ಶ. 1837 ರಲ್ಲಿ ಏಷ್ಯಾಟಿಕ್ ಸಂಘದ ಪತ್ರಿಕೆಯಲ್ಲಿ ಪ್ರಕಟಿಸಿದರು. ಸಂಶೋಧನಾ ದಿಶೆಯಲ್ಲಿ ಇದು ಒಂದು ಮುಖ್ಯ ಮೈಲಿಗಲ್ಲು. ಇದಾದ ತರುವಾಯ ಅನೇಕ ವಿದ್ವಾಂಸರು ಈ ದಿಕ್ಕಿನಲ್ಲಿ ಕಾರ್ಯ ನಿರತರಾದರು. ಬ್ರಿಟಿಷ್ ಸರ್ಕಾರ ಕ್ರಿ.ಶ. 1862 ರಲ್ಲಿ ಮೇಜರ್ ಜನರಲ್ ಅಲೆಗ್ಸಾಂಡರ್ ಕನ್ನಿಂಗ್ ಹ್ಯಾಮ್‌ನನ್ನು ಪುರಾತತ್ವ ಶಾಖೆಯ ಅಧಿಕಾರಿಯನ್ನಾಗಿ ನೇಮಿಸಿತು. ಇವರ ಪ್ರಯತ್ನದ ಫಲವಾಗಿ ದೀರ್ಘ ಕಾಲಾವಧಿಯವರೆಗೆ ಕಣ್ಮರೆಯಾಗಿದ್ದು ಮರೆತು ಹೋಗಿದ್ದ ಅನೇಕ ಸ್ಮಾರಕಗಳು, ಶಾಸನಗಳೂ, ಕಲಾಭಗ್ನಾವಶೇಷಗಳೂ ಕ್ರಮೇಣ ವಿದ್ವಾಂಸರ ಗಮನಕ್ಕೆ ಬಂದವು. ಕ್ರಮೇಣ ಪ್ರಾಕ್ಚಾರಿತ್ರಿಕ ಸಂಶೋಧನೆಯ ಮಹತ್ವವನ್ನು ಮನಗಂಡ ಆಂಗ್ಲ ಸರ್ಕಾರ ಲಾರ್ಡ್ ಕರ್ಜನ್ ವೈಸರಾಯಿಯಾಗಿದ್ದಾಗ ಕ್ರಿ.ಶ. 1902 ರಲ್ಲಿ ಇದಕ್ಕಾಗಿ ಒಂದು ಪ್ರತ್ಯೇಕ ಶಾಖೆಯನ್ನು ಸೃಷ್ಟಿಸಿ ಸರ್ ಜಾನ್ ಮಾರ್ಷಲ್ ಎಂಬುವರನ್ನೂ ಈ ಇಲಾಖೆಯ ಮುಖ್ಯಾಧಿಕಾರಿಯನ್ನಾಗಿ ನೇಮಿಸಿತು. ಅನಂತರ ಪ್ರಾಚೀನ ನಿವೇಶನಗಳ ಕ್ರಮ ಬದ್ಧ ಸಂಶೋಧನೆ ಭಾರತಾದ್ಯಂತ ಪ್ರಾರಂಭವಾದವು. ಪ್ರಾಕ್ತನ ಆಧಾರಗಳನ್ನು ಕ್ರಮಬದ್ಧ ವ್ಯಾಸಂಗಕ್ಕಾಗಿ ಭೂಸಂಶೋಧನೆಗಳು ಅಥವಾ ಉತ್ಖನನ, ಶಾಸನಗಳು, ನಾಣ್ಯಗಳು, ಕಟ್ಟಡಗಳ ಭಗ್ನಾವಶೇಷಗಳು ಮತ್ತು ಸ್ಮಾರಕಗಳು ಎಂಬುದಾಗಿ ವಿಂಗಡಿಸಿಕೊಳ್ಳಬಹುದು.

### *2.2.1 ಉತ್ಖನನ ಅಥವಾ ಭೂಸಂಶೋಧನೆಗಳು*

ಇತಿಹಾಸ ಪೂರ್ವಕಾಲ ಅಥವಾ ಶಿಲಾಯುಗದ ನಾಗರೀಕತೆಯನ್ನು ಅರಿಯಲು ಭೂಉತ್ಖನನದಿಂದ ದೊರೆಯುವ ಮಾಹಿತಿಯಿಂದ ಮಾತ್ರ ಸಾಧ್ಯ. ಉತ್ತರ ಭಾರತದಲ್ಲಿ ಪ್ರಾಚೀನ ನಿವೇಶನಗಳ ಸಂಶೋಧನ ಕಾರ್ಯಗಳು ನಡೆದ ರೀತಿಯಲ್ಲೇ, ದಕ್ಷಿಣ ಭಾರತದಲ್ಲೂ ಅನೇಕ ಐತಿಹಾಸಿಕ ನಿವೇಶನಗಳ ಸಂಶೋಧನೆ ನಡೆದಿದೆ. ದಕ್ಷಿಣ ಭಾರತದ ದಖನ್ ಭೂಭಾಗವು ಮಾನವನ ಅತ್ಯಂತ ಪ್ರಾಚೀನ ನಿವಾಸವಾಗಿರಬೇಕೆಂದು ಅಭಿಪ್ರಾಯ ನೀಡಲಾಗಿದೆ. ಕ್ರಿ.ಶ. 1836 ಸುಮಾರಿನಲ್ಲಿ ಬಳ್ಳಾರಿ ಮತ್ತು ಉತ್ತರ ಕರ್ನಾಟಕದ ಹಲವು ಭಾಗಗಳಲ್ಲಿ ಅಧ್ಯಯನ ನಡೆಸಿದ ಭೂಗರ್ಭಶಾಸ್ತ್ರಜ್ಞ, ನ್ಯೂಬೋಲ್ಡ್ ಎಂಬುವರು ಆ ಪ್ರದೇಶದ ಬಂಡೆಮಯ ಪ್ರದೇಶವು ಪ್ರಾಚೀನ ಮಾನವನ ನಿಗೂಢ ನಿವಾಸವಾಗಿರಬೇಕೆಂದು ಅಭಿಪ್ರಾಯ ಪಟ್ಟಿದ್ದಾರೆ. ಆರ್ಕಿಯಾಲಾಜಿಕಲ್ ಸರ್ವೆ ಆಫ್ ಇಂಡಿಯ ಇಲಾಖೆ, ಕರ್ನಾಟಕ ರಾಜ್ಯ ಪುರಾತತ್ವ ಇಲಾಖೆ ಮತ್ತು ಪೂಣೆಯ ಡೆಖನ್ ಕಾಲೇಜಿನ ಪುರಾತತ್ವ ಇಲಾಖೆಯವರು ಉತ್ಖನನಗಳನ್ನು ಮಾಡಿ ಹಲವಾರು ಶೋಧನೆಗಳನ್ನು ಬೆಳಕಿಗೆ ತಂದಿದ್ದಾರೆ. ಮಧುರೈ, ಆದಿತ್ಯನಲ್ಲೂರು, ತಿನ್ನವೆಲ್ಲಿ ಹಾಗೂ ಕರ್ನಾಟಕ ರಾಜ್ಯದ ಸಂಗನಕಲ್ಲು, ಚಿಕ್ಕಲಕೋಟೆ, ಹಳ್ಳೂರು, ಚಂದ್ರವಳ್ಳಿ ಮತ್ತು ಬ್ರಹ್ಮಗಿರಿ ನಿವೇಶನಗಳಲ್ಲಿ ನಡೆದ ಸಂಶೋಧನೆಯ ಪರಿಣಾಮವಾಗಿ ಶಿಲಾಯುಗ ಮತ್ತು ತಾಮ್ರ ಶಿಲಾಯುಗದ ನಾಗರೀಕತೆಯ ಅಂಶಗಳು ಬೆಳಕಿಗೆ ಬಂದವು. 1945 ರಲ್ಲಿ ಪಾಂಡಿಚೇರಿಯ ಸಮೀಪದ ಅರಿಕ ಮೇಡುವಿನಲ್ಲಿ ನಡೆದ ಪ್ರಾಕ್ತನ ಸಂಶೋಧನೆಯಿಂದ ಅಲ್ಲಿ ಕ್ರಿ.ಪೂ. ಒಂದು ಮತ್ತು ಕ್ರಿ.ಶ. ಒಂದು ಎರಡನೇ ಶತಮಾನಗಳಲ್ಲಿದ್ದ ನಾಗರೀಕತೆಯ ಬಗ್ಗೆ ತಿಳಿದು ಬಂದಿತು. ಅಲ್ಲದೆ ಪ್ರಾಚೀನ ದಕ್ಷಿಣ ಭಾರತ ಮತ್ತು ರೋಮನ್ ಸಾಮ್ರಾಜ್ಯದೊಡನೆ ಏರ್ಪಟ್ಟಿದ್ದ ವಾಣಿಜ್ಯ ಸಂಬಂಧ ಸ್ಥಿರಪಟ್ಟಿತು. ಹಂಪೆಯಲ್ಲಿ ನಡೆಯುತ್ತಿರುವ ಉತ್ಖನನವು ವಿಜಯನಗರ ಕಾಲದ ಹಲವಾರು ಪ್ರಮುಖ ಕಟ್ಟಡಗಳ ಅವಶೇಷಗಳನ್ನು ಹೊರಚೆಲ್ಲಿದೆ.

ಅವುಗಳಲ್ಲಿ ಮುಖ್ಯವಾದವು ಅರಮನೆಯ ಅವಶೇಷಗಳು, ಕಲ್ಯಾಣಿಗಳು ಮತ್ತು ದೇಗುಲಗಳು ಪತ್ತೆಯಾಗಿವೆ. ತಲಕಾಡು, ವಟಗಲ್, ಸನ್ನತಿ ಮತ್ತು ಶಿರುವಾಳಗಳಲ್ಲಿ ಉತ್ಖನನಗಳು ನಡೆದು ಹೊಸ ಅಂಶಗಳು ಬೆಳಕು ಕಂಡಿವೆ. ಮೈಸೂರು ಜಿಲ್ಲೆಯ ತಲಕಾಡಿನಲ್ಲಿ ನಡೆದ ಸಂಶೋಧನೆಯಿಂದ ನವಶಿಲಾಯುಗ ಮತ್ತು ಗಂಗರ ಕಾಲದ ಇತಿಹಾಸದ ಬಗೆಗೆ ವಿಪುಲ ಮಾಹಿತಿಗಳು ದೊರಕಿವೆ. ಆರಂಭದ ಪುರಾತತ್ವ ಶಾಸ್ತ್ರಜ್ಞರಾದ ಬಿ.ಎಲ್. ರೈಸ್, ಮೆಡೋಸ್ ಟೇಲರ್, ಡಾ. ಎಂ.ಎಚ್. ಕೃಷ್ಣ ಮತ್ತು ಮಾರ್ಟಿಮರ್ ವ್ಹೀಲರ್ ಸೇವೆ ಈ ದಿಶೆಯಲ್ಲಿ ಶ್ಲಾಘನೀಯವಾದುದು. ಇವರ ಪ್ರಯತ್ನದ ಫಲವಾಗಿ ಉತ್ಖನನಗಳು ಪ್ರಾಚೀನ ನೆಲೆಗಳ ಬಗ್ಗೆ ಪ್ರಥಮ ಮಾಹಿತಿಯನ್ನು ಒದಗಿಸಿ ಇತಿಹಾಸ ಪುನಾರಚನೆಗೆ ನೆರವಾಗಿವೆ.

### 2.2.2 *ಶಾಸನಾಧಾರಗಳು*

ಪ್ರಾಚೀನ ಭಾರತದ ಇತಿಹಾಸ ರಚನೆಗೆ ಶಾಸನಗಳು ಅಮೂಲ್ಯವಾದ ಆಧಾರಗಳಾಗಿವೆ. ಶಾಸನಗಳನ್ನು ಶಿಲೆ ಮತ್ತು ತಗಡು ತಾಮ್ರದ ಮೇಲೆ ಕೆತ್ತಲಾಗಿದೆ. ಶಿಲಾಶಾಸನಗಳು ಹಸ್ತಕ್ಷೇಪದಿಂದ ಹೊರತಾಗಿದೆ. ಭಾರತೀಯ ಭಾಷೆಗಳಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ಶಾಸನಗಳು ದೊರೆತಿವೆ. ಅಶೋಕ ಚಕ್ರವರ್ತಿ ಪ್ರಪ್ರಥಮವಾಗಿ ಶಾಸನ ಪದ್ಧತಿಯನ್ನು ಜಾರಿಗೆ ತಂದನು. ಅಶೋಕನ ಶಾಸನಗಳು ಇಲ್ಲದಿದ್ದ ಪಕ್ಷದಲ್ಲಿ ಅವನ ಅಮೋಘ ಸಾಧನೆಗಳು ಸಾಕಷ್ಟು ಪ್ರಮಾಣದಲ್ಲಿ ಗೋಚರಿಸುತ್ತಿರಲಿಲ್ಲ. ಈ ಕಾರಣದಿಂದಾಗಿ ಅಶೋಕನನ್ನು ಸ್ವಕಥನಕಾರನೆಂದು ವಿದ್ವಾಂಸರು ಬಣ್ಣಿಸಿದ್ದಾರೆ. ಭಾರತೀಯ ಶಾಸನಗಳನ್ನು ಸ್ಥೂಲವಾಗಿ ಪ್ರಶಸ್ತಿಗಳು ಮತ್ತು ದಾನಶಾಸನಗಳೆಂದು ವಿಂಗಡಿಸಬಹುದು. ಸಮುದ್ರ ಗುಪ್ತನ ಅಲಹಾಬಾದ್ ಪ್ರಶಸ್ತಿ ಸ್ಥಂಭಶಾಸನ ಅಧಿಕೃತ ಶಾಸನಗಳ ಉತ್ತಮ ಉದಾಹರಣೆಯಾಗಿದೆ. ಹಾಗೆಯೇ ಇಮ್ಮಡಿ ಪುಲಕೇಶಿಯ ಐಹೊಳೆ ಶಾಸನ, ಹೊಯ್ಸಳ ವಿಷ್ಣುವರ್ಧನನ ಬೇಲೂರು ದೇವಸ್ಥಾನದ ಶಾಸನಗಳು ಇನ್ನಿತರ ಅಧಿಕೃತ ಶಾಸನಗಳಿಗೆ ಉದಾಹರಣೆಗಳಾಗಿದೆ. ಪಲ್ಲವ ಮಹೇಂದ್ರವರ್ಮನ ಕಾಲದ ಕುಡಿಮಿಯಾಮಲೈ ಪ್ರಾಕೃತ ಶಾಸನವು ದಕ್ಷಿಣಾತ್ಯ ಸಂಗೀತದ ರೀತಿ ನೀತಿಯನ್ನು ಹಾಗೂ ಬೆಳವಣಿಗೆಯನ್ನು ಅರಿಯಲು ಮುಖ್ಯ ದಾಖಲೆಗಳಾಗಿದೆ.

ದಾನಶಾಸನಗಳ ಸಂಖ್ಯೆ ಉಳಿದೆಲ್ಲಾ ಶಾಸನಗಳಿಗಿಂತಲೂ ಅಧಿಕವಾಗಿವೆ. ಇವುಗಳು ದಾನದತ್ತಿ ನೀಡಿದ ಬಗೆಗೆ, ದೇವಾಲಯ ಕೆರೆಗಳನ್ನು ಕಟ್ಟಿಸಿದ, ಹಾಗೂ ವೀರರ ಮತ್ತು ಸಹಗಮನ ಆಚರಿಸಿದವರ ಸ್ಮರಣಾರ್ಥವಾಗಿ ಕೆತ್ತಿಸಲ್ಪಟ್ಟವು. ದಕ್ಷಿಣ ಭಾರತದಲ್ಲಿ ಬ್ರಾಹ್ಮಿ, ಪ್ರಾಕೃತ, ಸಂಸ್ಕೃತ, ಕನ್ನಡ, ತಮಿಳು, ತೆಲುಗು, ಮಲೆಯಾಳಂ ಮತ್ತು ಪರ್ಶಿಯನ್ ಭಾಷೆಗಳಲ್ಲಿ ರಚಿಸಿರುವ ಶಾಸನಗಳು ದೊರೆತಿವೆ. ಕನ್ನಡ, ತಮಿಳು, ಸಂಸ್ಕೃತ, ತೆಲುಗು ಭಾಷೆಗಳಲ್ಲಿ ರಚಿತವಾಗಿರುವ ಶಿಲಾಶಾಸನಗಳ ಮತ್ತು ತಾಮ್ರ ಶಾಸನಗಳ ಸಂಖ್ಯೆ ಅಧಿಕವಾಗಿವೆ. ಇತಿಹಾಸ ರಚನೆಗೆ ಇವುಗಳನ್ನು ಉಪಯೋಗಿಸುವ ಮೊದಲು ಅವುಗಳನ್ನು ಸೂಕ್ಷ್ಮ ಹಾಗೂ ಕೂಲಂಕುಷವಾಗಿ ಪರಿಶೀಲಿಸ ಬೇಕಾಗುತ್ತದೆ. ಅವುಗಳಲ್ಲಿ ಅನೇಕ ನ್ಯೂನತೆಗಳೂ ಇರಲು ಸಾಧ್ಯ. ಅವುಗಳು ಆಸ್ಥಾನ ಕವಿಗಳಿಂದ ರಚಿತವಾಗಿರುವುದರಿಂದ ಸಾಮಾನ್ಯವಾಗಿ ಉತ್ಪ್ರೇಕ್ಷೆ ಅದರಲ್ಲೂ ದಾನಶಾಸನಗಳಲ್ಲಿ ಹಲವು ಸಂದರ್ಭಗಳಲ್ಲಿ ಕೂಟ ಶಾಸನಗಳೂ ಸಹ ದೊರೆತಿವೆ. ಶಾಸನಗಳು ಸ್ಥಳ ಬದಲಾವಣೆಯಾಗಿರುವ ಸಂದರ್ಭಗಳೂ ಉಂಟು. ಈ ಪರಿಸ್ಥಿತಿಯು ತಾಮ್ರ ಶಾಸನಗಳಿಗೆ ಸಂಬಂಧಿಸಿದಂತೆ ಹೆಚ್ಚು ಅನ್ವಯಿಸುತ್ತದೆ. ಆದರೆ ಶಿಲಾಶಾಸನಗಳು ಮೇಲ್ಕಂಡ ದೋಷಗಳಿಂದ ಕೂಡಿರದಿದ್ದರೂ ಇತರ ದೋಷಗಳನ್ನು ಕಾಣಬಹುದು. ಕಾಲಚಕ್ರಕ್ಕೆ ಸಿಲುಕಿ ಅವು ಬಹುಕಾಲ ಅನಾಥವಾಗಿದ್ದು ಮಳೆ ಬಿಸಿಲುಗಳಿಂದಾಗಿ ಸವೆದುಹೋಗಿರುವ ಕಾರಣ ಅವುಗಳ ಬರವಣಿಗೆಯ ಪೂರ್ಣ ಪಾಠ ಲಭ್ಯವಾಗದಿರುವ ಸಂದರ್ಭಗಳುಂಟು.

ಪ್ರಾಚೀನ ದಕ್ಷಿಣ ಭಾರತದಲ್ಲಿ ಆಳಿದ ಅನೇಕ ಸಂತತಿಗಳ ಇತಿಹಾಸದ ಪುನರ್ ರಚನೆಗೆ ಶಾಸನಗಳೇ ಅಧಿಕೃತ ದಾಖಲೆಗಳಾಗಿವೆ. ಶಾತವಾಹನ, ಗಂಗ, ಪಲ್ಲವ, ಚಾಲುಕ್ಯ, ಚೋಳ,

ಪಾಂಡ್ಯ ಮತ್ತು ಹೊಯ್ಸಳ ರಾಜಮನೆತನಗಳ ಇತಿಹಾಸ ರಚನೆಗೆ ಅಧಿಕೃತ ದಾಖಲೆಗಳಾಗಿವೆ. ವಂಶಾನುಕ್ರಮಣಿಕೆ, ಜಯ, ಪರಾಜಯ, ರಾಜ್ಯಗಳ ಎಲ್ಲೆಗಳು ರಾಜರ ಆಳ್ವಿಕೆಯ ಕಾಲ ಮುಂತಾದ ಸಂಗತಿಗಳನ್ನು ಶಾಸನಗಳಿಂದಲೇ ಪತ್ತೆಹಚ್ಚಬೇಕಾಗಿದೆ. ಶಾಸನಗಳು ಸ್ಥಳೀಯ ಆಡಳಿತ, ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿಗಳ ಚಿತ್ರಗಳನ್ನು ಪ್ರತಿಬಿಂಬಿಸುತ್ತವೆ.

ದಕ್ಷಿಣ ಭಾರತದಲ್ಲಿ ವಿಶೇಷವಾಗಿ ಕರ್ನಾಟಕದಲ್ಲಿ ದೊರೆತಿರುವ ಶಾಸನಗಳಲ್ಲಿ ಮೌರ್ಯ ಅಶೋಕಚಕ್ರವರ್ತಿಯು ಬ್ರಾಹ್ಮಿ ಲಿಪಿಯಲ್ಲಿ ಕೆತ್ತಿಸಿರುವ ಬಂಡೆಗಲ್ಲು ಶಾಸನಗಳೇ ಪ್ರಪ್ರಥಮವಾದವು. ಅಶೋಕನ ಶಾಸನಗಳು, ಚಿತ್ರದುರ್ಗ ಜಿಲ್ಲೆಯ ಚಂದ್ರವಳ್ಳಿ, ಬ್ರಹ್ಮಗಿರಿ, ಜಟಿಂಗ ರಾಮೇಶ್ವರ, ರಾಯಚೂರು ಜಿಲ್ಲೆಯ ಮಸ್ಕಿ ಮತ್ತು ಕೊಪ್ಪಳ, ಬಳ್ಳಾರಿ ಜಿಲ್ಲೆಯ ನಿಟ್ಟೂರು, ಉದೇಗೊಳಂ, ಗುಲ್ಬರ್ಗಾ ಜಿಲ್ಲೆಯ ಸನ್ನತಿ ಎಂಬ ಸ್ಥಳಗಳಲ್ಲಿ ದೊರೆತಿವೆ. ಅಶೋಕನ ಶಾಸನಗಳಲ್ಲೆಲ್ಲಾ ಅವನ ಬಿರುದುಗಳನ್ನೇ ಪ್ರಸ್ತಾಪಿಸಲಾಗಿದ್ದು ಮಸ್ಕಿಯಲ್ಲಿ ಸಿಕ್ಕಿದ ಶಾಸನದಲ್ಲಿ ಪ್ರಪ್ರಥಮವಾಗಿ ಅವನ ಹೆಸರು ದೊರೆತದ್ದು ಗಮನಾರ್ಹ ಸಂಗತಿಯಾಗಿದೆ. ಕರ್ನಾಟಕವು ಮೌರ್ಯ ಸಾಮ್ರಾಜ್ಯದ ಭಾಗವಾಗಿದ್ದ ಸಂಗತಿಯು ಈ ಶಾಸನಗಳಿಂದ ಖಚಿತವಾಗಿದೆ. ಅನಂತರ ದಖನ್ನಿನಲ್ಲಿ ವಿಶಾಲ ರಾಜ್ಯ ಸ್ಥಾಪಿಸಿದ ಶಾತವಾಹನರು ಶಾಸನ ಹಾಕಿಸುವ ಪರಂಪರೆಯನ್ನು ಮುಂದುವರೆಸಿಕೊಂಡು ಬಂದರು. ಅನಂತರ ಅನೇಕ ದಕ್ಷಿಣಭಾರತ ರಾಜಮನೆತನಗಳು ಈ ಸಂಪ್ರದಾಯವನ್ನು ಮುಂದುವರಿಸಿಕೊಂಡು ಬಂದರು. ಬನವಾಸಿ ಕದಂಬರ ಕಾಲದ ಹಲ್ಮಿಡಿಯ ಕ್ರಿ.ಶ. 450 ರ ಸುಮಾರಿನ ಶಾಸನವು ಕನ್ನಡ ಲಿಪಿಯಲ್ಲಿ ಕೆತ್ತಿಸಿದ ಪ್ರಾಚೀನ ಶಾಸನವಾಗಿದೆ. ಗಂಗ ಅರಸ ದುರ್ವಿನೀತನ ಹೆಬ್ಬಟ ಶಾಸನ, ಭೂವಿಕ್ರಮನ ಹಲ್ಲಗೆರೆ ಶಾಸನ, ಮಾರಸಿಂಹನ ಕೂಡ್ಲೂರು ಶಾಸನಗಳೂ; ಬಾದಾಮಿ ಚಾಳುಕ್ಯ, ಎರಡನೇ ಪುಲಿಕೇಶಿಯ ಐಹೊಳೆ ಶಾಸನವು ರವಿಕೀರ್ತಿ ಎಂಬ ಜೈನಕವಿಯಿಂದ ರಚಿಸಲ್ಪಟ್ಟಿದ್ದು ಈ ಶಾಸನದಲ್ಲಿ ಕಲಿ ಮತ್ತು ವಿಕ್ರಮ ಶಕೆಯನ್ನು ನಮೂದಿಸಲಾಗಿದೆ ಮತ್ತು ಚಾಲುಕ್ಯ ಸಂತತಿಯ ಉಗಮ ಮತ್ತು ಪುಲಿಕೇಶಿಯ ದಿಗ್ವಿಜಯವನ್ನು ವರ್ಣಿಸಲಾಗಿದೆ. ಹಾಗೆಯೇ ರಾಷ್ಟ್ರಕೂಟ ಸಂತತಿಯ ಸ್ಥಾಪಕ ದಂತಿದುರ್ಗನ ಸಾಧನೆಗಳನ್ನು ಎಲ್ಲೋರ ತಾಮ್ರ ಶಾಸನಗಳು ವಿವರಿಸುತ್ತವೆ. ಅಮೋಘವರ್ಷನ ಸಂಜನ್ ತಾಮ್ರ ಶಾಸನಗಳು 3ನೇ ಗೋವಿಂದನ ಉತ್ತರದ ದಿಗ್ವಿಜಯಗಳನ್ನು ವಿವರಿಸುತ್ತವೆ. ಬುಂದೇಲ್‌ಖಂಡದ ಬಳಿ ಜೂರಾ ಎಂಬಲ್ಲಿ ದೊರೆತಿರುವ ರಾಷ್ಟ್ರಕೂಟ 3ನೇ ಕೃಷ್ಣನ ಕನ್ನಡ ಶಾಸನವು ಅವನ ಸಾಧನೆಗಳನ್ನು ನಿರೂಪಿಸುತ್ತವೆ. ಹೊಯ್ಸಳ ವಿಷ್ಣುವರ್ಧನನ ಬೇಲೂರು ದೇವಾಲಯದ ಶಾಸನ, ಎರಡನೇ ವೀರಬಲ್ಲಾಳನ ಗದುಗಿನ ಶಾಸನ, ಮೂರನೇ ನರಸಿಂಹನ ಕಾಲದ ಅರಕಲಗೂಡು ತಾಲ್ಲೂಕಿನ ಶಾಸನಗಳು ಪ್ರಮುಖವಾದವು. ಹೊಯ್ಸಳರ ಶಾಸನಗಳಲ್ಲಿ ಆಡಳಿತ ವ್ಯವಸ್ಥೆ, ವ್ಯವಸಾಯಕ್ಕಾಗಿ ಕಟ್ಟಿಸಿದ ಕೆರೆಕಟ್ಟೆ, ಕಾಲುವೆಗಳ ವಿವರ, ವ್ಯಾಪಾರ ಕೈಗಾರಿಕೆಗಳೂ ಹಾಗೂ ಸಂಘ ಸಂಸ್ಥೆಗಳ ವರ್ಣನೆಗಳು ದೊರೆಯುತ್ತವೆ. ಚೋಳ ಪರಾಂತಕನ ಉತ್ತರ ಮೇರೂರು ಶಾಸನವು ಸ್ಥಳೀಯ ಆಡಳಿತದ ಸ್ವರೂಪ ಮತ್ತು ಕಾರ್ಯ ವಿಧಾನಗಳ ಕುರಿತು ಅಮೂಲ್ಯ ವಿವರಣೆಗಳನ್ನೊಳಗೊಂಡಿದೆ. ಶಾಸನಗಳ ಭಾಷೆ ಹಾಗೂ ಶೈಲಿ, ಭಾಷಾಶಾಸ್ತ್ರ ಮತ್ತು ಸಾಹಿತ್ಯದ ಅಧ್ಯಯನಕ್ಕೆ ಅತ್ಯಂತ ಉಪಯುಕ್ತವಾಗಿದೆ. ಹೀಗೆ ಶಾಸನಗಳು ಆ ಕಾಲದ ಸಾಮಾಜಿಕ, ಧಾರ್ಮಿಕ, ಆರ್ಥಿಕ ಮತ್ತು ರಾಜಕೀಯ ಚಿತ್ರವನ್ನು ಚಿತ್ರಿಸಿಕೊಳ್ಳಲು ಅತ್ಯಂತ ನಿಖರವಾದ ಮತ್ತು ಅಮೂಲ್ಯ ಆಧಾರಗಳಿವೆ.

### 2.2.3 *ನಾಣ್ಯಾಧಾರಗಳು*

ಶಾಸನಗಳಂತೆ ನಾಣ್ಯಗಳೂ ಇತಿಹಾಸ ರಚನೆಗೆ ಸಹಕಾರಿಯಾಗಿವೆ. ಅತ್ಯಂತ ಪ್ರಾಚೀನ ಕಾಲದಿಂದ ಬಗೆ ಬಗೆಯ ನಾಣ್ಯಗಳು ದೇಶದ ನಾನಾ ಭಾಗಗಳಲ್ಲಿ ಚಲಾವಣೆಯಲ್ಲಿದ್ದವು. ತಾಮ್ರ, ಚಿನ್ನ, ಬೆಳ್ಳಿ ಮತ್ತು ಸೀಸ ಲೋಹಗಳನ್ನು ನಾಣ್ಯ ತಯಾರಿಕೆಯಲ್ಲಿ ಬಳಸಲಾಗಿದೆ. ಪ್ರಾರಂಭದಲ್ಲಿ ಮುದ್ರಾಂಕಿತ ನಾಣ್ಯಗಳ ತಯಾರಿಕೆ ಚಲಾವಣೆಗೆ ಬಂದಿತು. ನಾಣ್ಯಗಳ ಸಹಾಯದಿಂದ ರಾಜರ ಆಳ್ವಿಕೆಯನ್ನು ನಿರ್ಧರಿಸಬಹುದಾಗಿದೆ. ಅಲ್ಲದೆ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗಳನ್ನು

ಊಹಿಸಬಹುದು. ಹಲವು ನಾಣ್ಯಗಳ ಮೇಲಿರುವ ಬರವಣಿಗೆಯ ಕಾಲ ಮತ್ತು ಘಟನೆಗಳನ್ನು ಅರಿಯಲು ತುಂಬ ಸಹಾಯವಾಗಿವೆ. ವ್ಯಾಪಾರ ವಾಣಿಜ್ಯಗಳ ವಿವರಗಳನ್ನೂ ನಾಣ್ಯಗಳ ಸಹಾಯದಿಂದ ಗ್ರಹಿಸಬಹುದು. ಭಾರತದ ನಾನಾ ಭಾಗಗಳಲ್ಲಿ ದೊರಕಿರುವ ರೋಮನ್ (ದಿನೇರಿ)ನಾಣ್ಯಗಳ ಆಧಾರದಿಂದ ವ್ಯಾಪಾರದ ನಿಕಟ ಸಂಪರ್ಕವನ್ನು ಗ್ರಹಿಸುವುದು ಸುಲಭ. ಅಗಸ್ಟಸ್ ಮತ್ತು ಟೈಬೀರಿಯಸ್ ಚಕ್ರವರ್ತಿಗಳ ಕಾಲದ ಇನ್ನೂರು ರೋಮನ್ ನಾಣ್ಯಗಳು ಇತ್ತೀಚೆಗೆ ಬೆಂಗಳೂರು ವಿಮಾನ ನಿಲ್ದಾಣದ ಹತ್ತಿರ ಸಿಕ್ಕಿವೆ. ಇದರಿಂದ ಈ ಭಾಗದ ಪ್ರಾಚೀನತೆ ಮತ್ತು ರೋಮ್ ದೇಶದೊಡನೆ ಈ ಭಾಗಕ್ಕಿದ್ದ ವಾಣಿಜ್ಯ ಸಂಬಂಧವನ್ನು ಊಹಿಸಬಹುದು. ಪ್ರಾಚೀನ ಕಾಲದಲ್ಲಿದ್ದ ಅನೇಕ ಸಣ್ಣಪುಟ್ಟ ರಾಜ್ಯಗಳ ಇತಿಹಾಸವನ್ನು ನಿರ್ಧರಿಸಲು ನಾಣ್ಯಗಳೇ ಮುಖ್ಯ ಆಧಾರಗಳಾಗಿವೆ. ಗಣರಾಜ್ಯಗಳ ವಿವರಗಳೂ ನಾಣ್ಯಗಳಲ್ಲಿ ಸಿಗುತ್ತವೆ. ಇಂಡೊಗ್ರೀಕ್, ಪಾರ್ಥಿಯನ್ ಮತ್ತು ಕುಶಾನರ ಆಳ್ವಿಕೆಯನ್ನು ಅರಿಯಲು ನಾಣ್ಯಗಳೇ ಬಹು ಮುಖ್ಯ ಆಧಾರಗಳಾಗಿವೆ.

ದಕ್ಷಿಣ ಭಾರತದ ಚರಿತ್ರೆ ರಚನೆಯಲ್ಲಿ ನಾಣ್ಯಗಳು ಸಹಕಾರಿಯಾಗಿದ್ದರೂ ನಿರೀಕ್ಷಿಸಿದಷ್ಟು ಮಾಹಿತಿ ನೀಡುವುದಿಲ್ಲ. ಪ್ರಪ್ರಥಮವಾಗಿ ಶಾತವಾಹನರಿಂದ ದಕ್ಷಿಣ ಭಾರತದಲ್ಲಿ ನಾಣ್ಯಗಳು ಅಚ್ಚು ಹಾಕಿಸಲ್ಪಟ್ಟವು. ಅನಂತರ ಕದಂಬರ, ಗಂಗರ, ಪಲ್ಲವರ, ಚೋಳರ, ಚಾಲುಕ್ಯರ, ಹೊಯ್ಸಳ ಮತ್ತು ವಿಜಯನಗರದ ನಾಣ್ಯಗಳು ದೊರೆಯುತ್ತವೆ. ಪದ್ಮಟಂಕ ನಾಣ್ಯಗಳು ಕದಂಬರಿಂದ ಅಚ್ಚು ಹಾಕಿಸಲ್ಪಟ್ಟವೆಂದು ಊಹಿಸಲಾಗಿದೆ. ಗಂಗರು ಅಚ್ಚು ಹಾಕಿಸಿದ ಚಿನ್ನದ ನಾಣ್ಯಗಳ ಮೇಲೆ ಅವರ ಲಾಂಛನವಾದ ಮದಗಜದ ಚಿತ್ರವಿದೆ. ಬಾದಾಮಿ ಚಾಲುಕ್ಯರ ಕಾಲದಿಂದ ವರಾಹ ಮುದ್ರೆಯ ನಾಣ್ಯಗಳು ಜಾರಿಗೆ ಬಂದವು. ಹೊಯ್ಸಳರ ರಾಜರಲ್ಲಿ ನಾಣ್ಯಗಳನ್ನು ಮೊಟ್ಟಮೊದಲು ಅಚ್ಚು ಹಾಕಿಸಿದವನು ವಿಷ್ಣುವರ್ಧನ. ಅವನ ಚಿನ್ನದ ನಾಣ್ಯಗಳ ಮೇಲೆ ಮಲೆಪರೋಳ್ ಗಂಡ ಹಾಗೂ ತಲಕಾಡುಗೊಂಡ ಎಂಬ ವರ್ಣನೆಗಳಿವೆ. ವರಾಹ, ಗದ್ಯಾಣ, ಪಣ, ಹಣ, ಪೊನ್ನು, ಹೊನ್ನು, ಮೊದಲಾದ ವಿಭಿನ್ನ ಹೆಸರಿನ ನಾಣ್ಯಗಳು ಚಲಾವಣೆಯಲ್ಲಿದ್ದುದಾಗಿ ತಿಳಿದು ಬರುತ್ತದೆ. ಇದೇ ರೀತಿಯಲ್ಲಿ ಚೋಳರು, ಪಾಂಡ್ಯರು ನಾಣ್ಯಗಳನ್ನು ಅಚ್ಚು ಹಾಕಿಸಿದರು. ವಿಜಯನಗರ ಮತ್ತು ಅವರ ಸಾಮಂತ ಅರಸರ ಕಾಲದಲ್ಲಿ ಚಲಾವಣೆಗೆ ಬಂದ ನಾಣ್ಯಗಳ ಮೇಲೆ ನಂದಿ, ಆನೆ, ಸಿಂಹ, ವರಾಹ, ಹನುಮಾನ್, ಗರುಡ ಮೊದಲಾದ ಚಿನ್ಹೆಗಳಿವೆ. ಬಿಜಾಪುರ ಸುಲ್ತಾನರು ಹಾಗೂ ಹೈದರ್ ಮತ್ತು ಟಿಪ್ಪು ಸುಲ್ತಾನರ ನಾಣ್ಯಗಳ ಮೇಲೆ ವಿಭಿನ್ನ ಚಿನ್ಹೆಗಳೂ ಹಾಗೂ ಪರ್ಶಿಯನ್ ಬರವಣಿಗೆಯೂ ಕಾಣಬರುತ್ತದೆ. ಒಟ್ಟಿನಲ್ಲಿ ದಕ್ಷಿಣ ಭಾರತದಲ್ಲಿ ದೊರಕಿರುವ ನಾಣ್ಯಗಳ ತೂಕ ಮತ್ತು ಅಳತೆಗಳಲ್ಲಿಯೂ ಕೂಡ ವೈವಿಧ್ಯತೆಯಿಂದ ಕೂಡಿದೆ. ಇದೇ ರೀತಿಯಲ್ಲಿ ಲಿಪಿಯಲ್ಲೂ ವೈವಿಧ್ಯತೆ ಕಾಣುತ್ತದೆ.

### 2.2.4 *ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪಗಳು ಮತ್ತು ಪ್ರಾಕ್ತನ ಹಾಗೂ ಐತಿಹಾಸಿಕ ನೆಲೆಗಳು*

ಶಾಸನಗಳು ಮತ್ತು ನಾಣ್ಯಗಳಂತೆ ಸ್ಮಾರಕಗಳೂ ಸಹ ಇತಿಹಾಸ ರಚನೆಗೆ ಸಹಕಾರಿಯಾಗಿವೆ. ಸ್ಮಾರಕಗಳಲ್ಲಿ ಇತರ ಆಕರಗಳಲ್ಲಿ ಕಾಣಬರುವ ನ್ಯೂನತೆಗಳಿಲ್ಲ. ಅವುಗಳಲ್ಲಿ ಉತ್ಪ್ರೇಕ್ಷೆ ಹಾಗೂ ಇತರ ವಿಧವಾದ ಬದಲಾವಣೆ ಮೊದಲಾದ ನ್ಯೂನತೆಗಳಿಗೆ ಎಡೆಯಿಲ್ಲ. ಹಲವಾರು ಶಾಸನಗಳು ಅವುಗಳನ್ನು ರಾಜರ ಅಥವಾ ಇತರ ಅಧಿಕಾರವರ್ಗದವರ ಮತ್ತು ಸಾಮಾನ್ಯ ವ್ಯಕ್ತಿಗಳ ಹೆಸರುಗಳಿಂದಲೇ ಕರೆಯಲಾಗಿದೆ. ಹಲವು ವೇಳೆ ದೇವಾಲಯಗಳು ವ್ಯಕ್ತಿಯಿಂದಲೊ, ಸಂಘಗಳಿಂದಲೋ ಅಥವಾ ಜಾತಿ, ಪಂಥ, ಗೋತ್ರಗಳಿಂದಲೋ ನಿರ್ಮಿಸಲಾಗಿದ್ದು ಅಂತಹ ಹೆಸರುಗಳಿಂದಲೋ ಕರೆಯಲ್ಪಟ್ಟಿವೆ. ಸ್ಮಾರಕಗಳು ಕಲೆಯ ಬೆಳವಣಿಗೆ ವಿಕಾಸ, ಸಾಮಾಜಿಕ, ಧಾರ್ಮಿಕ ಮತ್ತು ಆರ್ಥಿಕ ಇತಿಹಾಸ ಮೊದಲಾದ ಸಂಗತಿಯನ್ನು ತಿಳಿಯಲು ದೊರೆಯುವ ದಾಖಲೆಗಳಾಗಿವೆ. ಅವುಗಳ ವಿನ್ಯಾಸ, ಗಾತ್ರ, ನಮೂನೆ, ಶೈಲಿ ಮೊದಲಾದವು ಆಯಾ ಕಾಲದ ಸಾಮಾಜಿಕ, ಆಚಾರ ವಿಚಾರಗಳು, ನಂಬಿಕೆ, ಆರ್ಥಿಕ ಸ್ಥಿತಿಗತಿಗಳು ಮೊದಲಾದ ಹಲವಾರು

ವಿಷಯಗಳನ್ನು ಪ್ರತಿಬಿಂಬಿಸುತ್ತವೆ. ಆದುದರಿಂದಲೆ ಕಲೆಯು ಒಂದು ರಾಷ್ಟ್ರದ ಸಂಸ್ಕೃತಿಯ ಕೈಪಿಡಿ ಎಂಬುದಾಗಿ ಪರಿಗಣಿಸಲ್ಪಟ್ಟಿವೆ.

ದಕ್ಷಿಣ ಭಾರತವು ಕಲಾ ಸ್ಮಾರಕಗಳ ಬೀಡಾಗಿದೆ. ಅವುಗಳು ಶಿಲೆಯಿಂದ ನಿರ್ಮಿತವಾಗಿರುವುದರಿಂದ ಹೆಚ್ಚು ಸಂಖ್ಯೆಯ ಮಂದಿರಗಳು ಸುಸ್ಥಿತಿಯಲ್ಲಿವೆ. ದಕ್ಷಿಣ ಭಾರತದ ಸಂಸ್ಕೃತಿಯು ಹೆಚ್ಚು ಮಟ್ಟಿಗೆ ಶಿಲೆಯಿಂದ ನಿರ್ಮಿಸಲಾಗಿರುವ ಕಲಾಮಂದಿರಗಳಿಂದ ಅಭಿವ್ಯಕ್ತವಾಗಿದೆ ಎಂದು ಹೇಳಲಾಗಿದೆ. ಮೌರ್ಯ, ಶಾತವಾಹನರ ಕಾಲದ ಬೌದ್ಧಗುಹಾಲಯ ಮತ್ತು ವಿಹಾರಗಳಿಂದ ಪ್ರಾರಂಭವಾಗಿ ಕದಂಬ, ಗಂಗ, ಪಲ್ಲವ, ಚಾಲುಕ್ಯ, ರಾಷ್ಟ್ರಕೂಟ, ಹೊಯ್ಸಳ, ಚೋಳ, ಪಾಂಡ್ಯ, ವಿಜಯನಗರ, ಬಹಮನಿ ರಾಜ್ಯಗಳೂ ಹಾಗೂ ಅನಂತರ ರಾಜಮನೆತನಗಳ ಕಾಲದಲ್ಲಿ ಅಸಂಖ್ಯಾತ ಕಲಾಮಂದಿರಗಳು ನಿರ್ಮಾಣವಾದವು. ಶಾತವಾಹನ ಕಾಲದಲ್ಲಿ ನಿರ್ಮಾಣವಾದ ತಾಳಗುಂದದಲ್ಲಿರುವ ಪ್ರಣವೇಶ್ವರ ದೇವಾಲಯ ಭಾರತದಲ್ಲೇ ಅತ್ಯಂತ ಪ್ರಾಚೀನವಾದುದೆಂದು ಹೇಳಲಾಗಿದೆ. ಇವರ ಕಾಲದ ಲೋಕ ಪ್ರಸಿದ್ಧವಾದ ಚೈತ್ಯಾಲಯಗಳು ಮತ್ತು ವಿಹಾರಗಳನ್ನು ಅಜಂತ, ಎಲ್ಲೋರ, ಕಾರ್ಲ, ಬಾಜ, ಬೇಡ್ಸ, ನಾಶಿಕ್, ಪಿತಲ್ಕೋರ ಮುಂತಾದ ಸ್ಥಳಗಳಲ್ಲಿ ಕಾಣಬಹುದು. ಅನಂತರ ಬಾದಾಮಿಯ ಚಾಲುಕ್ಯರು ಕಲಾ ಕ್ಷೇತ್ರದಲ್ಲಿ ಹಾಗೂ ದೇವಾಲಯಗಳ ನಿರ್ಮಾಣದಲ್ಲಿ ವಿಶಿಷ್ಟವಾದ ಪ್ರಯೋಗಗಳನ್ನು ಮಾಡಿದ್ದಾರೆ. ಬಾದಾಮಿ, ಪಟ್ಟದಕಲ್ಲು, ಐಹೊಳೆ, ಮಹಾಕೂಟ, ನಾಗರಾಳು ಜಗತ್ ಪ್ರಸಿದ್ಧವಾದ ವಾಸ್ತು ಕೇಂದ್ರಗಳಾಗಿವೆ. ಬಾದಾಮಿ ಚಾಲುಕ್ಯರ ದೇವಾಲಯಗಳು ಹೆಚ್ಚು ಮಟ್ಟಿಗೆ ಬಾದಾಮಿ, ಪಟ್ಟದಕಲ್ಲು ಮತ್ತು ಐಹೊಳೆಯಲ್ಲಿ ಹೆಚ್ಚು ಸಂಖ್ಯೆಯಲ್ಲಿವೆ. ಬೌದ್ಧ ಗುಹಾಂತರ ದೇವಾಲಯಗಳು, ಗುಡಿಗಳ ನಿರ್ಮಾಣ ಹಾಗೂ ವೇಸಾರ ರೀತಿಯ ಕಲೆಗೆ ಅವು ಪ್ರಸಿದ್ಧಿಯಾಗಿವೆ. ಆ ಕಾಲದಲ್ಲಿ ಪ್ರಚಾರಕ್ಕೆ ಬಂದ ವರಾಹ ಮೊದಲಾದ ದಶಾವತಾರಗಳು, ಸಪ್ತಮಾತೃಕೆಯರು ಹಾಗೂ ಜೈನ ಬಸದಿಗಳ ನಿರ್ಮಾಣದ ವಿಷಯ ನಮಗೆ ತಿಳಿದು ಬರುತ್ತದೆ. ರಾಷ್ಟ್ರಕೂಟರ ಕಾಲದಲ್ಲಿ ಎಲ್ಲೋರ ಮತ್ತು ಎಲಿಫೆಂಟ ಇಂದಿಗೂ ಪ್ರಸಿದ್ಧವಾಗಿದೆ. ಎಲ್ಲೋರ ಗುಹಾಂತ ದೇವಾಲಯವು ಕಲಾ ಪ್ರಪಂಚದ ಅದ್ಭುತವೆಂಬುದಾಗಿ ಪರಿಗಣಿತವಾಗಿದೆ. ತಲಕಾಡಿನ ಗಂಗಾ ಕಾಲದಲ್ಲಿ ಶ್ರವಣಬೆಳಗೊಳದಲ್ಲಿ ಅಖಂಡ ಶಿಲೆಯಲ್ಲಿ ಕೆತ್ತಿರುವ 58 ಅಡಿಗಳಷ್ಟು ಎತ್ತರದ ಭವ್ಯ ಗೊಮ್ಮಟ ಪ್ರತಿಮೆಯು ಜಗತ್ತಿನ ಅದ್ಭುತ ಕಲಾಕೌಶಲಗಳಲ್ಲೊಂದು ಎಂದು ಪ್ರಸಿದ್ಧಿಯಾಗಿದೆ.

ಹಾಗೆಯೇ ಪಲ್ಲವರ ಮತ್ತು ಚೋಳರ ಕಾಲದ ಸ್ಮಾರಕಗಳು ಇತಿಹಾಸ ರಚನೆಗೆ ಉಪಯುಕ್ತ ಮಾಹಿತಿಗಳನ್ನು ಒದಗಿಸುತ್ತವೆ. ಪಲ್ಲವರ ಮಹೇಂದ್ರವರ್ಮ, ಒಂದನೇ ನರಸಿಂಹವರ್ಮರ ಕಾಲದಲ್ಲಿ ವಿಪುಲವಾದ ಶೈವ ಮತ್ತು ವೈಷ್ಣವ ದೇವಾಲಯಗಳು ನಿರ್ಮಿತವಾದವು. ಮಹಾಬಲಿಪುರಂ, ತಿರುಚ್ಚಿ, ಸಿತ್ತನವಸೂಲಿ, ದಳವನ್ನೂರು ಮುಂತಾದ ಸ್ಥಳಗಳಲ್ಲಿ ಮಹೇಂದ್ರವರ್ಮನ ಕಾಲದ ಕಲಾಕೃತಿಗಳನ್ನು ಕಾಣಬಹುದು. ನರಸಿಂಹವರ್ಮ ಪಲ್ಲವನು ಈ ಪರಂಪರೆಯನ್ನು ಮುಂದುವರಿಸಿ ಭವ್ಯಗೊಳಿಸಿದನು. ತಂಜಾವೂರಿನ ಬೃಹದೀಶ್ವರ ದೇವಾಲಯ ಚೋಳರ ಕಲಾಸಾಧನೆ ಸಾಕ್ಷಿಯಾಗಿ ನಿಂತಿದೆ. ಚಾಲುಕ್ಯ ಶೈಲಿಯೂ ಹೊಯ್ಸಳರ ಕಾಲದಲ್ಲಿ ಹಲವು ಮಾರ್ಪಾಡುಗಳನ್ನು ಹೊಂದಿ ಅತ್ಯಂತ ಸುಂದರವೂ, ಸೂಕ್ಷ್ಮವೂ ಆಗಿ ಪರಿಣಮಿಸಿತು. ನಕ್ಷತ್ರಾಕಾರದ ಸ್ಥಳ ವಿನ್ಯಾಸ, ಕೆತ್ತನೆಯ ಸೊಬಗು, ಹೊಳೆಯುವ ನುಣುಪು ನೋಡುವವರ ಕಣ್ಮನಗಳನ್ನು ತಣಿಸುತ್ತದೆ. ಹೊಯ್ಸಳರ ದೇವಾಲಯಗಳು ಸಮಕಾಲೀನ, ಸಂಗೀತ, ನೃತ್ಯ, ಸಂಗೀತ ವಾದ್ಯಗಳು, ಒಡವೆವಸ್ತ್ರ ಮೊದಲಾದ ಹಲವಾರು ಐತಿಹಾಸಿಕ ಸಂಗತಿಗಳನ್ನು ಪ್ರತಿಬಿಂಬಿಸುವ ಸದೃಡ ದಾಖಲೆಗಳಾಗಿವೆ. ಬೇಲೂರಿನ ಚನ್ನಕೇಶವ, ಹಳೇಬೀಡಿನ ಶಾಂತಳೇಶ್ವರ ಮತ್ತು ಹೊಯ್ಸಳೇಶ್ವರ, ಸೋಮನಾಥಪುರದ ಸೌಮ್ಯ ಕೇಶವ, ಬೆಳವಾಡಿಯ ವೀರನಾರಾಯಣ, ಸೂಕ್ಷ್ಮ ಕೆತ್ತನೆಗೆ ಪ್ರಸಿದ್ಧಿಯಾಗಿವೆ. ವಿಜಯನಗರದ ಕಾಲದಲ್ಲಿ ನಿರ್ಮಾಣವಾದ ಅರಮನೆಗಳು ಹಾಗೂ ಸಾವಿರಾರು ದೊಡ್ಡ ದೊಡ್ಡ ದೇಗುಲಗಳು ಅಂದಿನ ಜನ ಜೀವನದ ಮೇಲೆ ಬೆಳಕು ಚೆಲ್ಲುತ್ತದೆ. ಹಂಪೆಯ ವಿರೂಪಾಕ್ಷ, ವಿಠಲ, ಕೃಷ್ಣ, ತಿರುವೆಂಗಳನಾಥ ಮುಂತಾದ ದೇಗುಲಗಳು

ಚೆಲುವು ಮತ್ತು ಬೃಹದಾಕೃತಿಗಳನ್ನು ಮೇಳವಿಸಿಕೊಂಡಿವೆ. ಇದೆಲ್ಲವು ಅಂದಿನ ಜನರ ಸಾಂಸ್ಕೃತಿಕ ಬದುಕನ್ನು ಬಿಂಬಿಸುವ ಕೈಗನ್ನಡಿಗಳಾಗಿವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಳಿದ ಹಲವಾರು ಸಣ್ಣಪುಟ್ಟ ರಾಜವಂಶಗಳ ಕಾಲದಲ್ಲಿ ಭಿನ್ನವಾದ ಅನೇಕ ಜೈನ ಬಸದಿಗಳನ್ನು ನಿರ್ಮಿಸಿದರು. ಕಾರ್ಕಳ ಹಾಗೂ ಮೂಡಬಿದ್ರೆ ಮೊದಲಾದ ಸ್ಥಳಗಳಲ್ಲಿ ಇರುವ ಜೈನ ಸ್ಮಾರಕಗಳು ಅಲ್ಲಿ ಜೈನಮತ ಹೊಂದಿದ ಉನ್ನತಿಯ ಕುರುಹಾಗಿವೆ.

ಬಹಮನೀ ಅರಸರ ಕಾಲದಲ್ಲಿ ಇಂಡೊ - ಸಾರ್ಸನಿಕ ಶೈಲಿಯಲ್ಲಿ ಅನೇಕ ಕಟ್ಟಡಗಳು ನಿರ್ಮಾಣವಾದವು. ಅವುಗಳಲ್ಲಿ ಬಿಜಾಪುರದ ಗೋಲಗುಂಬಜ್, ಬೀದರ್‌ನ ಮದರಸ ಮೊದಲಾದವು ಪ್ರಸಿದ್ಧಿವಾದವು. ಹೀಗೆ ಪ್ರಾಚೀನ ಕಾಲದಿಂದ ನಿರ್ಮಿತವಾಗಿರುವ ಬೌದ್ಧ, ಹಿಂದೂ, ಜೈನ, ಗುಡಿ ಗೋಪುರಗಳು ಮತ್ತು ಮಹಮದೀಯರ ಪ್ರಾರ್ಥನಾ ಮಂದಿರ ದಕ್ಷಿಣ ಭಾರತದ ಉದ್ದಗಲದಲ್ಲಿ ಅಸಂಖ್ಯಾತವಾಗಿದೆ. ಅತ್ಯಂತ ಪ್ರಾಚೀನ ಕಾಲದಲ್ಲಿ ನಿರ್ಮಾಣವಾದ ಗುಹಾಂತರ್ದೇವಾಲಯಗಳು ಮತ್ತು ಐತಿಹಾಸಿಕ ಯುಗದಲ್ಲಿ ಆಳಿದ ರಾಜಮನೆತನಗಳ ಪಾಳುಬಿದ್ದ ಅರಮನೆಗಳೂ, ಕೋಟೆಕೊತ್ತಲಗಳೂ ಮತ್ತು ಹಿಂದೆ ಭವ್ಯ ರಾಜಧಾನಿಗಳು ಮತ್ತು ವ್ಯಾಪಾರ ಮತ್ತು ಧಾರ್ಮಿಕ ಕೇಂದ್ರಗಳೂ ಆಗಿದ್ದು ಈಗ ಕೇವಲ ಹಳ್ಳಿಗಳಂತಿದ್ದು ಐತಿಹಾಸಿಕ ಭವ್ಯತೆಯನ್ನು ನೆನಪು ಮಾಡಿಕೊಡುತ್ತಿರುವ ಸ್ಥಳಗಳೂ ಇವೆ. ಇವುಗಳು ಕಲೆಯ ಬೆಳವಣಿಗೆಯನ್ನು ಹಾಗೂ ರಾಜಕೀಯ, ಸಾಮಾಜಿಕ, ಆರ್ಥಿಕ ಸ್ಥಿತಿಗಳನ್ನು ಅರಿಯಲು ಇರುವ ಸಮಕಾಲೀನ ಅಮೂಲ್ಯ ದಾಖಲೆಗಳಾಗಿವೆ.

## 2.3 ಸಾರಾಂಶ

ಈ ಘಟಕದ ಆರಂಭದಿಂದ ಕೊನೆಯವರೆಗೂ ಇತಿಹಾಸ ರಚನೆ ಕಾರ್ಯದಲ್ಲಿ ಪುರಾತತ್ವ ಆಧಾರಗಳ ಮಹತ್ವವನ್ನು ಅರಿಯಲು ಪ್ರಯತ್ನಮಾಡಲಾಗಿದೆ. ಆಕಾರಗಳಿಲ್ಲದೆ ಇತಿಹಾಸ ರಚನೆ ಸಾಧ್ಯವಿಲ್ಲವೆಂಬ ಸತ್ಯಾಂಶದ ಅರಿವನ್ನು ನಿಮ್ಮ ಗಮನಕ್ಕೆ ತರಲು ಯತ್ನಿಸಲಾಗಿದೆ.

ನಮ್ಮ ಪ್ರಾಚೀನರಲ್ಲಿದ್ದ ಐತಿಹಾಸಿಕ ಪ್ರಜ್ಞೆಯ ಕೊರತೆಯಿಂದಾಗಿ ಐತಿಹಾಸಿಕ ಕೃತಿಗಳ ಕೊರತೆಯನ್ನು ನೀವು ಈ ಘಟಕದಲ್ಲಿ ಗಮನಿಸಿದ್ದೀರಿ.

ಪುರಾತತ್ವ ಆಕರಗಳು ವಿಭಿನ್ನವಾಗಿದ್ದು ಅವು ಬೇರೆ ಬೇರೆ ಪ್ರಕಾರಗಳಲ್ಲಿ ದೊರೆಯುತ್ತವೆ. ಇವುಗಳಿಂದ ಮಾಹಿತಿ ಸಂಗ್ರಹಿಸಬೇಕಾದರೆ ಬಹುಭಾಷೆಯ ಪರಿಚಯ ಅಗತ್ಯ.

ಈ ಪುರಾತತ್ವ ಆಧಾರಗಳನ್ನು ನಾಲ್ಕು ಪ್ರಕಾರಗಳಲ್ಲಿ ಅಧ್ಯಯನಿಸಬಹುದು. ಭೂಉತ್ಖನನ, ಶಾಸನಗಳು, ನಾಣ್ಯ ಮತ್ತು ಸ್ಮಾರಕಗಳು. ಆ ಒಂದೊಂದು ಪ್ರಕಾರಗಳು ತಮ್ಮದೇ ಆದ ರೀತಿಯಲ್ಲಿ ಇತಿಹಾಸ ರಚನೆಗೆ ಸಹಕಾರ ನೀಡಿರುವುದನ್ನು ಗಮನಿಸಿದ್ದೀರಿ. ಹಾಗೂ ಅವುಗಳನ್ನು ಕಂಡು ಬರುವ ನ್ಯೂನತೆ, ಲೋಪದೋಷಗಳನ್ನು ನಾವು ಗಮನಿಸಿದ್ದೇವೆ.

ಈ ಪುರಾತತ್ವ ಆಧಾರಗಳು ಸಾಹಿತ್ಯ ಆಧಾರಗಳಿಗೆ ಪೂರಕವಾಗಿ ಪ್ರಾಚೀನ ದಕ್ಷಿಣ ಭಾರತ ಇತಿಹಾಸವನ್ನು ರಚಿಸಲು ನೆರವಾಗಿವೆ ಎಂಬುದನ್ನು ತಿಳಿದುಕೊಳ್ಳಲು ಯತ್ನಿಸಲಾಗಿದೆ.

## 2.4 ಸ್ವಪರೀಕ್ಷೆ ಪ್ರಶ್ನೆಗಳು

1. ಇತಿಹಾಸ ರಚನೆಗೆ ಪುರಾತತ್ವ ಆಧಾರಗಳ ಮಹತ್ವವನ್ನು ಪರೀಕ್ಷಿಸಿ ಮತ್ತು ಅವುಗಳಲ್ಲಿ ಕಂಡು ಬರುವ ನ್ಯೂನತೆಗಳನ್ನು ತಿಳಿಸಿ

2. ಇತಿಹಾಸ ರಚನೆಯಲ್ಲಿ ಶಾಸನಗಳ ಮೌಲ್ಯವನ್ನು ನಿರ್ಧರಿಸಿ.

ಟಿಪ್ಪಣಿ ಬರೆಯಿರಿ

1) ಉತ್ಖನನ ಅಥವಾ ಭೂಶೋಧನೆಗಳು

2) ನಾಣ್ಯಗಳಿಂದ ದೊರಕುವ ಮಾಹಿತಿಗಳ ಸ್ವರೂಪಗಳನ್ನು ಕುರಿತು ಬರೆಯಿರಿ

3) ಸ್ಮಾರಕಗಳು ಹೇಗೆ ಇತಿಹಾಸ ರಚನೆಗೆ ಸಹಾಯವಾಗಿವೆ ಎಂಬುದನ್ನು ತಿಳಿಸಿರಿ

## 2.5 ಹೆಚ್ಚಿನ ಅಧ್ಯಯನಕ್ಕಾಗಿ ಗ್ರಂಥಗಳು


(1) Diwakar .R.R.(Ed.) : **Karnataka Through the Ages.**

(2) Nilakanta Sastri .K.A. : **Sources of Indian History**

(3) Desai .P.B. : **A History of Karnataka**

(4) S. Ratnagar : **Archaeological Perspective on Early Indian Society in Recent Perspectives of Early Indian History by Romil Mhapp Gpar**

(5) Ranga swamaiah : ಪ್ರಾಚೀನ ಭಾರತ

(6) Mugali .R.S. : **Heritage of Karnataka**

(7) Karashima .N. : **South Indian History and Society**

(8) Narayan .M.G.S. : **Re-Interpretations in South Indian History**

(9) Burton Stein : **Peasant State and Society in Medival South India**

(10) A. Sundar : ಕರ್ನಾಟಕ ಚರಿತ್ರೆ ಸಂ.1, ಕನ್ನಡ ವಿಶ್ವಿದ್ಯಾನಿಲಯ, ಹಂಪೆ


**ಪ್ರೊ|| ಮಾದೇಗೌಡ**

# ಟಿಪ್ಪಣಿಗಳು

# NOTES

ಬ್ಲಾಕ್ - I

ಘಟಕ - 3

# ಆಧಾರಗಳು - ಸಾಹಿತ್ಯ

## ವಿಷಯ ಕ್ರಮ


3.0 ಘಟಕದ ಉದ್ದೇಶ

3.1 ಪೀಠಿಕೆ

3.2 ದೇಶೀಯ ಸಾಹಿತ್ಯ ಆಧಾರಗಳು

3.3 ವಿದೇಶಿ ಬರವಣಿಗೆಗಳು

3.4 ಮೌಖಿಕ ಪರಂಪರೆ ಮತ್ತು ದಂತಕಥೆಗಳು

3.5 ಸಾರಾಂಶ

3.6 ಸ್ವಪರೀಕ್ಷೆ ಪ್ರಶ್ನೆಗಳು

3.7 ಹೆಚ್ಚಿನ ಅಧ್ಯಯನಕ್ಕಾಗಿ ಗ್ರಂಥಗಳು

## 3.0 ಘಟಕದ ಉದ್ದೇಶ

ಪ್ರಾಚೀನ ಕಾಲದ ಇತಿಹಾಸ ರಚನೆಗೆ ಲಭ್ಯವಾರುವ ಸಾಹಿತ್ಯ ಆಕಾರಗಳನ್ನು ನಿಮಗೆ ಪರಿಚಯಿಸಿ ಕೊಡುವುದು ಈ ಘಟಕದ ಉದ್ದೇಶ. ಈ ಪಾಠದ ಅಧ್ಯಯನದಿಂದಕೆಳಗೆ ತಿಳಿಸಿರುವ ವಿಷಯಗಳನ್ನು ಗಮನಿಸುವಿರಿ

* ಐತಿಹಾಸಿಕ ಕೃತಿಗಳ ಕೊರತೆ ನಮ್ಮ ಪ್ರಾಚೀನ ಸಾಹಿತ್ಯದಲ್ಲಿ ಎದ್ದು ಕಾಣುವ ಒಂದು ಮಹಾಕೊರತೆ
* ಇತಿಹಾಸ ರಚನೆಗೆ ಬಹುಭಾಷಜ್ಞಾನದ ಅಗತ್ಯತೆ.
* ಸಾಹಿತ್ಯ ಆಧಾರಗಳನ್ನು ಎರಡು ಪ್ರಮುಖ ಭಾಗಗಳಾಗಿ ವಿಂಗಡಿಸಿರುವುದು
* ದೇಶೀಯ ಮತ್ತು ವಿದೇಶೀಯ ಬರವಣಿಗೆಗಳು
* ದೇಶೀಯ ಬರವಣಿಗೆಗಳನ್ನು ಮತೀಯ ಹಾಗೂ ಲೌಕಿಕ ಕೃತಿಗಳಾಗಿ ಪರಿಗಣಿಸಿರುವುದು
* ಈ ದೇಶೀಯ ಬರವಣಿಗೆಗಳು ಐತಿಹಾಸಿಕ ಘಟನೆಗಳನ್ನು ಪೌರಾಣಿಕ ವಸ್ತು ವಿಷಯಗಳೊಡನೆ ಸಮೀಕರಿಸುವುದು.
* ದೇಶೀಯ ಸಾಹಿತ್ಯ ಕೃತಿಗಳು ಹೆಚ್ಚಾಗಿ ಹೊಗಳಿಕೆ ಉತ್ಪ್ರೇಕ್ಷೆಯಿಂದ ಕೂಡಿರುವುದು ಅವುಗಳ ಒಂದು ಪ್ರಮುಖ ಲಕ್ಷಣವಾಗಿ ಕಂಡು ಬರುತ್ತದೆ.
* ದೇಶೀಯ ಸಾಹಿತ್ಯಗಳು ಘಟನೆಯನ್ನು ವಿವರಿಸುವಾಗ ಕಾಲ, ದೇಶಗಳ ಅಂಶಗಳನ್ನು ಉಪೇಕ್ಷೆ ಕೂಡಿರುವುದರಿಂದ ಪರಿಪೂರ್ಣ ಐತಿಹಾಸಿಕ ವಿವರಣೆಗಳನ್ನು ನೀಡುವಲ್ಲಿ ವಿಫಲವಾಗಿವೆ.
* ವಿದೇಶೀ ಬರವಣಿಗೆಗಳಲ್ಲಿ ಗ್ರೀಕರು, ರೋಮನ್ನರು, ಪರ್ಷಿಯನ್ನರು, ಅತ್ಯಮೂಲ್ಯ ಮಾಹಿತಿಗಳನ್ನು ಒದಗಿಸುತ್ತವೆ.
* ಈ ಸಾಹಿತ್ಯ ಬರವಣಿಗೆಗಳನ್ನು ಅತ್ಯಂತ ಎಚ್ಚರಿಕೆಯಿಂದ ಪರೀಶಿಲಿಸಿ ಇತಿಹಾಸ ರಚನೆಗೆ ಬಳಸಿಕೊಳ್ಳಬೇಕಾಗಿರುತ್ತದೆ.

## 3.1 ಪೀಠಿಕೆ

ಘಟಕ ಎರಡರ ಪೀಠಿಕೆಯಲ್ಲಿ ಆಧಾರಗಳನ್ನು ಕುರಿತು ವಿವರಿಸಿರುವ ವಿಷಯಗಳು ಈ ಘಟಕದ ಪೀಠಿಕೆಗೆ ಅನ್ವಯಿಸುತ್ತದೆ. ಅದನ್ನೆ ಇಲ್ಲಿ ಸಂಕ್ಷಿಪ್ತವಾಗಿ ನಿರೂಪಿಸಲಾಗಿದೆ. ಇತಿಹಾಸ ರಚನೆಗೆ ಆಧಾರಗಳು ಅತಿ ಮುಖ್ಯ. ಆಧಾರಗಳಿಲ್ಲದೆ ಇತಿಹಾಸ ರಚನೆ ಸಾಧ್ಯವಿಲ್ಲ. ಕಾಲ(Time) and ದೇಶ ಅಥವಾ ಸ್ಥಳ (Space) ಗಳು ಇತಿಹಾಸಕ್ಕೆ ಎರಡು ಕಣ್ಣುಗಳಿದ್ದಾಗೆ. ಇವು ಇಲ್ಲದ ಕೃತಿ ಅಥವಾ ದಾಖಲೆಗಳನ್ನು 'ಐತಿಹಾಸಿಕ' ಎಂದು ಪರಿಗಣಿಸಲಾಗುವುದಿಲ್ಲ. ಭಾರತದ ಇತಿಹಾಸ ರಚನೆಗೆ ಐತಿಹಾಸಿಕ ಆಧಾರಗಳ ಕೊರತೆಯನ್ನು ಮೊದಲು ಅಲ್ಬರೂನಿಯು ಗಮನಿಸಿದನು. ಆಧುನಿಕ ಕಾಲದಲ್ಲೂ ಸಹ ಈ ಕೊರತೆಯನ್ನು ವಿದ್ವಾಂಸರು ಗಮನಿಸಿದ್ದಾರೆ. ದಕ್ಷಿಣ ಭಾರತದ ಇತಿಹಾಸ ರಚನೆಯ ಕಾರ್ಯದಲ್ಲೂ ಮೇಲ್ಕಂಡ ನ್ಯೂನತೆಗಳು ಕಾಣಬರುತ್ತವೆ. ಐತಿಹಾಸಿಕ ಗ್ರಂಥಗಳೆಂದು ನಿರ್ದಿಷ್ಟವಾಗಿ ಹೆಸರಿಸಬಹುದಾದ ಗ್ರಂಥಗಳು ದೊರೆಯುವುದಿಲ್ಲ. ಪ್ರಾಚೀನ ಗ್ರೀಕರಲ್ಲಿದ್ದ ಪ್ರಖ್ಯಾತ ಇತಿಹಾಸಕಾರರಾದ ಹೆರೊಡೋಟಸ್, ಥುಸಿ ಡೈಡಸ್‌ರಂತಹ ಇತಿಹಾಸಕಾರರನ್ನು ಪ್ರಾಚೀನ ಫಾರತದಲ್ಲಿ ಕಾಣಲಾಗುವುದಿಲ್ಲ. ಪಾರಾಮಾರ್ಥಿಕ ಭಾವನೆಯನ್ನು ತುಂಬಿಕೊಂಡಿದ್ದ ಭಾರತೀಯರಿಗೆ ಇತಿಹಾಸದಂತ ಲೌಕಿಕ ವಿಷಯಗಳು ಗೌಣವಾಗಿ ಕಂಡವು. ಪ್ರಾಚೀನ ಭಾರತೀಯರು ಆಧ್ಯಾತ್ಮಿಕ

ಹಾಗೂ ಮೋಕ್ಷಗಳಿಗೆ ಹೆಚ್ಚು ಗಮನಕೊಟ್ಟು ಇತಿಹಾಸ ರಚನೆಗೆ ಸೂಕ್ತ ಗಮನ ನೀಡುದಿರುವುದು ಒಂದು ಪ್ರಮುಖ ನ್ಯೂನತೆಯಾಗಿದೆ. ಆದರೂ ಪ್ರಾಚೀನ ಭಾರತದ ಇತಿಹಾಸ ರಚನೆಗೆ ಲಭ್ಯವಿರುವ ಸಾಹಿತ್ಯ ಆಕಾರಗಳನ್ನು ಪರಾಮರ್ಶಿಸಿ ಅವುಗಳಲ್ಲಿ ಕಂಡು ಬರುವ ಐತಿಹಾಸಿಕ ಅಂಶಗಳನ್ನು ಹೆಕ್ಕಿ ಹೊರತೆಗೆದು ಇತಿಹಾಸ ರಚನೆ ಕಾರ್ಯವನ್ನು ಮಾಡಲಾಗಿದೆ. ಸಮಕಾಲೀನ ಸಾಹಿತ್ಯ ಆಧಾರಗಳು, ವಿದೇಶಿ ಪ್ರವಾಸಿಗರ ಬರವಣಿಗೆಗಳು ನಮ್ಮ ಪ್ರಾಚೀನ ಕಾಲದ ಇತಿಹಾಸ ರಚನೆಗೆ ನೆರವಾಗಿವೆ.

## 3.2 ದೇಶೀಯ ಸಾಹಿತ್ಯ ಆಧಾರಗಳು

ಬರವಣಿಗೆಯ ಅಥವಾ ಸಾಹಿತ್ಯ ಆಧಾರಗಳನ್ನು ದೇಶೀಯ ಮತ್ತು ಪರಕೀಯ ಎಂಬುದಾಗಿ ವ್ಯಾಸಂಗಕ್ಕನುಕೂಲವಾಗುವಂತೆ ಎರಡು ಭಾಗಗಳಾಗಿ ಮಾಡಿಕೊಳ್ಳಲಾಗಿದೆ. ಇತಿಹಾಸದ ಅಂಶಗಳನ್ನು ಒಳಗೊಂಡ ದೇಶೀಯ ಸಾಹಿತ್ಯಧಾರಗಳು ವ್ಯಾಪಕವಾಗಿ ದೊರೆಯುತ್ತವೆ. ಇವುಗಳನ್ನು ಪುನಃ ಧಾರ್ಮಿಕ ಮತ್ತು ಲೌಕಿಕ ಕೃತಿಗಳೆಂದು ವಿಭಾಗಿಸಲಾಗಿದೆ. ಬ್ರಾಹ್ಮೀ, ಪಾಳಿ, ಪ್ರಾಕೃತ, ಸಂಸ್ಕೃತ, ಕನ್ನಡ, ತಮಿಳು, ತೆಲುಗು, ಮರಾಠಿ, ಪರ್ಷಿಯನ್ ಭಾಷೆಗಳಲ್ಲಿ ರಚಿತವಾಗಿರುವ ಗ್ರಂಥಗಳಲ್ಲಿ ಇತಿಹಾಸ ರಚನೆಗೆ ಉಪಯುಕ್ತವಾದ ಮೂಲ ಆಕಾರಗಳು ದೊರೆಯುತ್ತವೆ. ಈ ಗ್ರಂಥಗಳು ಧಾರ್ಮಿಕ, ಮತೀಯ, ಮತ್ತು ಸಾಹಿತ್ಯ ಸ್ವರೂಪದವು. ಧಾರ್ಮಿಕ ಮತ್ತು ಮತೀಯ ಗ್ರಂಥಗಳಲ್ಲಿ ವೇದಗಳೇ ಅತಿಪ್ರಾಚೀನವಾದವು. ವೇದ ವಾಙ್ಮಯದಲ್ಲಿ ನಾಲ್ಕು ವೇದಗಳೂ, ಅರಣ್ಯಕಗಳೂ, ಉಪನಿಷತ್ತುಗಳೂ ಇವೆ. ಇವು ಧಾರ್ಮಿಕ ಗ್ರಂಥಗಳಾದರೂ ಆ ಕಾಲದ ಜನರ ಕಸುಬು ಮತ್ತು ಉತ್ಪಾದನಾ ವಿಷಯಗಳನ್ನೊಳಗೊಂಡಿವೆ.

ಮಹಾ ಕಾವ್ಯಗಳಾದ ರಾಮಾಯಣ, ಮಹಾಭಾರತಗಳು ಮೂಲತಃ ಧರ್ಮಗ್ರಂಥಗಳಾದರೂ ಐತಿಹಾಸಿಕ ಘಟನೆಗಳನ್ನೂ, ರಾಜಕೀಯ ಮತ್ತು ಸಾಮಾಜಿಕ ಸ್ಥಿತಿಗತಿಗಳನ್ನು ಪ್ರತಿಬಿಂಬಿಸುತ್ತವೆ. ರಾಮಾಯಣ ಹೆಚ್ಚಾಗಿ ಗಂಗಾ ನದಿಯ ಬಯಲಿನ ರಾಜ್ಯಗಳ ವಿಷಯಗಳನ್ನು ಚಿತ್ರಿಸುವುದಲ್ಲದೆ ದಕ್ಷಿಣದಲ್ಲಿ ಕಿಷ್ಕಿಂದ, ಶ್ರೀಲಂಕದ ವಿವರಣೆಗಳನ್ನೊಳಗೊಂಡಿದೆ. ಮಹಾಭಾರತ ರಾಜ್ಯಗಳ ಉದಯವನ್ನು, ಯುದ್ಧ ನೈಪುಣ್ಯವನ್ನೂ, ದಕ್ಷಿಣ ಭಾರತದ ಚೇರ, ಚೋಳ, ಪಾಂಡ್ಯ ರಾಜ್ಯಗಳ ವಿಷಯಗಳನ್ನೊಳಗೊಂಡಿದೆ. ಇದು ಅಖಿಲಭಾರತ ಸಮಗ್ರ ಚಿತ್ರವನ್ನು ಪ್ರತಿಬಿಂಬಿಸುತ್ತದೆ. ದ್ರಾವಿಡ ಮತ್ತು ಆರ್ಯ ಸಂಸ್ಕೃತಿಯ ಸಮ್ಮಿಲನಗಳನ್ನು ಈ ಕಾವ್ಯಗಳಲ್ಲಿ ಕಾಣಬಹುದು. ವರ್ಣಾಶ್ರಮ ವ್ಯವಸ್ಥೆ, ಜಾತಿ ಪದ್ಧತಿ, ಸಾಮಾಜಿಕ ಕಟ್ಟಲೆಗಳು ಮುಂತಾದ ಹಲವಾರು ವಿಷಯಗಳ ಪ್ರಸ್ತಾಪವು ಈ ಗ್ರಂಥಗಳಲ್ಲಿ ನಿರೂಪಿತವಾಗಿದೆ. ಮಹಾಕಾವ್ಯಗಳ ಜೊತೆಗೆ ಹದಿನೆಂಟು ಪುರಾಣಗಳು ಮತ್ತು ಅಷ್ಟೇ ಸಂಖ್ಯೆಯ ಉಪಪುರಾಣಗಳು ಲಭ್ಯವಾಗಿವೆ. ಮೊದಮೊದಲು ಪ್ರಾಚೀನ ಭಾರತದ ಇತಿಹಾಸ ರಚನೆಯಲ್ಲಿ ತೊಡಗಿದ ಪಾಶ್ಚಾತ್ಯ ವಿದ್ವಾಂಸರು ಪುರಾಣಗಳು ಕೇವಲ ಮತ ಸಂಬಂಧವಾದ ಗ್ರಂಥಗಳೆಂದೂ, ಅವುಗಳು ಇತಿಹಾಸ ರಚನೆಗೆ ಸಹಕಾರಿಯಾಗಿಲ್ಲವೆಂದು ಕಡೆಗಣಿಸಿದ್ದರು. ಕ್ರಮೇಣ ಅವುಗಳ ಶಾಸ್ತ್ರೀಯ ಅಧ್ಯಯನ ಪ್ರಾರಂಭವಾಗಿ ಮೇಲ್ಕಂಡ ಭಾವನೆ ದೂರವಾದುದಲ್ಲದೆ ಪುರಾಣಗಳು ಇತಿಹಾಸ ರಚನೆಗೆ ಬಹು ಉಪಯುಕ್ತವಾದ ಮಾಹಿತಿಗಳನ್ನು ಒದಗಿಸುತ್ತವೆಂದು ಮನಗಾಣಲಾಯಿತು. ಇ.ಇ. ಪಾರ್ಜಿಟರ್ ಎಂಬ ಓರಿಯಂಟಲಿಸ್ಟ್ ಪುರಾಣಗಳಿಗೆ ಸಂಬಂಧಿಸಿದ ವಿಶೇಷ ವ್ಯಾಸಾಂಗವನ್ನು ಕೈಗೊಂಡು ಅವು ಐತಿಹಾಸಿಕ ಮಹತ್ವವನ್ನು ಹೊರಗೆಡುಹಿದರು. ಅವುಗಳು ದಂತಕತೆಗಳನ್ನೊಳಗೊಂಡಿದ್ದರೂ, ಇತಿಹಾಸಕ್ಕೆ ಸಂಬಂಧಪಟ್ಟ ಮಾಹಿತಿಯನ್ನೊದಗಿಸುತ್ತವೆ. ಇತಿಹಾಸ ರಚನೆಯ ದೃಷ್ಟಿಯಿಂದ ವಾಯು, ವಿಷ್ಣು, ಗರುಡ, ಮತ್ಸ್ಯ ಮತ್ತು ಪದ್ಮಪುರಾಣಗಳು ಹೆಚ್ಚಿನ ಮಹತ್ವವನ್ನು ಹೊಂದಿದೆ. ಇವುಗಳಲ್ಲಿ ಮೌರ್ಯ, ಶುಂಗ, ಕಣ್ವ, ಶಾತವಾಹನ ಮತ್ತು ಗುಪ್ತ ಸಂತತಿಗಳ ಐತಿಹಾಸಿಕ ಸಂಗತಿಗಳು ಅಡಕವಾಗಿವೆ. ವಂಶಾನು ಕ್ರಮಣಿಕೆ ಹಾಗೂ ಭೌಗೋಳಿಕ ಸ್ಥಿತಿಯನ್ನು ತಿಳಿಯಲು ಸಹಕಾರಿಯಾಗಿವೆ. ಕ್ರಿ.ಪೂ. 8 ನೇ ಶತಮಾನದಿಂದ ಕ್ರಿ.ಶ. 10 ನೇ ಶತಮಾನದವರೆಗೂ ಬೇರೆ ಬೇರೆ ಕರ್ತೃಗಳು ಬೇರೆ ಬೇರೆ ಪುರಾಣಗಳನ್ನು ರಚಿಸಿರುವುದು ತಿಳಿದುಬರುತ್ತದೆ.

ಧಾರ್ಮಿಕ ಹಾಗೂ ರಾಜ್ಯ ಶಾಸ್ತ್ರಕ್ಕೆ ಸಂಬಂಧಿಸಿದ ಅನೇಕ ಗ್ರಂಥಗಳು ರಚಿತವಾದವು. **ಮನುಸ್ಮೃತಿ, ಯಜ್ಞವಲ್ಕ ಸ್ಮೃತಿ, ನಾರದ ಸ್ಮೃತಿ** ಮತ್ತು ಕೌಟಿಲ್ಯನ **'ಅರ್ಥಶಾಸ್ತ್ರ'** ಗ್ರಂಥಗಳು ಮುಖ್ಯವಾದವು. ಸ್ಮೃತಿ ಗ್ರಂಥಗಳಲ್ಲಿ ಸಾಮಾಜಿಕ ನ್ಯಾಯನಿಬಂಧನೆ, ವರ್ಣಾಶ್ರಮ ಪದ್ಧತಿ ಮತ್ತು ರಾಜ್ಯಶಾಸ್ತ್ರಕ್ಕೆ ಸಂಬಂಧಿಸಿದ ವಿಷಯಗಳು ದೊರೆಯುತ್ತವೆ. ರಾಜ್ಯಶಾಸ್ತ್ರಕ್ಕೆ ಸಂಬಂಧಿಸಿದಂತೆ ಕೌಟಿಲ್ಯನ **ಅರ್ಥಶಾಸ್ತ್ರವು** ಬಹು ಅಮೂಲ್ಯವಾದ ಗ್ರಂಥವಾಗಿದೆ. ಈ ಗ್ರಂಥವನ್ನು ಮೈಸೂರಿನ ಆರ್. ಶಾಮ ಶಾಸ್ತ್ರಿಯವರು 1911 ರಲ್ಲಿ ಸುಮಾರಿನಲ್ಲಿ ಸಂಪಾದಿಸಿ ಅಚ್ಚು ಹಾಕಿಸಿದರು. ಅರ್ಥಶಾಸ್ತ್ರದ ಸಂಶೋಧನೆಯಿಂದ ಪ್ರಾಚೀನ ಭಾರತದ ರಾಜಕೀಯ ಪ್ರಜ್ಞೆಯ ವಿಷಯವಾಗಿ ಪಾಶ್ಚಾತ್ಯ ವಿದ್ವಾಂಸರಲ್ಲಿ ಮೂಡಿದ್ದ ಅನೇಕ ತಪ್ಪು ಕಲ್ಪನೆಗಳು ನಿವಾರಣೆಯಾದವು. ರಾಷ್ಟ್ರೋದ್ಭವದ ಕಾರಣಗಳು, ಅದರ ಲಕ್ಷಣಗಳು, ರಾಜನಿಗಿರಬೇಕಾದ ವಿವೇಕ, ನ್ಯಾಯನಿಬಂಧನೆ ಮುಂತಾದ ಹಲವಾರು ವಿಷಯಗಳನ್ನು ಕುರಿತು ಕೌಟಿಲ್ಯನು ಅರ್ಥಶಾಸ್ತ್ರದಲ್ಲಿ ಆಧುನಿಕವಾಗಿ ಮತ್ತು ವೈಜ್ಞಾನಿಕ ರೀತಿಯಲ್ಲಿ ವಿವೇಚಿಸಿದ್ದಾನೆ.

ರಾಮಾಯಣ ಮತ್ತು ಮಹಾಭಾರತ ಮಹಾಕಾವ್ಯಗಳ ತರುವಾಯ ಕರ್ನಾಕವನ್ನೊಳಗೊಂಡಂತೆ ದಕ್ಷಿಣ ಭಾರತಕ್ಕೆ ಸಂಬಂಧಿಸಿದ ವಿವರಣೆಗಳು ಮೌರ್ಯ ಕಾಲದಿಂದ ರಚಿತವಾದ ಜೈನ ಬೌದ್ಧ ಗ್ರಂಥಗಳಲ್ಲಿ ಪ್ರಸ್ತಾಪವಿದೆ. ಅಶೋಕನ ಶಾಸನಗಳ ಜೊತೆಗೆ, ಅವನು ಬನವಾಸಿಗೆ ಬೌದ್ಧ ಭಿಕ್ಷುಗಳನ್ನು ಮತ ಪ್ರಚಾರಕ್ಕಾಗಿ ಕಳುಹಿಸಿದ ಸಂಗತಿ ತಿಳಿದು ಬರುತ್ತದೆ. ಭದ್ರಬಾಹುವಿನಿಂದ ರಚಿತವಾದ **ಕಲ್ಪಸೂತ್ರ**ದಲ್ಲಿ ಚಂದ್ರಗುಪ್ತ ಮೌರ್ಯ ಸಾಮ್ರಾಟನು ಕನ್ನಡನಾಡಿನ ಕಲ್ಪಪ್ಪ ಅಥವಾ ಶ್ರವಣಬೆಳಗೊಳಕ್ಕೆ ಬಂದು ನೆಲಸಿ ಮೋಕ್ಷ ಗಳಿಸಿದ ವರ್ಣನೆಯಾಗಿದೆ. ಮೌರ್ಯ ಸಾಮ್ರಾಟರೆಂಬ ವಿಷಯದಲ್ಲಿ ಜಿಜ್ಞಾಸೆಯಿದ್ದಾಗ್ಯೂ ಕರ್ನಾಟಕ ಹಾಗೂ ದಕ್ಷಿಣ ಭಾರತದ ಹಲವಾರು ಸ್ಥಳಗಳು ಮತ್ತು ಇತರ ಸಂಗತಿಗಳು ಆ ವೇಳೆಗೆ ಉತ್ತರ ಭಾರತದಲ್ಲಿ ಪ್ರಸಿದ್ಧವಾಗಿದ್ದವೆಂಬ ಸಂಗತಿ ತಿಳಿದುಬರುತ್ತದೆ. ಶಾತವಾಹನ ಹಾಲನಿಂದ ರಚಿತವಾದ ಗಾಥಸಪ್ತಶತಿ ಪ್ರಾಕೃತ ಗ್ರಂಥದಲ್ಲಿ ಕನ್ನಡದ ಹಲವಾರು ಪದಗಳು ಪ್ರಯೋಗವಾಗಿವೆಯೆಂದು ಗೊತ್ತಾಗುತ್ತದೆ. ಪ್ರಾಚೀನ ತಮಿಳುನಾಡಿನ ಸಂಗಂ ಸಾಹಿತ್ಯ ಕೃತಿಗಳು ಆರಂಭದ ತಮಿಳುನಾಡಿನ ಇತಿಹಾಸ ರಚನೆ ಉಪಯುಕ್ತ ಮಾಹಿತಿಗಳನ್ನೊದಗಿಸುತ್ತವೆ. **ಶಿಲಪ್ಪಧಿಕಾರಂ** ಮತ್ತು **ಮಣಿಮೆಕಲಿ** ಗ್ರಂಥಗಳು ಚೋಳ, ಚೇರ ಮತ್ತು ಪಾಂಡ್ಯರ ಕಾಲದ ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಜೀವನದ ಮೇಲೆ ಬೆಳಕನ್ನು ಚಲ್ಲುತ್ತದೆ. ಸಿಂಹಳ ಮತ್ತು ಕರ್ನಾಟಕದೊಡಗಿನ ಸಂಬಂಧವನ್ನು ತಿಳಿಯಲು ಉಪಯುಕ್ತ ಮಾಹಿತಿಯನ್ನು ನೀಡುತ್ತದೆ. **ಶಿಲಪ್ಪಧಿಕಾರಂ** ಹಾಗೂ ಇತರ ಗ್ರಂಥಗಳಲ್ಲಿ ಕರ್ನಾಟಕಕ್ಕೆ ಸಂಬಂಧಿಸಿ ಹಾಗೂ ವಿಶೇಷವಾಗಿ ಕರ್ನಾಟಕದ ಮುಖ್ಯ ಬೆಳೆಗಳಲ್ಲೊಂದಾದ ರಾಗಿಯ ಬೆಳೆಗೆ ಸಂಬಂಧಿಸಿದ ವರ್ಣನೆಗಳಿವೆ. ಪ್ರಾಚೀನ ತಮಿಳು ವ್ಯಾಕರಣವಾದ **ತೊಳಕಾಪಿಯಂ** ಗ್ರಂಥವು ತಮಿಳರ ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನವನ್ನು ತಿಳಿಯಲು ಸಹಕಾರಿಯಾಗಿದೆ. ತಮಿಳುನಾಡಿನ ಪ್ರಬಂಧ ಸಾಹಿತ್ಯ ಪ್ರಕಾರಗಳು ಪ್ರಾಚೀನ ತಮಿಳು ಇತಿಹಾಸ ರಚನೆ ಪ್ರಮುಖ ಸಾಹಿತ್ಯ ಆಕಾರಗಳಾಗಿವೆ. ತಮಿಳುನಾಡಿನ ತಿರುವಳ್ಳವರ್ ಎಂಬ ದಾರ್ಶನಿಕ ಕವಿಯಿಂದ ರಚಿತವಾದ "**ತಿರುಕುರುಳ್**" ಗ್ರಂಥವು ರಾಜ ಶಾಸ್ತ್ರಕ್ಕೆ ಸಂಬಂಧಿಸಿದ ಅಪೂರ್ವ ಮಾಹಿತಿಯನ್ನೊಳಗೊಂಡಿದೆ.

ಸಂಗಂ ಯುಗದ ತರುವಾಯ ತಮಿಳುನಾಡಿನ ಇತಿಹಾಸವನ್ನು ರಚಿಸಲು ಪಲ್ಲವರ ಕಾಲದಲ್ಲಿ ಸೃಷ್ಠಿಯಾದ ಸಂಸ್ಕೃತ ಮತ್ತು ತಮಿಳು ಗ್ರಂಥಗಳು ಪ್ರಮುಖ ಸಾಹಿತ್ಯ ಆಕಾರಗಳಾಗಿವೆ. **ಕಿರಾತಾರ್ಜುನ ವಿಜಯ** ಗ್ರಂಥವನ್ನು ರಚಿಸಿದ ಭಾರವಿಕವಿಯು ಪಲ್ಲವರ ಸಿಂಹ ವಿಷ್ಣುವಿನ ಆಸ್ಥಾನದಲ್ಲಿದ್ದನು. ಈ ಸಾಹಿತ್ಯ ಕೃತಿ ಉಪಯುಕ್ತ ಮಾಹಿತಿಯನ್ನು ಒದಗಿಸುತ್ತದೆ. ಒಂದನೇ ಮಹೇಂದ್ರ ವರ್ಮನಿಂದ ರಚಿಸಿದ **ಮಥವಿಲಾಸ ಪ್ರಹಸನ**; ಎರಡನೆ ನರಸಿಂಹನ ಆಸ್ಥಾನದಲ್ಲಿದ್ದ ದಂಡಿನ್ ಕವಿಯ **ದಶಕುಮಾರಚರಿತ** ಮತ್ತು **ಕಾವ್ಯದರ್ಶನ** ಗ್ರಂಥಗಳು ಪಲ್ಲವರ ಕಾಲದ ಪ್ರಮುಖವಾದ ಸಾಹಿತ್ಯ ಆಕಾರಗಳಾಗಿವೆ.

ಚೋಳರ ಆಳ್ವಿಕೆ ಕಾಲದಲ್ಲಿ ಅಪಾರ ತಮಿಳ್ ಸಾಹಿತ್ಯ ಸೃಷ್ಟಿಯಾಯಿತು. ಆರಂಭದಲ್ಲಿ ಜೈನ ಕವಿಗಳು ಸಾಹಿತ್ಯ ರಚಿಸಿದರು. ತಿರುತ್ತಕ್ಕದೇವನಿಂದ ರಚಿತವಾದ **ಜೀವಿಕ ಚಿಂತಾಮಣಿ** ಕೃತಿ ಪ್ರಸಿದ್ಧಿಯಾಗಿದೆ. ಇದು ಕ್ರಿ.ಶ. 10 ನೇ ಶತಮಾನದಲ್ಲಿ ರಚಿತವಾದುದು. ಈ ಗ್ರಂಥವು ಕಂಬನ್‌ನ ಮೇಲೆ ಅಪಾರ ಪ್ರಭಾವ ಭೀರಿದೆ ಎನ್ನಲಾಗಿದೆ. ಕ್ರಿ.ಶ. 12 ನೇ ಶತಮಾನದಲ್ಲಿ ಕಂಬನನ್ನು ತಮಿಳು ಭಾಷೆಯಲ್ಲಿ ಮೊದಲಬಾರಿಗೆ **ರಾಮಾಯಣ** ಗ್ರಂಥವನ್ನು ರಚಿಸಿ ಪ್ರಸಿದ್ಧನಾದನು. ಜೈನ ಪುರಾಣಕ್ಕೆ ಸಂಬಂಧಿಸಿದಂತೆ ತೊಳಮೋಳಿ ಎಂಬುವನು **ಸುಲಮಣಿ** ಎಂಬ ಗ್ರಂಥವನ್ನು ರಚಿಸಿದನು. ಹಾಗೆ ಶೈವ ಸಿದ್ಧಾಂತಕ್ಕೆ ಸಂಬಂಧಿಸಿದಂತೆ ಸೆಕ್‌ಲಿಯಾಕ್ ಎಂಬುವನು ಪ್ರಸಿದ್ಧವಾದ **ಪೆರಿಯ ಪುರಾಣಂ** ಗ್ರಂಥ ರಚಿಸಿದನು. ಚೋಳರ ಕಾಲದಲ್ಲಿ ರಚಿತವಾದ ನಂದಿಯ ತಿರುವಿಲತ್ಪಾದಲ್ ಪುರಾಣಂ, ಅಂದರ್ ನಂಬಿಯಿಂದ ರಚಿಸಲ್ಪಟ್ಟ **ತಿರುಮ್ಮನರೈಕೊಂಡ** ಪುರಾಣಂಗಳು ಪ್ರಾಚೀನ ತಮಿಳರ ಧಾರ್ಮಿಕ ಜೀವನದ ಮೇಲೆ ಬೆಳಕನ್ನು ಚಲ್ಲುತ್ತದೆ. ಜಯನಗೊಂಡರ್‌ನಿಂದ ರಚಿತವಾದ **ಕಾಳಿನ್‌ಗಟ್ಟುಪರಾನ್ನೈ** ಗ್ರಂಥ ಕುಲ್ಲೋತುಂಗನ ಕಳಿಂಗದ ಮೇಲಿನ ದಿಗ್ವಿಜಯಗಳನ್ನು ವರ್ಣಿಸುತ್ತದೆ. ಈ ಕೃತಿಯನ್ನು ಪ್ರಾಚೀನ ಕಾಲದ ಅತ್ಯುತ್ತಮ ಸಮರ ಕಾವ್ಯವೆಂದು ಪರಿಗಣಿಸಲಾಗಿದೆ. ಎರಡನೇ ಕುಲೊತುಂಗ ಮತ್ತು ರಾಜೇಂದ್ರ ಚೋಳರನ್ನು ಕುರಿತು ಕುಟ್ಟನ್ ಎಂಬ ಕವಿಯು 'ಊಳ'ವಿಯ ಪ್ರಕಾರ ಕಾವ್ಯಗಳನ್ನು ರಚಿಸಿದ್ದಾನೆ. ಈ ತಮಿಳು ಮತ್ತು ಸಂಸ್ಕೃತ ಸಾಹಿತ್ಯಗಳು ಪ್ರಾಚೀನ ತಮಿಳುನಾಡಿನ ಇತಿಹಾಸ ರಚನೆಗೆ ಉಪಯುಕ್ತ ಮಾಹಿತಿಯನ್ನು ಒದಗಿಸಿಕೊಡುತ್ತದೆ.

ರಾಷ್ಟ್ರಕೂಟ ಕಾಲದಲ್ಲಿ ಅನೇಕ ಸಂಸ್ಕೃತ ಮತ್ತು ಕನ್ನಡ ಗ್ರಂಥಗಳು ರಚಿತವಾದವು. ಅಮೋಘವರ್ಷನ ಆಸ್ಥಾನದಲ್ಲಿದ್ದ ಕ್ರಿ.ಶ. 9 ನೇ ಶತಮಾನದಲ್ಲಿ ರಚಿತವಾದ **ಕವಿರಾಜಮಾರ್ಗವು** ಕನ್ನಡನಾಡಿನ ಭೌಗೋಳಿಕ ಎಲ್ಲೆ, ಭಾಷೆಯ ಬೆಳವಣಿಗೆ ಮತ್ತು ಜನರ ಆಚಾರ ವಿಚಾರಗಳನ್ನು ಕುರಿತಾದ ಮಾಹಿತಿಗಳನ್ನು ನೀಡುತ್ತದೆ. ರಾಷ್ಟ್ರ ಕೂಟ ಮುಮ್ಮಡಿ ಕೃಷ್ಣ ಚಕ್ರವರ್ತಿ ಸಾಮಾಂತನಾದ ವೇಮುಲವಾಡದ ಅರಿಕೇಸರಿ ಆಸ್ಥಾನದಲ್ಲಿದ್ದ ಹಾಗೂ ಕನ್ನಡ ಆದಿಕವಿಯೆಂದು ಪ್ರಸಿದ್ಧನಾದ ಪಂಪನ **'ಭಾರತ'** ವು ಅನೇಕ ಐತಿಹಾಸಿಕ ಸಂಗತಿಗಳನ್ನು ತಿಳಿಸುತ್ತದೆ. ಇಲ್ಲಿ ಪಂಪ ಕವಿ ತನ್ನ ಆಶ್ರಧಾತನನ್ನು ಮಹಾಭಾರತದ ಅರ್ಜುನನಿಗೆ ಸಮೀಕರಿಸಿ ಗ್ರಂಥ ರಚಿಸಿದ್ದಾನೆ. ಇದು '**ಪಂಪಭಾರತ**' ವೆಂದೇ ಪ್ರಸಿದ್ಧಿಯಾಗಿದೆ. ಅದೇ ರೀತಿಯಲ್ಲಿ ರನ್ನ ಕವಿಯು ತನ್ನ ಆಶ್ರಮದ ಸತ್ಯಾಶ್ರಮನನ್ನು ಮಹಾಭಾರತದ ಭೀಮನೊಂದಿಗೆ ಹೋಲಿಸಿ ಸಹ **ಸಭೀಮವಿಜಯ** ಎಂಬ ಶಕ್ತಿ ಕಾವ್ಯವನ್ನು ರಚಿಸಿದ್ದಾನೆ. ಇವು ಸಮಕಾಲೀನ ಬದುಕು ಮತ್ತು ರಾಜಕೀಯ ಘಟನೆಗಳನ್ನು ಅರಿಯಲು ಇತಿಹಾಸಕಾರನಿಗೆ ನೆರವಾಗಿದೆ. ಗಂಗ ಸಂತತಿಯ ಮುಖ್ಯ ಸಚಿವರಲ್ಲೊಬ್ಬನಾದ ಚಾವುಂಡರಾಯನು ರಚಿಸಿದ **ಚಾವುಂಡರಾಯು ಪುರಾಣವೂ** ಸಹ ಹಲವಾರು ಸಾಮಾಜಿಕ ಮತ್ತು ರಾಜಕೀಯ ಸಂಗತಿಗಳನ್ನೊಳಗೊಂಡಿದೆ.

ಚಾಲುಕ್ಯ ಸತ್ಯಾಶ್ರಯನ ಆಸ್ಥಾನ ಕವಿಯಾದ ರನ್ನನ ಗದಾಯುದ್ಧವು ಚಾಲುಕ್ಯ ಸಂತತಿಯ ಉಗಮ ಹಾಗೂ ತನ್ನ ಪೋಷಕನಿಗೆ ಸಂಬಂಧಿಸಿದ ವಿವರಗಳನ್ನೊದಗಿಸುತ್ತದೆ. ರನ್ನನ **ಅಜಿತನಾಥಪುರಾಣವು** ಸಹ ಇಮ್ಮಡಿ ತೈಲಪನಿಗೆ ಸಂಬಂಧಿಸಿದ ಹಲವು ಸಂಗತಿಯನ್ನೊಳಗಂಡಿದೆ. ಚಾಲುಕ್ಯ ಎರಡನೇ ಸೋಮೇಶ್ವರನ ಕಾಲದ **ಯಶಸ್ತಿಲಕ ಚಂಪು** ಮತ್ತು ವಿಜ್ಞಾನೇಶ್ವರನ **ಮಿತಾಕ್ಷರ** ಗ್ರಂಥಗಳು ಆದಿನ ಕಾಲದ ಸಾಮಾಜಿಕ ಹಾಗೂ ನ್ಯಾಯ ನಿಬಂಧನೆಗೆ ಸಂಬಂಧಿಸಿದ ಮಾಹಿತಿಯನ್ನೊಳಗೊಂಡಿವೆ. ಮೂರನೇ ಸೋಮೇಶ್ವರನ ಕೃತಿಯೆಂದು ನಂಬಲಾಗಿರುವ **ಮಾನಸೋಲ್ಲಾಸ** ಅಥವಾ **ಅಭಿಲಾಷಿರತ್ನ ಚಿಂತಮಣಿ** ಎಂಬ ಗ್ರಂಥವು ಸಮಕಾಲೀನ ರಾಜಕೀಯ, ಸಾಮಾಜಿಕ, ಧಾರ್ಮಿಕ ಹಾಗೂ ಇತರ ವಿಷಯಗಳಿಗೆ ಸಂಬಂಧಿಸಿದ ಅನೇಕ ಸಂಗತಿಗಳತ್ತ ಬೆಳಕು ನೀಡುತ್ತದೆ. ಆರನೇ ವಿಕ್ರಮಾದಿತ್ಯನ ಆಸ್ಥಾನ ಕವಿಯಾದ ಬಿಲ್ಹಣನಿಂದ ರಚಿತವಾದ **ವಿಕ್ರಮಾಂಕ ದೇವಚರಿತೆಯು** ಆಸಾಮ್ರಾಟನ ದಿಗ್ವಿಜಯಗಳನ್ನು ವರ್ಣಿಸುತ್ತದೆ. ಹಾಗೆಯೇ ಕುಂತಳದ ಉತ್ತರ ಭಾಗದಲ್ಲಿ ರಾಜ್ಯ ಸ್ಥಾಪಿಸಿದ ಸೇವುಣರ ಆಸ್ಥಾನದಲ್ಲಿ ರಚಿತವಾದ ಹೇಮಾದ್ರಿಯ ಚತುರ್ವರ್ಗ ಚಿಂತಾಮಣಿ ಮತ್ತು **ಸಾರಂಗ ಜೀವನ ಸಂಗೀತ ರತ್ನಾಕರ** ಗ್ರಂಥಗಳು ಆ ಕಾಲದ ಸಾಮಾಜಿಕ ಹಾಗೂ ಸಂಗೀತಕ್ಕೆ ಸಂಬಂಧಿಸಿದ ವರ್ಣನೆಗಳನ್ನೊಳಗೊಂಡಿದೆ.

ಹೊಯ್ಸಳರ ಕಾಲದಲ್ಲಿ ಸಂಸ್ಕೃತದಲ್ಲೂ ಹಾಗೂ ವಿಶೇಷವಾಗಿ ಕನ್ನಡದಲ್ಲೂ ಅನೇಕ ಗ್ರಂಥಗಳು ರಚನೆಯಾದವು. ಅಭಿನವ ಪಂಪನೆಂದು ಹೆಸರಾಗಿರುವ ನಾಗಚಂದ್ರನು ರಚಿಸಿದ **ರಾಮ ಚಂದ್ರ ಚರಿತಪುರಾಣವೂ** ಸೋಮನಾಥನ **ಕಲ್ಯಾಣಕಾರಕವೂ** ಹಲವಾರು ಸಮಕಾಲೀನ ಸಂಗತಿಗಳನ್ನೊಳಗೊಂಡಿದೆ. ವೀರಶೈವ ಪಂಥದ ಉದಯದೊಡನೆ ಕನ್ನಡದಲ್ಲಿ ಅನೇಕ ಗ್ರಂಥಗಳು ರಚನೆಯಾದವು. ಕ್ರಿ.ಶ. ಹನ್ನೆರಡನೇ ಶತಮಾನದಲ್ಲಿ ರಚಿತವಾದ ಹರಿಹರನ **ಬಸವರಾಜ ರಗಳೆ ಗಿರಿಜಾ** ಕಲ್ಯಾಣ ರಾಘವಾಂಕನ **ಹರಿಚಂದ್ರ ಕಾವ್ಯ** ಮತ್ತು **ಸಿದ್ಧಾರಾಮ ಚರಿತೆ** ಹಾಗೂ ವೀರಶೈವ ಸಂತರಿಂದ ರಚಿತವಾದ ವಚನಗಳು ಸಮಕಾಲೀನ ಸ್ಥಿತಿಗಳ ಮೇಲೆ ಸಾಕಷ್ಟು ಬೆಳಕು ಚಲ್ಲುತ್ತವೆ. ಕನ್ನಡದಲ್ಲಿ ಬ್ರಾಹ್ಮಣ ವರ್ಗದ ಮೊಟ್ಟಮೊದಲನೇ ಪ್ರಸಿದ್ಧ ಕವಿಯಾದ ರುದ್ರಭಟ್ಟನ **ಜಗನ್ನಾಥವಿಜಯ**, ರಾಜಾದಿತ್ಯನ **ವ್ಯವಹಾರಗಣಿತ**, ವೀರ ಬಲ್ಲಾಳನ ಆಸ್ಥಾನದ ಕವಿಯಾದ ಜನ್ನನ **ಯಶೋಧರ ಚರಿತೆ** ಮೊದಲಾದ ಗ್ರಂಥಗಳು ವಿಪುಲವಾದ ಐತಿಹಾಸಿಕ ಮಾಹಿತಿಯನ್ನೊಳಗೊಂಡಿವೆ. ಸಂಸ್ಕೃತದಲ್ಲಿ ರಚಿತವಾದ ವಿದ್ಯಾ ಚಕ್ರವರ್ತಿಯ **ಗದ್ಯ ಕರ್ಣಾಮೃತವೂ** ಸಹ ಹಲವು ಸಾಮಾಜಿಕ ಸಂಗತಿಗಳನ್ನೊಳಗೊಂಡಿದೆ. ಮಲ್ಲಿಕಾರ್ಜುನನ **ಸೂಕ್ತಿ ಸುಧಾರ್ಣವ, ಚೆನ್ನಬಸವ ಕಾಲಜ್ಞಾನ** ಹಾಗೂ ಅನಂತರ ರಚಿತವಾದ **ಹೊಯ್ಸಳ ರಾಜ್ಯಾಭ್ಯುದಯ,** ಕಂಪಿಲೆ ಕುಮಾರ ರಾಮನನ್ನು ಕುರಿತಾದ ಗ್ರಂಥಗಳು ಹಾಗೂ ತಮಿಳಿನಲ್ಲಿ ರಚಿತವಾದ **ರಾಜಕಾಲ ನಿರ್ಣಯ** ಎಂಬ ಗ್ರಂಥಗಳು ಹೊಯ್ಸಳ ಸಾಮ್ರಾಜ್ಯದ ಇತಿಹಾಸ ರಚನೆಗೆ ಸಹಕಾರಿಯಾಗವೆ. ಹೀಗೆ ದೇಶೀಯ ಸಾಹಿತ್ಯ ಆಕಾರಗಳು ಇತಿಹಾಸ ರಚನೆಗೆ ಸಹಕಾರಿಯಾಗುತ್ತವೆ. ಅವುಗಳಲ್ಲಿ ಕಾಣಬರುವ ಪ್ರಾಸಂಗಿಕ ಉಲ್ಲೇಖನಗಳು ಐತಿಹಾಸಿಕ ಅಂಶಗಳನ್ನೊಳಗೊಂಡಿವೆ.

## 3.3 ವಿದೇಶೀಯ ಬರವಣಿಗೆಗಳು

ದೇಶೀಯ ಬರವಣಿಗೆ ಜೊತೆಗೆ ನಮ್ಮ ದೇಶದ ಪ್ರಾಚೀನ ಇತಿಹಾಸ ರಚನೆಗೆ ವಿದೇಶಿಯರ ಬರವಣಿಗೆಗಳು ಅತಿ ಮುಖ್ಯ. ಸಂಬದ್ಧರಿತವೂ, ಸುಸಂಸ್ಕೃತವೂ ಆದ ಭಾರತ ವಿದೇಶೀಯ ರಾಜ್ಯಾಕಾಂಕ್ಷಿಗಳನ್ನೂ, ವಿದ್ವಾಂಸರನ್ನೂ, ವಾಣಿಜ್ಯೋದ್ಯಮಿಗಳನ್ನೂ, ದೇಶ ಪರ್ಯಟನಕಾರರನ್ನೂ ಪ್ರಾಚೀನ ಕಾಲದಿಂದಲೂ ಆಕರ್ಷಿಸಿತು. ನಮ್ಮ ದೇಶವನ್ನು ಸಂದರ್ಶಿಸಿದ ಅನೇಕ ವಿದ್ವಾಂಸರು ತಾವು ನೋಡಿದ ಮತ್ತು ಕೇಳಿದ ವಿಷಯಗಳನ್ನು ಬರೆದಿಟ್ಟರು. ಈ ಬರವಣಿಗೆಗಳು ಚರಿತ್ರೆಯ ರಚನೆಗೆ ಬಹು ಸಹಕಾರಿಯಾಗಿದೆ. ಪರಕೀಯ ಬರವಣಿಗೆಗಳಲ್ಲಿ ಹಲವು ಸಂದರ್ಭಗಳಲ್ಲಿ ಕೆಲವು ಕೊರತೆಗಳನ್ನು ಕಾಣುತ್ತೇವೆ. ಅವರಲ್ಲಿ ಕೆಲವರಿಗೆ ಈ ದೇಶದ ಭಾಷೆಗಳ ಪರಿಚಯವಿಲ್ಲದುದರಿಂದಲೂ ಮತ್ತು ಇಲ್ಲಿನ ಜನರ ಕೆಲವು ಧಾರ್ಮಿಕ ಮತ್ತು ಸಾಮಾಜಿಕ ವಿಧಿಗಳ ನಿಕಟ ಪರಿಚಯವಿಲ್ಲದುದರಿಂದಲೂ ಅವರ ಬರವಣಿಗೆಗಳು ಅನೇಕ ಸಂದರ್ಭಗಳಲ್ಲಿ ಸತ್ಯಕ್ಕೆ ದೂರವಾಗಿ ಕಂಡುಬರುತ್ತವೆ. ಪರಕೀಯರ ಬರವಣಿಗೆಗಳ ವಿಮರ್ಶನಾತ್ಮಕ ಮತ್ತು ವಿವೇಚನಾಯುತವಾದ ಅಧ್ಯಯನದಿಂದ ಪ್ರಾಚೀನ ಇತಿಹಾಸ ರಚನೆಗೆ ಬಹು ಉಪಕಾರವಾಗಿದೆ.

ಪ್ರಾಚೀನ ಕಾಲದಿಂದಲೂ ದಕ್ಷಿಣ ಭಾರತ ಹಾಗೂ ಕರ್ನಾಟಕವು ವಿದೇಶಗಳೊಡನೆ ವಾಣಿಜ್ಯ ಸಂಪರ್ಕವನ್ನು ಹೊಂದಿತ್ತು. ಗ್ರೀಕ್ ಹಾಗೂ ರೋಮನ್, ಅರೇಬಿಯಾ, ಚೀನಾ ದೇಶದ ವರ್ತಕರೂ ಹಾಗೂ ಪ್ರವಾಸಿಗಳೂ ಉಪಖಂಡದ ಪರ್ಯಾಯ ದ್ವೀಪವನ್ನೂ, ಕರ್ನಾಟಕವನ್ನೂ ಸಂದರ್ಶಿಸಿ ತಮ್ಮ ತಮ್ಮ ಗ್ರಂಥಗಳಲ್ಲಿ ಉಲ್ಲೇಖಿಸಿರುವರು. ಅಂತಹ ಉಲ್ಲೇಖನಗಳು ಇತಿಹಾಸ ರಚನೆಗೆ ಬಹಳ ಉಪಯುಕ್ತವಾಗಿವೆ. ಅನಾಮಧೇಯ ಕರ್ತೃವೊಬ್ಬನಿಂದ ರಚಿತವಾದ 'ಪೆರಿಪ್ಲಸ್ ಮಾರಿಸ್ ಎರಿತ್ರಿ' ಎಂಬ ಗ್ರಂಥವು ಶಾತವಾಹನರ ಕಾಲದ ಬಂದರುಗಳು ಹಾಗೂ ಆಮದು ರಫ್ತುಗಳ ವರ್ಣನೆಯನ್ನು ನೀಡುತ್ತದೆ. ಈ ವರ್ಣನೆಯಲ್ಲಿ ಕರ್ನಾಟಕದ ಉತ್ಪನ್ನಗಳೂ ಹಾಗೂ ಇತರ ಸಂಗತಿಗಳು ಅಡಕವಾಗಿದೆ. ಪ್ಲಿನಿಯು ತನ್ನ ಗ್ರಂಥವಾದ ಪ್ರಾಕೃತಿಕ ಭೂಗೋಳವನ್ನು ಕ್ರಿ.ಶ. ಒಂದನೇ ಶತಮಾನದಲ್ಲಿ ರಚಿಸಿದನೆಂದು ಕಾಣಬರುತ್ತದೆ. ಅವನು ದಕ್ಷಿಣ ಭಾರತದಿಂದ ಆಮದಾದ ವಸ್ತುಗಳ ಮುಖಾಂತರ ರೋಮನ್ ಸ್ತ್ರೀಯರು ಹೆಚ್ಚು ಸುವರ್ಣವನ್ನು ಭಾರತದತ್ತ ಹರಿಯಗೊಟ್ಟಿರುವರು

ಎಂದು ಉದ್ಗರಿಸಿರುವನು. ಅಂಥಹ ವಸ್ತುಗಳಲ್ಲಿ ಕರ್ನಾಟಕದ ಚಂದನ ಅಥವಾ ಶ್ರೀಗಂಧ ಮುಂತಾದವು ಸೇರಿರುವುದರಲ್ಲಿ ಅನುಮಾನವಿಲ್ಲ. ಕ್ರಿ.ಶ. ಎರಡನೇ ಶತಮಾನದಲ್ಲಿ ರಚಿತವಾದ ಟಾಲಮಿಯ ಭೂಗೋಳಶಾಸ್ತ್ರ ಗ್ರಂಥದಲ್ಲಿ ಭಾರತದ ಇತರ ಪ್ರದೇಶಗಳ ಜೊತೆಗೆ ಕರ್ನಾಟಕದ ಹಲವು ಪಟ್ಟಣಗಳಾದ ಬನವಾಸಿ, ಬಾದಾಮಿ, ಪಟ್ಟದಕಲ್ಲು ಮುಂತಾದವುಗಳ ವಿವರಣೆಯನ್ನು ನೀಡಿರುವುದು ಪಶ್ಚಿಮ ದೇಶಗಳೊಡನೆ ವ್ಯಾಪಾರ ವಾಣಿಜ್ಯ ಸಂಪರ್ಕವನ್ನು ಹೊಂದಿದ್ದ ಸಂಗತಿ ಮನವರಿಕೆಯಾಗುತ್ತದೆ.

ಬಾದಾಮಿ ಚಾಲುಕ್ಯರ ಕಾಲದಲ್ಲಿ ಚೀನಾ ದೇಶದ ಹ್ಯೂಯರ್ನತ್ಸಾಂಗ್ ಮತ್ತು ಅರೇಬಿಯಾದ ತಬಾರಿ ಇವರು ಕರ್ನಾಟಕವನ್ನು ಸಂದರ್ಶಿಸಿದ ವಿದೇಶಿಯರಲ್ಲಿ ಪ್ರಮುಖರು. ಹುಯನ್‌ತ್ಸಾಂಗನು ಕ್ರಿ.ಶ. 642 ರ ಸುಮಾರಿನಲ್ಲಿ ಚಾಲುಕ್ಯ ಸಾಮ್ರಾಜ್ಯದಲ್ಲಿ ಪ್ರವಾಸ ಮಾಡಿದನು. ಅವನು ಅಜಂತ, ಬಾದಾಮಿ, ಬನವಾಸಿ ಮೊದಲಾದ ಸ್ಥಳಗಳನ್ನು ಸಂದರ್ಶಿಸಿದನು. ಪುಲಕೇಶಿಯ ಪರಾಕ್ರಮ, ಅವನಿಂದ ಶ್ರೀಹರ್ಷನು ಪರಾಭವಗೊಂಡಿದ್ದು ಮತ್ತು ಇತರ ಅನೇಕ ಉಪಯುಕ್ತ ಸಂಗತಿಗಳನ್ನು ಅವನ ಗ್ರಂಥವು ಒಳಗೊಂಡಿದೆ. ಅರೇಬಿಯಾದಿಂದ ಬಂದಿದ್ದ ತಬಾರಿಯೂ ಸಹ ಪುಲಕೇಶಿಯ ಗುಣಗಾನ ಮಾಡಿರುವುದಲ್ಲದೆ ಅವನ ಮತ್ತು ಪರ್ಶಿಯಾದ ರಾಜನ ಮಧ್ಯೆ ಸ್ಥಾಪಿಸವಾಗಿದ್ದ ರಾಜತಾಂತ್ರಿಕ ಬಾಂಧವ್ಯವನ್ನು ಸ್ಮರಿಸಿರುವನು.

ರಾಷ್ಟ್ರಕೂಟ ಸಾಮ್ರಾಜ್ಯದ ಕಾಲದಲ್ಲಿ ಅರೇಬಿಯಾದ ಅನೇಕ ಪ್ರವಾಸಿಗರೂ ಹಾಗೂ ವರ್ತಕರು ಸಾಮ್ರಾಜ್ಯಕ್ಕೆ ಭೇಟಿ ನೀಡಿದರು. ಅವರಲ್ಲೆಲ್ಲಾ ಪ್ರಸಿದ್ಧನಾದವನು ಸುಲೇಮಾನ್ ಎಂಬುವನು. ಸುಲೇಮಾನನು ರಾಷ್ಟ್ರಕೂಟ ಚಕ್ರವರ್ತಿ ಅಮೋಘವರ್ಷ ನೃಪತುಂಗನ ಆಸ್ಥಾನವನ್ನು ಕ್ರಿ.ಶ. 851 ರಲ್ಲಿ ಸಂದರ್ಶಿಸಿದನು. ನೃಪತುಂಗನ ಘನತೆಯನ್ನು ಸಾಮ್ರಾಜ್ಯದ ಪ್ರಾಬಲ್ಯವನ್ನು ಹಾಗೂ ರಾಷ್ಟ್ರಕೂಟ ಮತ್ತು ಅರಬ್ ದೇಶಗಳೊಡನಿದ್ದ ವ್ಯಾಪಾರ ಸಂಪರ್ಕವನ್ನು ಮಿಗಿಲಾಗಿ ರಾಷ್ಟ್ರಕೂಟರಿಗೂ ಮತ್ತು ಗುರ್ಜರರಿಗೂ ಇದ್ದ ರಾಜಕೀಯ ವೈಷಮ್ಯ ಮೊದಲಾದ ಉಪಯುಕ್ತ ವರ್ಣನೆಯನ್ನು ನೀಡಿರುವನು. ಅನಂತರ ರಾಷ್ಟ್ರಕೂಟ ಸಾಮ್ರಾಜ್ಯವನ್ನು ಕುರಿತು ಬಾಗ್ದಾದಿನ ಅಲ್ ಮಸೂದಿ ಎಂಬುವನು ಹೆಚ್ಚು ಮಟ್ಟಿಗೆ ಸುಲೇಮಾನನ ವರ್ಣನೆಯನ್ನೇ ಹೋಲುವ ವಿವರವನ್ನು ನೀಡಿದ್ದಾನೆ.

ಅರಬ್ ಬರಹಗಾರರಲ್ಲಿ ಇಬನ್ ಬತೂತನು ಅತ್ಯಂತ ಪ್ರಮುಖನಾದವನು. ಇವನು ಮೊರಾಕ್ಕೋ ದೇಶದವನು. ಇವನು ಪ್ರವಾಸ ಕೈಗೊಂಡು ಭಾರತವನ್ನು ತಲುಪಿ ದೆಹಲಿಯ ಸಾಮ್ರಾಟ ಮೊಹಮ್ಮದ್ ಬಿನ್ ತೊಘಲಕ್‌ನ ಮನ್ನಣೆಗೆ ಪಾತ್ರನಾಗಿ, ಚೀನಾ ಪ್ರವಾಸವನ್ನು ಕೈಗೊಳ್ಳಲಾಗ ದಕ್ಷಿಣ ಭಾರತದ ಅನೇಕ ಪ್ರದೇಶಗಳು ಹಾಗೂ ಕರ್ನಾಟಕದ ತೀರಪ್ರದೇಶಗಳ ಮುಖಾಂತರ ಪ್ರಯಾಣ ಮಾಡಿದನು. ಇವನು ಕನ್ನಡನಾಡಿನ ಬಾರಕೂರು, ಮಂಗಳೂರು ಮೊದಲಾದ ರೇವುಗಳ ಮುಖಾಂತರ ಕೇರಳ ಹಾಗೂ ತಮಿಳುನಾಡನ್ನು ಸಂಪರ್ಕಿಸಿ ಇಲ್ಲಿನ ಜನರ ಆಚಾರ ವಿಚಾರ, ನಗನಾಣ್ಯಗಳು, ಆಹಾರ ಪಾನೀಯ ಹಾಗೂ ಇತರ ಹಲವಾರು ಸಂಗತಿಗಳನ್ನು ವರ್ಣಿಸಿರುವನು. ಹೊಯ್ಸಳ ಸಂತತಿಯ ಕೊನೆಯ ಸಾಮ್ರಾಟ ವೀರಬಲ್ಲಾಳನ ಅಂತ್ಯವನ್ನು ತಿಳಿಯಲು ಬತೂತನ ವಿವರಣೆ ಅತ್ಯಂತ ಉಪಯುಕ್ತ ಮಾಹಿತಿಯಾಗಿದೆ. ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ನಂತರ ಅನೇಕ ಮಂದಿ ಮಹಮ್ಮದೀಯ ಹಾಗೂ ಕ್ರೈಸ್ತ ಧರ್ಮದ ಪ್ರವಾಸಿಗಳು ದಕ್ಷಿಣ ಭಾರತಕ್ಕೆ ಸಂಬಂಧಿಸಿದ ಅನೇಕ ವಿವರಣೆಗಳನ್ನು ನೀಡಿದ್ದಾರೆ.

ಹೀಗೆ ದೇಶೀಯ ಹಾಗೂ ವಿದೇಶೀಯ ಬರವಣಿಗೆಗಳು ಇತಿಹಾಸ ರಚನೆಗೆ ಉಪಯುಕ್ತವೆಂಬ ಅಂಶವನ್ನು ಮನಗಾಣುವಾಗ ಅವುಗಳ ಲೋಪದೋಷಗಳ ವಿಚಾರವಾಗಿ ಎಚ್ಚರವಹಿಸಬೇಕಾಗಿದೆ. ಇತಿಹಾಸವನ್ನೇ ಗುರಿಯಾಗಿ ಹೊಂದಿರುವ ಹಾಗೂ ವಸ್ತುನಿಷ್ಠವಾದ ಗ್ರಂಥಗಳು ದೊರೆಯುವುದಿಲ್ಲ. ಸಾಮಾನ್ಯವಾಗಿ ಸಾಹಿತ್ಯ ಗ್ರಂಥಗಳು ಆಸ್ಥಾನ ಕವಿಗಳಿಂದ

ರಚಿತವಾಗಿದೆ. ತಮ್ಮ ತಮ್ಮ ಪೋಷಕರನ್ನು ಹೊಗಳುವ ಮತ್ತು ತಮ್ಮ ತಮ್ಮ ಮತಧರ್ಮಗಳನ್ನು ಪ್ರಚಾರ ಮಾಡುವ ದೃಷ್ಟಿಯಿಂದ ರಚಿತವಾಗಿರುವ ಗ್ರಂಥಗಳೇ ಹೆಚ್ಚು. ಆದ್ದರಿಂದ ಅವುಗಳು ಉತ್ಪ್ರೇಕ್ಷೆ ಹಾಗೂ ಹಲವು ಬಾರಿ ಸತ್ಯಕ್ಕೆ ದೂರವಾದ ಸಂಗತಿಗಳಿಂದ ಕೂಡಿವೆ. ಉದಾಹರಣೆ ಸೇವುಣರ ಆಸ್ಥಾನಕವಿಯಾದ ಹೇಮಾದ್ರಿಯು ತನ್ನ ಗ್ರಂಥದಲ್ಲಿ ಹೊಯ್ಸಳ - ಸೇವುಣರ ಪರಸ್ಪರ ಕಾದಾಟ ಜಯಾಪಜಯಗಳನ್ನು ವರ್ಣಿಸುವಾಗ ತನ್ನ ಪೋಷಕ ರಾಜನ ಸಂತತಿಯ ರಾಜರ ಅಪಜಯಗಳನ್ನು ವಿಜಯಗಳೆಂದೇ ವರ್ಣಿಸಿದ್ದಾನೆ. ತಮ್ಮ ತಮ್ಮ ಪೋಷಕ ರಾಜನ ಅಪಜಯಗಳನ್ನು ಯಾವ ಆಸ್ಥಾನ ಕವಿಯೂ ಸ್ಮರಿಸಿಲ್ಲ. ಅಷ್ಟೆ ಅಲ್ಲದೆ ಹೆಚ್ಚು ಗ್ರಂಥಗಳಲ್ಲಿ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳ ವರ್ಣನೆ ಅತ್ಯಂತ ಕಡಿಮೆಯೆಂದೆ ಹೇಳಬಹುದು.

ಹಾಗೆಯೇ ವಿದೇಶಿಯ ಬರಹಗಾರರ ಕೃತಿಗಳೂ ನ್ಯೂನತೆಯಿಂದ ಹೊರತಾಗಿಲ್ಲ. ಅವುಗಳಲ್ಲೂ ಸಾಕಷ್ಟು ಉತ್ಪ್ರೇಕ್ಷೆಗಳಿವೆ. ಸಾಮಾಜಿಕ ಮತ್ತು ಧಾರ್ಮಿಕ ಭಿನ್ನತೆಯಿಂದಾಗಿ ಹಲವು ಸಂದರ್ಭಗಳಲ್ಲಿ ಪರಕೀಯ ಬರವಣಿಗೆಗಳು ಅಸಮರ್ಪಕ ಮತ್ತು ಅಸ್ಪಷ್ಟ ವರ್ಣನೆಗಳಿಂದ ಕೂಡಿವೆ. ಕೆಲವು ಸಂದರ್ಭಗಳಲ್ಲಿ ಮಾತ್ರ ಅವುಗಳು ಸಾಮಾಜಿಕ, ಆರ್ಥಿಕ ಸ್ಥಿತಿಗಳ ಮೇಲೆ ವಿವರವಾದ ಮಾಹಿತಿ ನೀಡುತ್ತದೆ. ದೇಶೀಯ ಮೂಲದಿಂದ ದೊರೆಯುವ ಸಂಗತಿಗಳನ್ನು ವಿದೇಶೀಯ ಬರವಣಿಗೆಗಳೊಡನೆ ಹೋಲಿಸಿ ತುಲನಾತ್ಮಕವಾಗಿ ಪರೀಕ್ಷಿಸಿ ಅನಂತರ ಅವುಗಳನ್ನು ಉಪಯೋಗಿಸಿಕೊಳ್ಳಬೇಕಾಗುತ್ತದೆ. ದೇಶೀಯ ಮತ್ತು ವಿದೇಶೀಯ ಬರವಣಿಗೆಗಳಿಂದ ದೊರಯುವ ಮಾಹಿತಿಗಳಿಂದ ಇತಿಹಾಸದ ಸಮಗ್ರ ನಿರೂಪಣೆ ಸಾಧ್ಯವಿಲ್ಲದಿದ್ದರೂ ಅವುಗಳನ್ನು ನಿರ್ಲಕ್ಷಿಸುವಂತಿಲ್ಲ. ಅವುಗಳ ಜೊತೆಗೆ ಪ್ರಾಕ್ತನ ಶಾಸ್ತ್ರಾಧಾರಗಳನ್ನು ಉಪಯೋಗಿಸಿಕೊಂಡು ಇತಿಹಾಸದ ಪೂರ್ಣ ರಚನೆಗೆ ಪ್ರಯತ್ನಿಸಬೇಕಾಗುತ್ತದೆ.

## 3.4 ಮೌಖಿಕ ಪರಂಪರೆ ಮತ್ತು ದಂತ ಕಥೆಗಳು

ಮೇಲೆ ತಿಳಿಸಿದ ಸಂಪ್ರದಾಯಿಕ ಆಕರಗಳ ಜೊತೆಗೆ ಇತ್ತೀಚೆಗೆ ಮೌಖಿಕ ಪರಂಪರೆ ಮತ್ತು ದಂತಕಥೆಗಳನ್ನು ಆಧಾರಗಳಾಗಿ ಪರಿಗಣಿಸಿ ಸಾಮಾಜಿಕ ಇತಿಹಾಸದ ರಚನೆ ಕಾರ್ಯಕ್ಕೆ ಬಳಸಿಕೊಳ್ಳಲಾಗುತ್ತಿದೆ. ಆದರೆ ವಿದ್ವಾಂಸರು ಈ ಆಕರಗಳನ್ನು ಬಳಸಿಕೊಳ್ಳುವಲ್ಲಿ ಪರಿಪೂರ್ಣ, ಕ್ರಮಬದ್ಧ ಯತ್ನಗಳನ್ನು ಮಾಡಿಲ್ಲ. ಸಾಮಾಜಿಕ ಇತಿಹಾಸ ಪುನರ್ ರಚನೆಯಲ್ಲಿ ಈ ಪ್ರಕಾರದ ಆಧಾರಗಳು ಅಮೂಲ್ಯ ಮಾಹಿತಿಗಳನ್ನು ಒದಗಿಸಬಲ್ಲವು ಎಂಬುದು ಅನೇಕ ಸಂಶೋಧನ ವಿಷಯಗಳಿಂದ ತಿಳಿದು ಬಂದಿದೆ. ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ಅಥವಾ ಪೀಳಿಗೆಗೆ ವರ್ಗಾಯಿಸು ಮಾಹಿತಿಗಳನ್ನು ಮೌಖಿಕ ಆಕರಗಳೆಂದು ಅರ್ಥೈಯಿಸಲಾಗಿದೆ. ಈ ಮೌಖಿಕ ಆಕರಗಳು ಅನೇಕ ಮೂಲಗಳಿಂದ ದೊರೆಯುತ್ತವೆ. ಇವು ಒಬ್ಬ ವ್ಯಕ್ತಿ ಅಥವಾ ಒಬ್ಬರಿಗಿಂತ ಹೆಚ್ಚು ಮಂದಿಗಳಿಂದ ಪಡೆಯಬಹುದು ಹಾಗೂ ಸಮುದಾಯ ಅಥವಾ ಕೆಲವು ಸಂಘ ಸಂಸ್ಥೆಗಳಲ್ಲಿ ಮೌಖಿಕವಾಗಿ ಜ್ಞಾಪಕ ಶಾಲೆಯಲ್ಲಿ ಹುದುಗಿಸಿಟ್ಟಿರುವುದನ್ನು ಹೊರ ತೆಗೆದು ಮಾಹಿತಿಯನ್ನು ಸಂಗ್ರಹಿಸಬೇಕಾಗುತ್ತದೆ. ಅವು ಸಮಕಾಲೀನ ಆಧಾರಗಳಾಗುವುದಿಲ್ಲ ಆದರೆ ಗತಕಾಲದ ಸ್ಮರಣೆಗಳನ್ನು ಮುಂದಿನ ತಲೆಮಾರಿಗೆ ಮೌಖಿಕವಾಗಿ ತಲುಪಿಸಲಾಗಿದೆ. ಇವುಗಳಲ್ಲಿ ಕಂಡು ಬರುವ ಮಹಾಲೋಪವೆಂದರೆ ಅವುಗಳಲ್ಲಿ ಕಾಲಗಣನೆ ಇಲ್ಲದಿರುವುದು. ಅವುಗಳಲ್ಲಿ ಕಾಲಗಣನೆ ವಿಷಯ ಇಲ್ಲದಿರುವುದರಿಂದ ಅವುಗಳಲ್ಲಿ ದೊರಕುವ ಮಾಹಿತಿ ಐತಿಹಾಸಿಕವೆಂದು ಪರಿಗಣಿಸಲು ಬರುವುದಿಲ್ಲವೆಂಬ ಅಭಿಪ್ರಾಯವಿದೆ. ಆದರೆ ಈ ಸಂಪ್ರದಾಯಿಕ ನಿಲುವಿಗೆ ಉತ್ತರವಾಗಿ ಹೊಸ ಸಂಶೋಧನ ವಿಧಾನಗಳನ್ನು ಬಳಸಿಕೊಂಡ ಸಾಮಾಜಿಕ ಇತಿಹಾಸದಲ್ಲಿ ತೊಡಗಿದ್ದಾರೆ.

ರೈತರ ಜಾನಪದ, ಲಾವಣಿಗಳು, ಬುಡಕಟ್ಟುಗಳ ಮೌಖಿಕ ಹಾಡುಗಳು ಮತ್ತು ಸಮಾಜದಲ್ಲಿ ಇಂದು ರೂಡಿಯಲ್ಲಿರುವ ಕೆಲವು ರೂಢಿ ಪದ್ಧತಿಗಳೇ ಈ ಮೌಖಿಕ ಆಕರಗಳ

ಮೂಲ ನೆಲೆಯಾಗಿವೆ. ಅವು ನಿಕರವಾದ ಐತಿಹಾಸಿಕ ಮಾಹಿತಿಯನ್ನು ಕೊರತೆಯಿದೆ. ಆದರೆ ಸಾಮಾಜಿಕ ಪಳೆಯುಳಿಕೆ ರೂಪದಲ್ಲಿ ನಮ್ಮ ಅನೇಕ ಸಾಮಾಜಿಕ ಸಂಸ್ಥೆಗಳೂ, ಸಂಪ್ರದಾಯ ಪದ್ಧತಿಗಳಲ್ಲಿ, ಹಲವಾರು ಆಚರಣೆಗಳಲ್ಲಿ ಹೇರಳವಾದ ಮಾಹಿತಿ ದೊರಕುತ್ತದೆ. ಈ ಮೌಖಿಕ ಆಧಾರಗಳಲ್ಲಿ ದೊರಕುವ ಮಾಹಿತಿಗಳು ಸಾಹಿತ್ಯ ಮತ್ತು ಶಾಸನ ಆಧಾರಗಳಿಂದ ದೊರೆಯುವುದಿಲ್ಲ. ಏತಕ್ಕೆಂದರೆ ಈ ಆಧಾರಗಳು ಸಮಾಜದ ಕೇವಲ ಒಂದು ವರ್ಗದ ಬಗ್ಗೆ ಮಾಹಿತಿ ಒದಗಿಸುತ್ತವೆ. ಶ್ರೀಸಾಮಾನ್ಯನ ಆಗು ಹೋಗುಗಳ ಬಗ್ಗೆ ಹೆಚ್ಚಿನ ಮಾಹಿತಿ ಕೊಡುವುದಿಲ್ಲ. ಈ ಕೊರತೆಯನ್ನು ಮೌಖಿಕ ಆಧಾರಗಳು ತುಂಬುತ್ತವೆಂದು ಇತ್ತೀಚಿನ ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಅಧೀನ ಸಮಾಜದ ಇತಿಹಾಸ ರಚನೆಯಲ್ಲಿ ಈ ಮೌಖಿಕ ಆಧಾರಗಳು ಮತ್ತು ದಂತಕತೆಗಳು ಪ್ರಮುಖ ಪಾತ್ರ ವಹಿಸುತ್ತಿವೆ. ಗತಕಾಲದ ಸಮಗ್ರ ಸಾಮಾಜಿಕ ಇತಿಹಾಸ ಪುನರ್‌ರಚನೆಗೆ ಸಾಮಾಜಿಕ ಮಾನವ ವಿಜ್ಞಾನ ವಿಧಾನಗಳು ಮತ್ತು ಕ್ಷೇತ್ರ ಅಧ್ಯಯನದಿಂದ ಪಡೆದ ಮಾಹಿತಿಗಳು ಬಹಳ ಮಟ್ಟಿಗೆ ನೆರವು ನೀಡುತ್ತವೆ. ವಿಧಾನಗಳ ಹಿನ್ನೆಲೆಯಲ್ಲಿ ಮೌಖಿಕ ಆಕರಗಳನ್ನು ಪರೀಕ್ಷಿಸಿ ಇತಿಹಾಸ ರಚನೆಗೆ ಬಳಸಿಕೊಂಡ ಉತ್ತಮ ಫಲಿತಾಂಶ ದೊರೆಯುವುದರಲ್ಲಿ ಅನುಮಾನವಿಲ್ಲ.

## 3.5 ಸಾರಾಂಶ

ಇತಿಹಾಸ ರಚನೆಯಲ್ಲಿ ಸಾಹಿತ್ಯ ಆಧಾರಗಳ ಮಹತ್ವವನ್ನು ಈ ಘಟಕದಲ್ಲಿ ಕಲಿಯಲು ಯತ್ನಿಸಿದ್ದೇವೆ. ನಮ್ಮ ದೇಶದ ಪ್ರಾಚೀನರಲ್ಲಿ ಐತಿಹಾಸಿಕ ಪ್ರಜ್ಞೆಯ ಕೊರತೆ ಮತ್ತು ಅದರ ಪರಿಣಾಮವಾಗಿ ಗತಕಾಲವನ್ನು ಕುರಿತು ಬರೆದಿರುವ ಐತಿಹಾಸಿಕ ಕೃತಿಗಳನ್ನು ಈ ಘಟಕದಲ್ಲಿ ಅಧ್ಯಯನಿಸಿದ್ದೀರಿ. ಆದರೂ ನಮ್ಮ ಪ್ರಾಚೀನರು ವಿಪುಲವಾದ ಸಾಹಿತ್ಯ ರಾಶಿಯನ್ನೇ ಬಿಟ್ಟು ಹೋಗಿದ್ದಾರೆ. ಇವು ನಮ್ಮ ದೇಶದ ವಿವಿಧ ಭಾಷೆಗಳಲ್ಲಿ ದೊರೆಯುತ್ತವೆ. ಇವುಗಳನ್ನು ಅರ್ಥಮಾಡಿಕೊಂಡು ಮಾಹಿತಿ ಸಂಗ್ರಹಿಸಿ ಇತಿಹಾಸ ರಚನೆ ಮಾಡುವುದು ಪ್ರಯಾಸದ ಕಾರ್ಯ ಎಂಬುದನ್ನು ನೀವು ಗಮನಿಸಿದ್ದೀರಿ.

ಈ ಸಾಹಿತ್ಯ ಆಧಾರಗಳನ್ನು ನಮ್ಮ ಅಧ್ಯಯನದ ಅನುಕೂಲಕ್ಕಾಗಿ ಎರಡು ಭಾಗವಾಗಿ ವಿಂಗಡಿಸಿದ್ದೇವೆ. ದೇಶೀಯ ಮತ್ತು ವಿದೇಶೀಯ ಸಾಹಿತ್ಯ ಆಧಾರಗಳಾಗಿ ವರ್ಗೀಕರಿಸಲಾಗಿದೆ. ಈ ದೇಶೀಯ ಸಾಹಿತ್ಯ ಮತೀಯ ಅಥವಾ ಧಾರ್ಮಿಕ ಗ್ರಂಥಗಳಾಗಿ ಮತ್ತು ಲೌಕಿಕ ಕೃತಿಗಳೆಂದು ಮತ್ತೆ ವಿಭಾಗಿಸಿಕೊಳ್ಳಲಾಗಿದೆ. ಈ ಸಾಹಿತ್ಯ ಆಧಾರಗಳ ಇತಮಿತಿ, ಲೋಪದೋಷಗಳನ್ನು ನಿಮ್ಮ ಗಮನಕ್ಕೆ ತರಲಾಗಿ ಇವುಗಳನ್ನು ಬಹಳ ಎಚ್ಚರಿಕೆಯಿಂದ ಇತಿಹಾಸ ರಚನೆಯಲ್ಲಿ ಬಳಸಿಕೊಳ್ಳಬೇಕಾಗುತ್ತದೆ. ಸತ್ಯಮಿತ್ಯ ಮಿಶ್ರಣದಿಂದ ಕೂಡಿದ್ದೂ, ಇತಿಹಾಸಕ್ಕೆ ಪೌರಾಣಿಕ ಸಂಗತಿಗಳನ್ನು ಹೆಣೆದು ಬರೆಯಲಾಗಿದೆ. ಈ ಸಾಹಿತ್ಯ ಆಧಾರಗಳನ್ನು ವಿಶೇಷ ವಿಧಾನಗಳನ್ನು ಬಳಸಿಕೊಂಡು ಐತಿಹಾಸಿಕ ಮಾಹಿತಿ ಪಡೆಯಬೇಕಾಗುತ್ತದೆ ಎಂಬ ವಿಷಯವನ್ನು ನಿಮ್ಮ ಗಮನಕ್ಕೆ ತರಲಾಗಿದೆ.

ಇತ್ತೀಚಿನ ಸಾಮಾಜಿಕ ಇತಿಹಾಸ ಪುನರ್ ರಚನೆಯಲ್ಲಿ ಸ್ವದೇಶೀ ಮತ್ತು ವಿದೇಶಿ ಸಾಹಿತ್ಯದ ಜೊತೆಗೆ ಮೌಖಿಕ ಮತ್ತು ದಂತಕತೆಗಳನ್ನು ಆಕರಗಳನ್ನಾಗಿ ಬಳಸಲಾಗುತ್ತಿದೆ. ಇದು ಜನಪದ ಲೋಕಕ್ಕೆ ಸೇರಿದ ವಿಪುಲವಾದ ಅಲಿಖಿತ ಆಧಾರಗಳು. ಇವುಗಳಲ್ಲೂ ಕಾಲಗಣನೆ ಕೊರತೆ ಇದ್ದಾಗೂ ಅವುಗಳನ್ನು ನವೀನ ಸಾಮಾಜಿಕ ಮಾನವ ವಿಜ್ಞಾನ ವಿಧಿವಿಧಾನಗಳು ಮತ್ತು ಕ್ಷೇತ್ರ ಅಧ್ಯಾಯನದಿಂದ ಪಡೆದ ಮಾಹಿತಿಗಳಿಂದ ಗತಕಾಲದ ಸಾಮಾಜಿಕ ಇತಿಹಾಸ ಪುನರ್ ರಚನೆಗೆ ಉತ್ತಮ ಫಲಿತಾಂಶ ನೀಡಿರುವ ವಿಚಾರವನ್ನು ನಿಮ್ಮ ಗಮನಕ್ಕೆ ತರಲಾಗಿದೆ. ಈ ಮೌಖಿಕ ಆಕರಗಳು ಸಬಾಲ್ಟ್ರನ್ ಅಧ್ಯಯನಗಳಿಗೆ (ಅಧೀನ ಸಮಾಜದ ವರ್ಗಗಳ) ವಿಶೇಷವಾಗಿ ಸಹಕಾರಿಯಾಗಿವೆ ಎಂಬ ವಿಷಯವನ್ನು ಮನದಟ್ಟು ಮಾಡಿಕೊಡಲು ಈ ಘಟಕದಲ್ಲಿ ಯತ್ನಿಸಿರುವುದನ್ನು ನಿಮ್ಮ ಗಮನಕ್ಕೆ ತರಲಾಗಿದೆ.

## 3.6 ಸ್ವಪರೀಕ್ಷೆ ಪ್ರಶ್ನೆಗಳು

1. ಇತಿಹಾಸ ರಚನೆಗೆ ಸಾಹಿತ್ಯ ಆಧಾರಗಳ ಮೌಲ್ಯಗಳನ್ನು ಕುರಿತು ಚರ್ಚಿಸಿರಿ
2. ಇತಿಹಾಸ ರಚನೆಯಲ್ಲಿ ಸಾಹಿತ್ಯ ಆಧಾರಗಳ ಮಹತ್ವ ಮತ್ತು ಅವುಗಳ ನ್ಯೂನತೆಗಳನ್ನು ತಿಳಿಸಿ.
3. ಸ್ವದೇಶಿ ಸಾಹಿತ್ಯ ಆಕರಗಳು ಇತಿಹಾಸ ರಚನೆಗೆ ಹೇಗೆ ನೆರವು ನೀಡುತ್ತವೆ - ವಿಮರ್ಶಾತ್ಮಕವಾಗಿ ಪರಿಶೀಲಿಸಿ

*ಟಿಪ್ಪಣಿ ಬರೆಯಿರಿ*

1) ಧಾರ್ಮಿಕ ಸಾಹಿತ್ಯಾಧಾರಗಳನ್ನು ಕುರಿತು ಚರ್ಚಿಸಿ.
2) ಲೌಕಿಕ ಕೃತಿಗಳನ್ನು ಕುರಿತು ದು ಟಿಪ್ಪಣಿ ಬರೆಯಿರಿ
3) ಪರ್ಷಿಯನ್ ಮತ್ತು ಗ್ರೀಕರ ಬರವಣಿಗೆಗಳ ಮಹತ್ವವನ್ನು ಕುರಿತು ಬರೆಯಿರಿ
4) ಚೀನೀ ಸಾಹಿತ್ಯಗಳನ್ನು ಕುರಿತು ಬರೆಯಿರಿ
5) ಜಾನಪದ ಸಾಹಿತ್ಯದ ಆಕಾರಗಳು ಅಥವಾ ಮೌಖಿಕ ಆಕಾರಗಳು ಸಹಕಾರವನ್ನು ಕುರಿತು ಚರ್ಚಿಸಿ

## 3.7 ಹೆಚ್ಚಿನ ಅಧ್ಯಯನಕ್ಕಾಗಿ ಗ್ರಂಥಗಳು


(1) Romila Thapar : **Society and Historical Conciousness : the Ttihasa - Purana Tradition in Interpreting Early India.**

(2) Desai .P.B. : A History of Karnataka

(3) K.A. Nilakanta Sastri : Sources of Indian History

(4) Romila Thapar(Ed.) : Recent Perspectivies of Early Indian History

(5) Diwakar .R.R. (Ed.) : Karnataka through the Ages

(6) Rangaswamiah .G.R. : ಪ್ರಾಚೀನ ಭಾರತ

(7) Rangaswamaiah .G.R. : ಕರ್ನಾಟಕದ ಸಂಕ್ಷಿಪ್ತ ಚರಿತ್ರೆ

(8) Mugali R.S. : Heritage of Karnataka

(9) Karashinna .N. : South Indian History and Society

(10) Burton Stein : Peasant State and Society in Medival South India.


ಪ್ರೊ|| ಮಾದೇಗೌಡ

# ಟಿಪ್ಪಣಿಗಳು

## ಬ್ಲಾಕ್ - 1

## ಘಟಕ - 4

# ಪ್ರಾಗೈತಿಹಾಸಿಕ ಸಂಸ್ಕೃತಿ

**ವಿಷಯ ಕ್ರಮ**


**4.0** ಘಟಕದ ಉದ್ದೇಶ

**4.1** ಪೀಠಿಕೆ

**4.2** ದಖನ್ ಮತ್ತು ದಕ್ಷಿಣ ಭಾರತದಲ್ಲಿ ಆದಿಮಾನವ

**4.3** ಹಳೆಶಿಲಾಯುಗದ ಸಂಸ್ಕೃತಿ

**4.4** ನವಶಿಲಾಯುಗದ ಸಂಸ್ಕೃತಿ

**4.5** ತಾಮ್ರ - ಶಿಲಾಯುಗದ ಸಂಸ್ಕೃತಿ

**4.6** ಬೃಹತ್ ಶಿಲಾಯುಗ (ಮೆಗಲಿಥಿಕ್) ಸಂಸ್ಕೃತಿ

**4.7** ಸಾರಾಂಶ

**4.8** ಸ್ವಪರೀಕ್ಷೆ ಪ್ರಶ್ನೆಗಳು

**4.9** ಹೆಚ್ಚಿನ ಅಧ್ಯಯನಕ್ಕಾಗಿ ಗ್ರಂಥಗಳು

## 4.0 ಘಟಕ ಉದ್ದೇಶ

ದಖ್ಖನ್ ಮತ್ತು ದಕ್ಷಿಣ ಭಾರತದಲ್ಲಿ ಇತಿಹಾಸ ಪೂರ್ವ ಕಾಲದ ಆದಿಮಾನವನ ಅಸ್ತಿತ್ವ, ಅವನ ಚಟುವಟಿಕೆ ಮತ್ತು ಅವನ ಸಾಧನೆಗಳನ್ನು ಪರಿಚಯಿಸಿಕೊಳ್ಳುವುದು ಈ ಘಟಕದ ಉದ್ದೇಶ. ಈ ಘಟಕವನ್ನು ಅಭ್ಯಾಸಮಾಡಿದ ಮೇಲೆ ಈ ಕೆಳಗಿನ ಅಂಶಗಳನ್ನು ಅರಿವಿರಿ:

* ಪ್ರಾಗೈತಿಹಾಸಿಕ ಅರ್ಥ ವಿವರಣೆಯನ್ನು ತಿಳಿವಿರಿ
* ದಖನ್ ಮತ್ತು ದಕ್ಷಿಣ ಭಾರತದಲ್ಲಿ ಆದಿಮಾನವನ ಪಳೆಯುಳಿಕೆಗಳ ಬಗೆಗೆ ಇರುವ ಜಿಜ್ಞಾಸೆಗಳು
* ಹಳೆಶಿಲಾಯುಗದ ಪ್ರಮುಖ ನೆಲೆಗಳು ಮತ್ತು ಅದರ ಪ್ರಮುಖ ಲಕ್ಷಣಗಳು
* ನವಶಿಲಾಯುಗ ಸಂಸ್ಕೃತಿಯ ಪ್ರಮುಖ ಸಾಧನೆಗಳು
* ನವಶಿಲಾಯುಗದ ಜೊತೆಯಲ್ಲಿ ಮುಂದುವರಿದ ತಾಮ್ರ - ಶಿಲಾಯುಗದ ಸಂಸ್ಕೃತಿ ಮತ್ತು ಅದರ ಲಕ್ಷಣ
* ಮೆಗಾಲಿಥಿಕ್ ಅಥವಾ ಬೃಹತ್ ಶಿಲಾಯುಗದ ವಿಶಿಷ್ಟ ಲಕ್ಷಣಗಳು

## 4.1 ಪೀಠಿಕೆ

ನಮ್ಮ ದೇಶದ ಇತಿಹಾಸವನ್ನು ಆಕಾರಗಳಿಗನುಗುಣವಾಗಿ ಎರಡು ಭಾಗಗಳಾಗಿ ವಿಂಗಡಿಸಿಕೊಳ್ಳಬಹುದು. (1) ಪ್ರಾಗೈತಿಹಾಸಕಾಲ ಅಥವಾ ಇತಿಹಾಸ ಪೂರ್ವ ಕಾಲ (2) ಇತಿಹಾಸ ಕಾಲವೆಂದು ವಿಭಾಗಿಸಿಕೊಳ್ಳಬಹುದು. ಬರವಣಿಗೆಗಳು ಜಾರಿಗೆ ಬಂದಮೇಲೆ ಮಾನವನು ತನ್ನ ಅನುಭವವನ್ನು ದಾಖಲಿಸಿ ಬರೆದಿಡುವುದನ್ನು ಆರಂಭಿಸಿದನು. ಈ ಕಾಲವನ್ನು ಇತಿಹಾಸ ಕಾಲವೆಂದು ಕರೆಯುತ್ತೇವೆ. ಈ ಅವಧಿಯಲ್ಲಿ ಬರವಣಿಗೆ ಆಧಾರಿತ ಆಕಾರಗಳು ಹೆಚ್ಚು ಸಂಖ್ಯೆಯಲ್ಲಿ ದೊರೆಯುತ್ತವೆ ಮತ್ತು ಅವುಗಳೇ ಇತಿಹಾಸ ರಚನೆಗೆ ಪ್ರಮುಖ ಆಧಾರಗಳಾಗಿರುತ್ತವೆ. ಇದಕ್ಕಿಂತ ಪೂರ್ವ ಕಾಲದ ಅಂದರೆ ಲಿಖಿತ ರಹಿತ ಕಾಲವನ್ನು ಪ್ರಾಗೈತಿಹಾಸ ಕಾಲವೆಂದು ಕರೆಯುತ್ತೇವೆ. ಈ ಕಾಲದ ಇತಿಹಾಸ ರಚನೆಗೆ ನಾವು ಸಂಪೂರ್ಣವಾಗಿ ಪುರಾತತ್ತ್ವ ಆಕಾರಗಳನ್ನು ಅವಲಂಬಿಸಬೇಕಾಗುತ್ತದೆ. ಮಾನವನ ನಾಗರೀಕತೆಯ ಪಳೆಯುಳಿಕೆಗಳು ಮತ್ತು ಸಾಂಸ್ಕೃತಿಕ ಅವಶೇಷಗಳೇ ಪ್ರಾಗೈತಿಹಾಸ ಕಾಲದ ಮಾನವನ ಸಾಧನೆಯನ್ನು ಅರಿಯುವ ಪ್ರಮುಖ ಅಲಿಖಿತ ದಾಖಲೆಗಳು. ಈ ಕಾಲದಲ್ಲಿ ಆದಿಮಾನವನ ವಿವಿಧ ಹಂತದ ನಾಗರೀಕತೆಯ ಮಜಲುಗಳನ್ನು ಕಾಣಬಹುದು. ಈ ಕಾಲದ ಸಂಸ್ಕೃತಿಯನ್ನು ಶಿಲಾಯುಗದ ಸಂಸ್ಕೃತಿಯೆಂದು ಕರೆಯಲಾಗಿದೆ. ಇದು ವಿಶ್ವವ್ಯಾಪ್ತಿಯಾಗಿದ್ದು ಭಾರತದಲ್ಲೂ ಈ ಯುಗದಲ್ಲಿ ಮಾನವನ ಆರಂಭದ ನೆಲೆಗಳು ಮತ್ತು ಶಿಲಾಯುಗ ಸಂಸ್ಕೃತಿಯ ವಿವಿಧ ಹಂತಗಳನ್ನು ಅಧ್ಯಯನಿಸಬಹುದು. ಈ ಅವಧಿಯು ಸಂಸ್ಕೃತಿ ಮುಂದಿನ ಲೋಹಯುಗ ಸಂಸ್ಕೃತಿಗೆ ಭದ್ರವಾದ ಬುನಾದಿಯನ್ನು ಹಾಕಿಕೊಟ್ಟಿತೆನ್ನಬಹುದು.

## 4.2 ದಖನ್ ಮತ್ತು ದಕ್ಷಿಣ ಭಾರತದಲ್ಲಿ ಆದಿಮಾನವ

ಭಾರತದ ಉಪಖಂಡದಲ್ಲಿ ಮಾನವನ ಉಗಮದ ಗುರುತುಗಳಿಲ್ಲದಿರುವುದರಿಂದ ಭಾರತವನ್ನು ಮಾನವನ ಉಗಮ ಸ್ಥಾನಗಳಲ್ಲೊಂದು ಎಂದು ಪರಿಗಣಿಸಲು ಸಾಧ್ಯವಿಲ್ಲ ಎಂಬ ಅಭಿಪ್ರಾಯವನ್ನು ಪುರಾತತ್ವಶಾಸ್ತ್ರಜ್ಞರು ಮತ್ತು ಮಾನವಶಾಸ್ತ್ರಜ್ಞರು ಬಹಳ ಕಾಲದವರೆಗೆ ತಾಳಿದ್ದರು. ಈ ತಜ್ಞರ ಪ್ರಕಾರ ಮಾನವನು ಬೇರೆ ಕಡೆಯಿಂದ ಭಾರತಕ್ಕೆ ವಲಸೆ ಬಂದು ನಾಗರೀಕತೆಯನ್ನು

ರೂಪಿಸಿರಬಹುದೆಂದು ನಂಬಿದ್ದರು. ಆದರೆ ಇಪ್ಪತ್ತನೇ ಶತಮಾನದ ಆರಂಭದಲ್ಲಿ ಈ ದಿಶೆಯಲ್ಲಿ ನಡೆದ ಸಂಶೋಧನೆಗಳು ಈ ಅಭಿಪ್ರಾಯವನ್ನು ಅಲ್ಲಗಳೆದಿದೆ. ಇ.ಓ. ಜೇಮ್ಸ್ ಎಂಬುವರು ಆದಿಮಾನವನ ಅವಶೇಷಗಳನ್ನು ಹಿಮಾಲಯದ ಸಿವಾಲಿಕ್ ಬೆಟ್ಟಗಳಲ್ಲಿ ಪತ್ತೆ ಹಚ್ಚಿ ಪ್ರಕಟಿಸಿದರು. ಇವನನ್ನು ಸಿವಪಿತೆಕಸ್ ಎಂದು ಮಾನವಶಾಸ್ತ್ರಜ್ಞ ಕರೆದಿದ್ದಾರೆ. ಇವನು ಆಧುನಿಕ ಮಾನವನ ಪೂರ್ವಜನೆಂದು ಭಾವಿಸಲಾಗಿದೆ. ಮಂಗ ಮಾನವ ಗೆರಿಲ್ಲಾ, ಗಿಬ್ಬನ್, ಚಿಂಪಾಂಜಿಗಳನ್ನು ಹೋಲುವ ಆಧುನಿಕ ಮಾನವನ ಪೂರ್ವಿಕನಾಗಿದ್ದನೆಂದು ನಂಬಲಾಗಿದೆ.

ಭೂಗರ್ಭಶಾಸ್ತ್ರಜ್ಞರರ ಪ್ರಕಾರ ಇಂಡಿಯ ದೇಶದಲ್ಲಿ ದಖನ್ ಪ್ರದೇಶಗಳು ಅತ್ಯಂತ ಪ್ರಾಚೀನವಾದುದು ಹಾಗೂ ಈ ಭಾಗವು ಭಾರತದಲ್ಲಿ ಮಾನವಮ ಅತಿ ಪ್ರಾಚೀನವಾದ ನಿವಾಸಸ್ಥಾನವಾಗಿದ್ದಿತ್ತೆಂದು ತಿಳಿಸಿದ್ದಾರೆ. ಆದರೆ ಆದಿಮಾನವನ ಉಗಮದ ಬಗ್ಗೆ ಸಂಬಂಧಿಸಿದಂತೆ ಆದಿಮಾನವನಿಗೆ ಸಂಬಂಧಿಸಿದ ಪಳೆಯುಳಿಕೆಗಳಾದ ತಲೆಬುರುಡೆ ಮೂಳೆಗಳು ದೊರೆಯದೆ ಇರುವುದು ಜಿಜ್ಞಾಸೆಗೆ ಎಡೆಮಾಡಿಕೊಟ್ಟಿದೆ. ಈ ತರಹ ಆದಿಮಾನವ ಪಳೆಯುಳಿಕೆಗಳು ದೊರೆಯದೆ ಇರುವುದಕ್ಕೆ ತಜ್ಞರು ಹೊಸ ಅಭಿಪ್ರಾಯವನ್ನು ಮಂಡಿಸಿದ್ದಾರೆ. ಅವರ ಪ್ರಕಾರ ಈ ಯುಗದ ಭಾರತದ ಆದಿಮಾನವ ಗುಹೆಗಳನ್ನು ತನ್ನ ನಿವಾಸ ಸ್ಥಾನವನ್ನಾಗಿ ಮಾಡಿಕೊಳ್ಳದೆ ಬಯಲು ಪ್ರದೇಶ, ನದಿ ದಂಡೆಗಳು ಹಾಗೂ ಬೆಟ್ಟ ಸಾಲುಗಳಲ್ಲಿ ನೆಲಸಿದ್ದಾನೆಂದು ಅಭಿಪ್ರಾಯ ಪಡಲಾಗಿದೆ. ಈ ಪ್ರದೇಶಗಳು ಭಯಂಕರ ಭಾರಿ ಮಾನಸೂನ ಬಿರುಗಾಳಿ ಮಳೆಗೆ ಸಿಲುಕಿ ಅವನ ಪಳೆಯುಳಿಕೆಗಳು ನೀರಲ್ಲಿ ಕೊಚ್ಚಿಕೊಂಡು ಹೋಗಿ ಸಮುದ್ರ ಸೇರಿರುವ ಸಂಭವಗಳು ಜಾಸ್ತಿ ಎಂದು ಅಭಿಪ್ರಾಯ ಪಡಲಾಗಿದೆ. ಆದುದರಿಂದ ಆದಿಮಾನವ ಭೌತಿಕ ಪಳೆಯುಳಿಕೆಗಳು ನಮಗೆ ದೊರೆತಿಲ್ಲವೆಂದಿದ್ದಾರೆ. ಆದರೆ ದಕ್ಷಿಣ ಭಾರತದಲ್ಲಿ ಈ ಯುಗದ ಮಾನವನಿಗೆ ಸಂಬಂಧಿಸಿದ ಸಾಂಸ್ಕೃತಿಕ ಅವಶೇಷಗಳು ಹೆಚ್ಚು ನಂಬಲರ್ಹವಾಗಿವೆ. ತಜ್ಞರ ಪ್ರಕಾರ ಭೌತಿಕ ತಲೆಮೂಳೆ, ದೊಡೆಮೂಳೆಗಿಂತ ಮಿಗಿಲಾಗಿ ಈ ಯುಗದ ಆದಮಾನವ ಬಿಟ್ಟು ಹೋಗಿರುವ ಅವನ ಬಳೆಸುತ್ತಿದ್ದ ಸಾಂಸ್ಕೃತಿಕ ಸಾಧನಗಳ ಆಧಾರದಿಂದ ಮಾನವನ ಉಗಮ ಮತ್ತು ವಿಕಾಸವನ್ನು ಭಾರತದಲ್ಲಿ ಗುರುತಿಸಬಹುದೆಂದು ತಿಳಿಸಿದ್ದಾರೆ. ಪಿ.ಟಿ. ಶ್ರೀನಿವಾಸ್ ಐಯಂಗಾರ್ ಎಂಬುವವರು ಈ ದಿಶೆಯಲ್ಲಿ ವಿಶೇಷ ಶ್ರಮವಹಿಸಿ ಬೆಳಕನ್ನು ಚಲ್ಲಿದ್ದಾರೆ. ಆದುದರಿಂದ ದಖನ್ ಮತ್ತು ದಕ್ಷಿಣ ಭಾರತದ ಭೂಪ್ರದೇಶಗಳು ಆದಿಮಾನವನ ಹಾಗೂ ಅವನ ಸಂಸ್ಕೃತಿಯ ಉಗಮದ ಕೇಂದ್ರಗಳಾಗಿದ್ದವು. ಜಗತ್ತಿನ ಇತರ ಭಾಗಗಳಲ್ಲಿ ಕಂಡುಬಂದಿರುವ ರೀತಿಯಲ್ಲೇ ಇಲ್ಲಿ ಸಹ ಅವನ ಸಂಸ್ಕೃತಿಯು ಮೂಲಸ್ಥಾನಗಳಿದ್ದವೆಂಬ ಸತ್ಯಾಂಶ ತಿಳಿದುಬರುತ್ತದೆ. ದಖನ್ ಪ್ರದೇಶದಿಂದ ಗುಜಾರತ್, ರಾಜಪುತಾಣ, ಪಂಜಾಬ್, ಒರಿಸ್ಸ, ಬಂಗಾಳ ಮತ್ತು ಬಿಹಾರ ಪ್ರದೇಶಗಳಿಗೆ ಈ ಯುಗದ ಮಾನವರು ಹೋಗಿರಲು ಸಾಧ್ಯವೆಂದು ಊಹಿಸಲಾಗಿದೆ.

ಮಾನವ ಸಾಂಸ್ಕೃತಿಕ ಜೀವಿ. ಜೀವ ವಿಕಾಸದ ಹಾದಿಯಲ್ಲಿ ಉನ್ನತ ಹಂತವನ್ನು ತಲುಪಿರುವ ಸಾಮಾಜಿಕ ಜೀವಿ. ಮನುಷ್ಯ ಮತ್ತು ಮಂಗ ಒಂದೇ ಮೂಲಕ್ಕೆ ಸೇರಿದವರು. 15 ಲಕ್ಷ ವರ್ಷಗಳ ಹಿಂದೆ (ಮಾನವ ವಿಕಾಸದ ಒಂದು ಹಂತ) ***ಹೋಮೋ ಹ್ಯಾಬಿಲಿಸ್*** ವಿಕಾಸವಾಗಿ ದೊಡ್ಡದಾದ ತಲೆಬುರುಡೆಯನ್ನು ಹೊಂದಿರುವ ***ಹೋಮೋ ಎರೆಕ್ಟಸ್*** ಉಗಮದವಾದ. ಇವನು ಏಷ್ಯಾ ಮತ್ತು ಯುರೋಪ್‌ಗಳಿಗೆ ಆಫ್ರಿಕಾದಿಂದ ವಲಸೆ ಹೋದನೆಂದು ಅಭಿಪ್ರಾಯ ಪಡಲಾಗಿದೆ. ಇದು ಗಂಭೀರವಾದ ಜಿಜ್ಞಾಸೆಯಾಗಿ ಉಳಿದಿದೆ. ಏತಕ್ಕೆಂದರೆ ಮಾನವನ ಉಗಮ ಮತ್ತು ವಿಕಾಸ ಏಕಕಾಲದಲ್ಲಿ ಅಥವಾ ಬೇರೆಬೇರೆ ಕಾಲದಲ್ಲಿ ಬೇರೆಬೇರೆ ಪ್ರದೇಶಗಳಲ್ಲಿ ಜರುಗಿ ಅಥವಾ ಒಂದೇ ಪ್ರದೇಶದಲ್ಲಿ ಜರುಗಿ ಬೇರೆ ಕಡೆ ವಲಸೆ ಹೋದರೆ ಎಂಬುದರ ಬಗ್ಗೆ ಇನ್ನು ಸ್ಪಷ್ಟವಾದ ಏಕಾಭಿಪ್ರಾಯವಿಲ್ಲ. ಈ ಯುಗದ ಮಾನವ ಭಾರವಾದ ಹಾಗೂ ಒರಟಾದ ಪ್ರಕೃತಿಯಲ್ಲಿ ದೊರಕುವ ಶಿಲೆಗಳನ್ನು ತನ್ನ ಆಯುಧಗಳನ್ನಾಗಿ ಬಳಸುತ್ತಿದ್ದಾರೆ. ಅವುಗಳಲ್ಲಿ ಮುಖ್ಯವಾದುದು ಕೈಗೊಡಲಿ

ಮತ್ತು ಕಡಿಕತ್ತಿ. ಕೈಕೊಡಲಿಯು ತುದಿಯಲ್ಲಿ ಚೂಪಾಗಿಯೂ, ಇನ್ನೊಂದು ತುದಿಯಲ್ಲಿ ದಪ್ಪನಾಗಿ ಹಿಡಿಯುವುದಕ್ಕೆ ಅನುಕೂಲವಾಗಿರುತ್ತಿದ್ದಿತು. ಇವುಗಳನ್ನು ಗೆಡ್ಡೆ ಗೆಣಸುಗಳನ್ನು ಕತ್ತರಿಸುವುದಕ್ಕೆ ಪ್ರಾಣಿಗಳ ಚರ್ಮ ಸುಲಿಯುವುದಕ್ಕೆ ಹಾಗೂ ಮಾಂಸವನ್ನು ತುಂಡರಿಸುವುದಕ್ಕೆ ಉಪಯೋಗಿಸುತ್ತಿದ್ದ. ಹೋಮೊ ಎರೆಕ್ಟಸ್ ಮಾನವನು ಪ್ರಾಣಿಗಳನ್ನು ಭೇಟೆಯಾಡುತ್ತಿದ್ದ. ಅಸ್ಪಷ್ಟ ಶಬ್ದಗಳನ್ನು ಪ್ರಯೋಗಿಸುತ್ತಿದ್ದ. ಇನ್ನು ಗುಹೆ, ಬಂಡೆ, ಬೆಟ್ಟಗುಡ್ಡಗಳಲ್ಲಿ ವಾಸಿಸುತ್ತಿದ್ದ. ಸಾಮಾಜಿಕ ಸಂಘಟನೆ ಇವನಿಂದ ಆರಂಭವಾಯಿತು. ಈ ಕಾಲದ ಸಂಸ್ಕೃತಿಯನ್ನು ಅಷ್ಯೂಲಿಯನ್ ಸಂಸ್ಕೃತಿ ಎಂದು ಕರೆಯುತ್ತಾರೆ. ಉತ್ತರ ಫ್ರಾನ್ಸ್‌ನ ಸೆಂಟ್ ಆಛಲ್ ಎಂಬ ಸ್ಥಳದಲ್ಲಿ ಈ ಸಂಸ್ಕೃತಿಯನ್ನು ಮೊದಲು ಗುರುತಿಸಿದ್ದರಿಂದ ಈ ಮಾದರಿಯನ್ನು ಅಷ್ಯೂಲಿಯನ್ ಸಂಸ್ಕೃತಿ ಎಂದು ಕರೆಯಲಾಗಿದೆ. ಈ ನಮೂನೆಯ ಸಂಸ್ಕೃತಿ ಭಾರತ ಉಪಖಂಡದ ಉದ್ದಗಲಕ್ಕೂ ಪ್ರಸರಿಸಿತ್ತು. ಇದಕ್ಕೆ ನಮ್ಮಲ್ಲಿ ದೊರೆಕಿರುವ ಸಾಂಸ್ಕೃತಿಕ ಅವಶೇಷಗಳು ಉತ್ತಮ ನಿದರ್ಶನವಾಗಿವೆ.

## 4.3 ಹಳೆಶಿಲಾಯುಗದ ಸಂಸ್ಕೃತಿ

ಆದಿಮಾನವನ ಉಗಮವಾದ ವ್ಯವಸ್ಥೆಯ ಕಾಲದಲ್ಲಿ ಅವರು ಕಾಡುಮೇಡುಗಳಲ್ಲಿ, ಬೆಟ್ಟಗುಡ್ಡಗಳ ಗುಹೆಗಳಲ್ಲಿ ಹಾಗೂ ಮರದ ಪೊಟರೆಗಳಲ್ಲಿ ಮೃಗಗಳೋಪಾದಿಯಲ್ಲಿ ದೊರೆಯುತ್ತಿದ್ದ ಹಣ್ಣು ಹಂಪಲು ಮತ್ತು ಬೇರು ನಾರುಗಳನ್ನು ತನ್ನ ಆಹಾರಕ್ಕಾಗಿ ಅವಲಂಬಿಸಿದ್ದ. ಕ್ರಮೇಣ ತನ್ನ ಬುದ್ಧಿಶಕ್ತಿಯನ್ನು ಬೇಟೆಗೆ ಪ್ರಾರಂಭಿಸಿದನು. ಬೇಟೆ ಆಡಲು ನಿಸರ್ಗದಲ್ಲಿ ಲಭ್ಯವಿರುವ ಕಲ್ಲುಗಳನ್ನು ಉಪಯೋಗಿಸತೊಡಗಿದ. ಹೀಗೆ ತನ್ನ ಸ್ವಂತ ಶಕ್ತಿ ಮತ್ತು ಜಾಣ್ಮೆಯಿಂದ ಆಹಾರ ಸಂಪಾದಿಸಲು ಪ್ರಾರಂಭಿಸಿ ಶಿಲಾಯುಗವನ್ನು ತಲುಪಿದನು. ಮಾನವನ ಆ ಕಾಲದ ನಾಗರೀಕತೆಯನ್ನು ಶಿಲಾಯುಗದ ನಾಗರೀಕತೆಯೆಂದು ಕರೆಯಲಾಗಿದೆ. ಶಿಲಾಯುಗವು ಮಾನವನು ವಾಸಿಸುತ್ತಿದ್ದ ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ಕಾಲದಲ್ಲಿ ಪ್ರಾರಂಭವಾದುದಲ್ಲದೆ ವಿಭಿನ್ನ ಕಾಲದಲ್ಲಿ ಕೊನೆಗೊಂಡಿತು. ಭಾರತದಲ್ಲಿ ಕ್ರಿ.ಪೂ. ಸೂಮಾರು 35,000 ರಿಂದ 10,000 ರವರೆಗಿನ ಕಾಲವನ್ನು ಹಳೇ ಶಿಲಾಯುಗದ ಕಾಲವೆಂದು ಕರೆಯಲಾಗಿದೆ.

ಹಳೆ ಶಿಲಾಯುಗ ಇತಿಹಾಸದ ಬಗ್ಗೆ ಕರ್ನಾಟಕ ಮತ್ತು ದಕ್ಷಿಣಭಾರತದಲ್ಲಿ ವಿಸ್ತಾರವಾದ ಅಧ್ಯಯನಗಳು ನಡೆದಿದೆ ಹಾಗೂ ನಡೆಯುತ್ತಿವೆ. ದಕ್ಷಿಣಭಾರತದ ಪ್ರಮುಖ ನದಿಗಳಾದ ಕಾವೇರಿ, ತುಂಗಭದ್ರ, ಕೃಷ್ಣ ಗೋದಾವರಿ ಮತ್ತು ಅವುಗಳ ಉಪನದಿಗಳ ಪ್ರದೇಶದಲ್ಲಿ ಪ್ರಾಗಿತಿಹಾಸಿಕ ಮಾನವನ ಬದುಕು ರೂಪಗೊಂಡಿತು. ಅವನು ಈ ನದಿಗಳ ತಾಣದಲ್ಲಿ ಬದುಕಿದ್ದ. ನದಿಗಳು ಅವನಿಗೆ ಜೀವನಾಧಾರವಾಗಿದ್ದವು. ಆಯುಧಗಳನ್ನೂ ಮಾಡಿಕೊಳ್ಳಲು ಒರಟು ಕಲ್ಲುಗಳನ್ನು ಬೇಟೆಯಾಡಲು ಬಳಸುತ್ತಿದ್ದನು. ಮಾನವನು ಕಾಡಿನಲ್ಲಿ ಅಲೆಮಾರಿ ಬದುಕನ್ನು ನಡೆಸುತ್ತಾ ನದಿದಂಡೆಯ ಮೇಲೊ, ಬಂಡೆಯ ಆಸರೆಯಲ್ಲೋ ಆಗಾಗ್ಗೆ ತಂಗುತ್ತಾ ಬದುಕು ನಡೆಸುತ್ತಿದ್ದ. ಅವನ ಪಳೆಯುಳಿಕೆಗಳು ಮತ್ತು ಆಯುಧಗಳು ನದಿಪಾತ್ರದ ಮರಳಿನಲ್ಲಿ ಮತ್ತು ಅವುಗಳ ವಿವಿಧ ಸ್ಥಳಗಳಲ್ಲಿ ದೊರಕಿವೆ. ಅವನ ದೀರ್ಘಾವದಿ ಹಳೆ ಶಿಲಾಯುಗವನ್ನು ವಿವಿಧ ಹಂತಗಳಲ್ಲಿ ಅಭ್ಯಾಸಿಸಬಹುದು.

ಆರಂಭದ ಹಳೆ ಶಿಲಾಯುಗದ ನೆಲೆಗಳನ್ನು ಮೊದಲಿಗೆ ಪತ್ತೆ ಹಚ್ಚಿದ ಕೀರ್ತಿ ಜಿಯಲಾಜಿಕಲ್ ಸರ್ವೇಯರ್ ಆಗಿದ್ದ ರಾಬರ್ಟ್ ಬ್ರೂಸ್‌ಪೂಟೆಗೆ ಸಲ್ಲುತ್ತದೆ. ಇವನನ್ನು ಭಾರತದ ಪ್ರಾಗೈತಿಹಾಸದ ಪಿತಾಮಹನೆಂದು ಗೌರವಿಸಲಾಗಿದೆ. ಇವನು 1873 ರಲ್ಲಿ ಬಿಜಾಪುರ ಜಿಲ್ಲೆಯ ಬ್ಯಾಡ ಮತ್ತು ಮಲಪ್ರಭನದಿಯ ದಂಡೆಯ ಮೇಲೆ ಹಲವಾರು ಸ್ಥಳಗಳಲ್ಲಿ ಆರಂಭದ ಹಳೆ ಶಿಲಾಯುಗದ ನೆಲೆಗಳನ್ನು ಪತ್ತೆ ಹಚ್ಚಿದ. ಇವನು ಗೋಕಾಕ್ ಹತ್ತಿರ ಇದೇ ಕಾಲದ ಫೇಂಡಾ

ಮೃಗದ ಪಳೆಯುಳಿಕೆಯನ್ನು ಕಂಡು ಹಿಡಿದ. ಅಂದಿನಿಂದ ಅನೇಕ ಬ್ರಿಟಿಷ್ ಅಧಿಕಾರಿಗಳು ಇದರಲ್ಲಿ ಆಸಕ್ತಿ ವಹಿಸಿ ಈ ಅವಧಿಯ ನೆಲೆಗಳನ್ನು ಹುಡುಕತೊಡಗಿದರು. ಪ್ರಾಣಿ ಪ್ರಪಂಚದಿಂದ ಮನುಷ್ಯ ಜೈವಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಪ್ರತ್ಯೇಕತೆಯನ್ನು ಆರಂಭಿಸಿದರು. ಆರಂಭದ ಹಳೆ ಶಿಲಾಯುಗದಲ್ಲಿ ಶಿಲೆ, ಮರ, ಮೂಳೆ ಮತ್ತಿತರ ವಸ್ತುಗಳಿಂದ ಆಯುಧಗಳನ್ನು ಮಾಡಿಕೊಂಡು, ಕಾಲಕಾಲಕ್ಕೆ ತಕ್ಕಂತೆ ಅಲೆಯುತ್ತಾ ಬಯಲಿನಲ್ಲಿ ಗುಹೆಗಳಲ್ಲೂ ಅಥವಾ ಬಂಡೆಗಳ ಆಸರೆಯಲ್ಲೂ ಬದುಕುತ್ತಿದ್ದ. ಕಾಡು ಪ್ರಾಣಿಗಳನ್ನು ಬೇಟೆಯಾಡುತ್ತಾ ಹಾಗೂ ಕಾಡು ಸಸ್ಯಗಳಿಂದ ಆಹಾರವನ್ನು ಸಂಗ್ರಹಿಸುತ್ತಿದ್ದನೆನ್ನಬಹುದು. ಕತ್ತರಿಸುವ ಆಯುಧಗಳು, ವಿವಿಧ ಗಾತ್ರದ ಕೈಕೊಡಲಿಗಳು, ಸೀಳುವ ಕಲ್ಲಿನ ಚೂಪಾದ ಆಯುಧಗಳನ್ನು ಸ್ಥಳೀಯವಾಗಿ ದೊರೆಯುವಕಲ್ಲು, ಜಲಶಿಲೆ, ಅಗ್ನಿ ಶಿಲೆ, ಬೆಣಚುಕಲ್ಲುಗಳಿಂದ ತಯಾರಿಸುತ್ತಿದ್ದ. ಹೀಗೆ ತಾಂತ್ರಿಕ ಪ್ರಗತಿ ಉಂಟಾದಂತೆ ಮರದ ಮತ್ತು ಮೂಳೆಯ ಸುತ್ತಿಗೆಗಳನ್ನು ಮಾಡಿಕೊಂಡು ಚೆನ್ನಾಗಿ ಕಾಣುವ ಆಯುಧಗಳನ್ನು ರೂಪಿಸಿಕೊಂಡ. ಇದನ್ನು ಸೋಹಾನ್ ಅಥವಾ ಕಡಿಕತ್ತಿ ಸಂಸ್ಕೃತಿ ಎಂದು ಕರೆಯುವುದುಂಟು. ಈ ಸಂಸ್ಕೃತಿ ಕರ್ನಾಟಕವು ಸೇರಿದಂತೆ ದಕ್ಷಿಣ ಭಾರತದಲ್ಲಿ ವ್ಯಾಪಕವಾಗಿ ದೊರೆಯುತ್ತದೆ.

ಪಿ.ಎಸ್. ಅಯ್ಯಂಗಾರರು 1924 ರಲ್ಲಿ ತುಮಕೂರು ಜಿಲ್ಲೆಯ ಕಿಬ್ಬನಹಳ್ಳಿ ಮತ್ತು ಬಿಳಿಗೆರೆಯಲ್ಲಿ ಆರಂಭದ ಹಳೆಶಿಲಾಯುಗದ ಕೈಕೊಡಲಿಗಳನ್ನು ಪತ್ತೆಹಚ್ಚಿದರು. ಶೇಷಾದ್ರಿಯವರು ಕಿಬ್ಬನ ಹಳ್ಳಿಯ ನೆಲೆಯನ್ನು ಪುನರ್ ಪರಿಶೀಲಿಸಿದರು. ಒರಟಾದ ಕೈಕೊಡಲಿಗಳು, ಸೀಳುವ ಆಯುಧಗಳು, ಕಡಿಕತ್ತಿ ಮತ್ತು ಚೆಕ್ಕೆ ಆಯುಧಗಳು ದೊರೆತವು. ಸ್ಥಳೀಯವಾಗಿ ದೊರೆಯುವ ಬೆಣಚುಕಲ್ಲುಗಳಿಂದ ಇವುಗಳನ್ನು ಮಾಡಲಾಗಿತ್ತು. ಮಲಪ್ರಭಾನದಿ ಬಯಲು ಪ್ರದೇಶದಲ್ಲಿ ಜ್ಯೂನರ ಮತ್ತು ಜೋಶಿಯವರು ವ್ಯವಸ್ಥಿತವಾದ ಸರ್ವೇಕ್ಷಣೆ ಕಾರ್ಯವನ್ನು ಕೈಗೊಂಡು 36 ನೆಲೆಗಳನ್ನು ಪತ್ತೆಹಚ್ಚಿದರು. ಅನಂತರ ಪಪ್ಪು, ಪದ್ದಯ್ಯ, ಅನ್ಸಾರಿ ಮತ್ತು ಸುಂದರರವರು ಕೃಷ್ಣಾನದಿ ಪಯಲಿನಲ್ಲಿ ಶೋಧನೆ ನಡೆಸಿದರು. ಉತ್ತರ ಕರ್ನಾಟಕದಲ್ಲಿ ದೊರೆಯುವ ಕ್ವಾರ್ಟ್‌ಜೈಟ್ ಮತ್ತು ಮರಳು ಕಲ್ಲುಗಳು, ಕೈಗೊಡಲಿ, ಸೀಳುವ ಆಯುಧ, ಕಡಿಕತಿ ಮುಂತಾದ ಆಯುಧಗಳನ್ನು ಮಾಡಿಕೊಳ್ಳಲು ನೆರವಾಗಿದ್ದವು.

ಆಯುಧಗಳಿಂದ ಗೆಡ್ಡೆಗೆಣಸುಗಳನ್ನು ಅಗೆಯುವುದಕ್ಕೆ ಕೊಂಬೆಗಳನ್ನು ಕತ್ತರಿಸುವುದಕ್ಕೆ ಪ್ರಾಣಿಗಳನ್ನು ಕೊಲ್ಲಲು ಮತ್ತು ಬೇಟೆ ಆಡಲು ಅಂದಿನ ಮಾನವನಿಗೆ ಸಾಧ್ಯವಾಗುತ್ತಿತ್ತು. ಅಲೆಮಾರಿಯಾದ ಇವನು ಆಗಾಗ್ಗೆ ನದಿಯ ದಂಡೆಯ ಮೇಲೆ ಬಂಡೆ ಆಸೆರಯಲ್ಲಿ ತಂಗುತ್ತಿದ್ದ. ಬೆಂಕಿಯನ್ನು ಕಂಡುಕೊಂಡು ತನ್ನ ರಕ್ಷಣೆಗಾಗಿ ಅಥವಾ ಆಕ್ರಮಣಕ್ಕಾಗಿ ಕಲ್ಲುಗಳಿಗೆ ನಿರ್ದಿಷ್ಟವಾದ ಆಕೃತಿಯನ್ನು ಕೊಟ್ಟು, ಆಯುಧಗಳನ್ನಾಗಿ ಮಾಡಿಕೊಂಡ. ಪೂಣೆಯ ದಖನ್ ಕಾಲೇಜಿನವರು ಹುಣಸಿಗೆಯಲ್ಲಿ ಈ ಕಾಲದ ಮಾನವನ ಆಯುಧಗಳ ಜೊತೆಗೆ ಕಾಡಾನೆ ಮತ್ತು ಕಾಡು ಬೆಕ್ಕುಗಳ ಪಳೆಯುಳಿಕೆಗಳನ್ನು ಪತ್ತೆಹಚ್ಚಿದ್ದಾರೆ.

ಆದಿ ಅಥವಾ ಆರಂಭದ ಶಿಲಾಯುಗದ ತರುವಾಯ ತಜ್ಞರು ಇವನ ಬದುಕಿನಲ್ಲಿ ಕೆಲವು ಬದಲಾವಣೆಗಳನ್ನು ಗುರುತಿಸಿದ್ದಾರೆ. ಇದನ್ನು ಮೊದಲಿಗೆ ಗುರುತಿಸಿದವರು ಸಂಕಾಲಿಯ. ಈ ಬದಲಾವಣೆಯನ್ನು ಮಧ್ಯಮ ಹಳೆಶಿಲಾಯುಗವೆಂದು ಕರೆದಿದ್ದಾರೆ. ಇದು ದಕ್ಷಿಣ ಭಾರತದ ನಾನಾ ಕಡೆಗಳಲ್ಲಿ ಪ್ರಚಲಿತದಲ್ಲಿದ್ದಿತು. ಇವನು ಈ ಅವಧಿಯಲ್ಲಿ ದೊಡ್ಡದಾದ ಕೈಕೊಡಲಿ ಮತ್ತು ಕಡಿಕತ್ತಿಯ ತಯಾರಿಕೆಯನ್ನು ಕೈಬಿಟ್ಟು ಸಣ್ಣದಾದ ಆಯುಧಗಳ ತಯಾರಿಕೆಗೆ ಆಧ್ಯತೆ ನೀಡಿದ. ಕತ್ತರಿಸುವ ಆಯುಧ ಚೂಪಾದ ಮತ್ತು ಕೊರೆಯುವ ಆಯುಧಗಳನ್ನು ತಯಾರು ಮಾಡಿದನು. ಭರ್ಜಿಯಂತ ಆಯುಧಗಳನ್ನು ಮಾಡಿಕೊಂಡ. ಆಯುಧಗಳನ್ನು ನುಣ್ಣುಗೊಳಿಸಲಾರಂಭಿಸಿದ. ಬೆಣಚು ಕಲ್ಲುಗಳಿಂದ ಸೀಳುಗತ್ತಿ, ಚುಚ್ಚುವ ಭರ್ಜಿ ಮತ್ತು ಎಸೆಯುವ ಭರ್ಜಿ ಮುಂತಾದ

ಆಯುಧಗಳನ್ನು ಸಿದ್ಧಪಡಿಸಲಾರಂಭಿಸಿದ. ಈ ಆಯುಧಗಳಿಂದ ಕರಡಿ, ಕಾಡುಕೋಣ, ಜಿಂಕೆ, ಕುರಿ, ಹಂದಿ ಮುಂತಾದ ಪ್ರಾಣಿಗಳನ್ನು ಬೇಟೆಯಾಡುತ್ತಿದ್ದ. ಪರಿಣಾಮಕಾರಿ ಬೇಟೆಗಾರನಾಗಿ ರೂಪುಗೊಂಡ. ದೇಹವನ್ನು ಬೆಚ್ಚಗಿರಿಸಲು ಪ್ರಾಣಿಗಳನ್ನು ಬೇಯಿಸಲು ಆಯುಧಗಳನ್ನು ಮಾಡಿಕೊಳ್ಳಲು ಬೆಂಕಿಯನ್ನು ಉಪಯೋಗಿಸಲಾರಂಭಿಸಿದ. ಸತ್ತವರನ್ನು ಹೂಳುವುದು, ಸಾವಿನ ನಂತರದ ಬದುಕಿನಲ್ಲಿ ನಂಬಿಕೆ ಹಾಗೂ ಭೂತ ಪ್ರೇತಗಳ ಪ್ರಜ್ಞೆ ಮುಂತಾದ ಅಂಶಗಳು ಅವನ ಬದುಕಿನಲ್ಲಿ ಕಾಣಿಸಿಕೊಳ್ಳಲಾರಂಭಿಸಿದವು. ತಾನು ಕೊಂದ ಪ್ರಾಣಿಯ ಚರ್ಮ ಅಥವಾ ಎಲೆಗಳಿಂದ ತನ್ನ ನಗ್ನ ದೇಹವನ್ನು ಮುಚ್ಚುವುದನ್ನು ಕಲಿತ. ಇವು ಹಳೆ ಶಿಲಾಯುಗದ ಮಧ್ಯಕಾಲದ ಸಂಸ್ಕೃತಿಯ ಲಕ್ಷಣಗಳಾಗಿವೆ. ಈ ಸಂಸ್ಕೃತಿಯನ್ನು ಒಳಗೊಂಡ ಅನೇಕ ನೆಲೆಗಳು ದೊರೆತಿವೆ. ಆಲಮಟ್ಟಿ, ಬಾಗಲಕೋಟೆ, ಸಂಗನ ಕಲ್ಲು ಮುಖ್ಯವಾದವು.

ಹಳೆ ಶಿಲಾಯುಗದ ಕೊನೆಯಹಂತದಲ್ಲೂ ಆಹಾರ ಸಂಗ್ರಹಿಸುವ ಬದುಕ್ಕೇ ಇವನ ಪ್ರಮುಖ ಲಕ್ಷಣವಾಗಿ ಮುಂದುವರಿಯುತ್ತದೆ. ಈ ಕೊನೆಯ ಹಂತದ ಹಳೆಶಿಲಾಯುಗದ ಸಂಸ್ಕೃತಿ ಸುಮಾರು 40,000 ದಿಂದ 10,000 ವರ್ಷಗಳ ಹಿಂದಿನ ಅವಧಿಯಲ್ಲಿದ್ದಿತು. ಇದು ದಖನ್ ಮತ್ತು ಕರ್ನಾಟಕ ಒಳಗೊಂಡರೆ ದಕ್ಷಿಣ ಭಾರತದಲ್ಲಿ ಪ್ರಚಲಿತದಲ್ಲಿದ್ದಿತು. ಹೋಮೊ ಸೈಪೈನರ ಅಥವಾ ಆಧುನಿಕ ಮಾನವನ ಪೂರ್ಣ ಉದಯವನ್ನು ಈ ಕಾಲದಲ್ಲಿ ಕಾಣುತ್ತೇವೆ. ಸಣ್ಣ ಸಣ್ಣ ಆಯುಧಗಳನ್ನು ತಯಾರುಮಾಡುವುದು ಈ ಕಾಲದ ಲಕ್ಷಣ. ಇವನು ಚೂಪಾದ ಆಯುಧ, ಕಲ್ಲುಳ್ಳಿ, ಭರ್ಜಿ, ಈಟಿಗಳನ್ನು ಆಯುಧವಾಗಿ ಬಳಸುತ್ತಿದ್ದ. ಇವನು ಕೊಳಗಳ ಹತ್ತಿರ, ಬಂಡೆ ಆಸರೆಯಲ್ಲಿ ಹಾಗೂ ಎತ್ತರವಾದ ಸ್ಥಳಗಳಲ್ಲಿ ವಾಸಿಸುತ್ತಿದ್ದ. ಹಳೆಶಿಲಾಯುಗ ಮಾನವನ ಬದುಕಿನಲ್ಲಿ ಬಹಳಷ್ಟು ಪ್ರಗತಿಯಾಗಿದ್ದರೂ ಅವನು ಮೂಲಭೂತವಾಗಿ ಆಹಾರ ಸಂಗ್ರಹಕನೆ ಆಗಿದ್ದ.

ಹಳೆಶಿಲಾಯುಗದ ಕೊನೆಹಂತ ಮತ್ತು ನೂತನ ಶಿಲಾಯುಗದ ನಡುವೆ ಕಾಣಬರುವ ಶಿಲಾಸಂಸ್ಕೃತಿಯನ್ನು ಮಧ್ಯಂತರ ಶಿಲಾಯುಗವೆನ್ನುತ್ತೇವೆ. (Mesolithic Age). ಇದು 10,000 ದಿಂದ 5000 ವರ್ಷಗಳ ಹಿಂದಿನ ಕಾಲಾವಧಿಯಲ್ಲಿದ್ದಿತೆಂದು ಅಭಿಪ್ರಾಯ ಪಡಲಾಗಿದೆ. ಸೂಕ್ಷ್ಮ ಶಿಲಾಯುಧಗಳು ಆ ಕಾಲದ ಲಕ್ಷಣ. ಆಹಾರ ಸಂಗ್ರಹಿಸುವ ಹಂತದಿಂದ ನಿಧಾನವಾಗಿ ಆಹಾರ ತಯಾರಿಸುವ ಕಡೆ ಹೆಜ್ಜೆ ಇಡುತ್ತಿರುವುದನ್ನು ಈ ಕಾಲದಲ್ಲಿ ಕಾಣಬಹುದು. ಸೂಕ್ಷ್ಮವಾದ (ಅತಿಸಣ್ಣದಾದ) ಜ್ಯಾಮಿತಿಯ ಶಿಲಾ ಬ್ಲೇಡುಗಳ ವ್ಯಾಪಕ ಬಳಕೆಯನ್ನು ಈ ಕಾಲದಲ್ಲಿ ಕಾಣಬಹುದು. ಇವು ಒಂದು ಸೆಂಟಿ ಮೀಟರ್ ಅಗಲ ಮತ್ತು ಮೂರು ಅಥವಾ ನಾಲ್ಕು ಸೆಂಟಿಮೀಟರ್ ಉದ್ದವಿರುತ್ತವೆ. ಸೂಕ್ಷ್ಮ ಶಿಲಾ ಬ್ಲೇಡುಗಳನ್ನು ಸೇರಿಸಿ ಬಾಣ, ಭರ್ಜಿ, ಈಟಿಗಳು, ಚಾಕು, ಕುಡಗೋಲುಗಳನ್ನು ಈ ಕಾಲದ ಮಾನವ ಸಿದ್ಧಪಡಿಸುವ ಕಲೆಯಲ್ಲಿ ಸುಧಾರಣೆ ಮಾಡಿಕೊಂಡನು. ಅರೆಯುವ ಕಲ್ಲನ್ನು ಉಪಯೋಗಿಸಿರುವುದು ಇವನ ವಾಸಸ್ಥಾನದ ನೆಲೆಗಳಲ್ಲಿ ಕಾಣಬಹುದು. ಕರ್ನಾಟಕದ ಬಯಲು ಪ್ರದೇಶದಲ್ಲಿ ಮಧ್ಯಂತರ ಶಿಲಾಯುಗವು ಬಹುವ್ಯಾಪಕವಾಗಿತ್ತೆಂದು ಪ್ರೊ. ಕೆ. ಪದ್ದಯ್ಯ ಅಭಿಪ್ರಾಯ ಪಟ್ಟಿದ್ದಾರೆ. ಬೆಂಗಳೂರಿನ ಜಾಲಹಳ್ಳಿ ಮತ್ತು ರಾಗಿಗುಡ್ಡದಲ್ಲಿ ಈ ಸಂಸ್ಕೃತಿಯನ್ನು ಎಸ್.ಆರ್. ರಾವ್ ಅವರು ಪತ್ತೆಹಚ್ಚಿದ್ದಾರೆ. ಗುಲ್ಬರ್ಗಾದ ಷಹಪುರ ತಾಲ್ಲೋಕ್‌ನಲ್ಲಿ ಸುಮಾರು 25 ನೆಲೆಗಳು ಪತ್ತೆಯಾಗಿವೆ.

## 4.4 ಹೊಸ ಶಿಲಾಯುಗ ಸಂಸ್ಕೃತಿ

ಕ್ರಿ.ಪೂ. 3000 ದಿಂದ ಕ್ರಿ.ಪೂ. 2000 ವರ್ಷಗಳ ಕಾಲಾವಧಿಯಲ್ಲಿ ಕೃಷಿ ಆಧಾರಿತ ಬದುಕನ್ನು ರೂಪಿಸಿಕೊಂಡು ಹಾಗೂ ಪ್ರಾಣಿಗಳನ್ನು ಪಳಗಿಸಿಕೊಂಡು ಒಂದೆಡೆ ನೆಲೆಯಾಗಿ ನಿಂತ ಗ್ರಾಮೀಣ ಬದುಕನ್ನು ಕಾಣುತ್ತೇವೆ. ಈ ಹಂತದ ಬೆಳವಣಿಗೆಯನ್ನು ಗಾರ್ಡನ್ ಚೈಲ್ಡನು ನೂತನ

ಶಿಲಾಯುಗದ ಕ್ರಾಂತಿ ಎಂದು ಬಣ್ಣಿಸಿದ್ದಾರೆ. ಇಂದಿನ ಸ್ಥಿರ ಗ್ರಾಮೀಣ ಬದುಕಿಗೆ ಇದೇ ಮೂಲ ಕಾರಣ ಹಾಗೂ ಪ್ರೇರಣೆಯಾಗಿದೆ ಎನ್ನಬಹುದು. ಉಂಡೆಗಲ್ಲಿನಿಂದ ಚಕ್ಕೆಗಳನ್ನು ತೆಗೆದು ಆಯುಧಗಳನ್ನು ಹಳೆ ಶಿಲಾಯುಗದಲ್ಲಿ ಮಾಡುತ್ತಿದ್ದರೆ ಹೊಸ ಶಿಲಾಯುಗದಲ್ಲಿ ಅದೇ ತೆರನಾದ ಆಯುಧಗಳನ್ನು ಉಜ್ಜಿ ನುಣುಪು ಮಾಡಿ ಹೊಳಪನ್ನು ಕೊಡಲಾಯಿತು. ಆಹಾರಕ್ಕಾಗಿ ಬೇಟೆಯಾಡುವ ಅಲೆಮಾರಿ ಮಾನವನ ಬದುಕು ಕ್ರಮೇಣ ಕೊನೆಗೊಂಡು ಒಂದೆಡೆ ನೆಲೆಯಾಗಿ ನಿಂತು, ಕುಳಿತು, ಸ್ವಂತ ಸಾಮರ್ಥ್ಯದಿಂದ ಆಹಾರೋತ್ಪಾಧನೆ ಮಾಡುವ ಅರ್ಥ ವ್ಯವಸ್ಥೆ ಜಾರಿಗೆ ಬಂದಿದ್ದು ನವಶಿಲಾ ಯುಗದಲ್ಲಿ. ಈ ಕಾಲದ ಮಾನವ ಮಡಕೆಯನ್ನು ತಯಾರಿ ಮಾಡುವ ಕಲೆಯನ್ನು ಕಲಿತ. ಇವನಿಗೆ ಲೋಹಗಳ ಪರಿಚಯ ಇನ್ನೂ ಆಗಿರಲಿಲ್ಲ. ಇದು ಮಾನವನ ಬದುಕಿನಲ್ಲಿ ಮೊಟ್ಟಮೊದಲು ಬಾರಿಗೆ ನಡೆದ ಪ್ರಗತಿ ಪೂರ್ಣವಾದ ಉತ್ಕ್ರಾಂತಿ ಎನ್ನಬಹುದು. ಕ್ರಿ.ಪೂ. 9000 ವರ್ಷಗಳಲ್ಲಿ ಈ ಸಂಸ್ಕೃತಿ ಪಶ್ಚಿಮ ಏಷ್ಯಾದಲ್ಲಿ ಉಗಮವಾಯಿತು. ಮುಂದೆ ಇದು ಉನ್ನತವಾಗಿ ಬೆಳೆದು ನಗರ ನಾಗರೀಕತೆಯಾಯಿತು. ಹೊಸ ಶಿಲಾಯುಗದ ಕ್ರಾಂತಿ ಎಲ್ಲೆಡೆ ಹಬ್ಬಿತು. ನಾಯಿ, ಕುರಿ, ಆಡು ಮುಂತಾದ ಪ್ರಾಣಿಗಳನ್ನು ಮಾನವ ಪಳಗಿಸಿದ. ಗೋಧಿ, ಬಾರ್ಲಿ, ಭತ್ತ ಮತ್ತು ರಾಗಿಯನ್ನು ಬೆಳೆಯುವುದನ್ನು ಈ ಯುಗದಲ್ಲೇ ಕಲಿತುಕೊಂಡು ತನ್ನನ್ನು ಪರಿಸರಕ್ಕೆ ಅಳವಡಿಸಿಕೊಂಡನು.

ಭಾರತದ ಹೊಸ ಶಿಲಾಯುಗದ ಮೂಲಕುರುಹುಗಳು ಇಂದಿನ ಪಾಕಿಸ್ಥಾನದ ಮೆಹರ್‌ಗರ್‌ನಲ್ಲಿ ಕಾಣಿಸಿಕೊಂಡವು. ಇದರ ಕಾಲ ಕ್ರಿ.ಪೂ. 7000 -6000. ಇದೇ ಕಾಲದಲ್ಲಿ ಎರಡು ಬಗೆಯ ಸಂಸ್ಕೃತಿಗಳು ಪ್ರಚಲಿತದಲ್ಲಿದ್ದವು. (1) ಹೊಸ ಶಿಲಾಯುಗದ ಸಂಸ್ಕೃತಿ (2) ಚಾಲ್ಕೋಲಿಥಿಕ್ ಅಥವಾ ತಾಮ್ರ ಶಿಲಾಯುಗ, ಹೊಸ ಶಿಲಾಯುಗವು ಕರ್ನಾಟಕವು ಸೇರಿದಂತೆ ದಕ್ಷಿಣ ಭಾರತದಲ್ಲಿ ಕ್ರಿ.ಪೂ. 2500-1000 ರ ಕಾಲವಧಿಯಲ್ಲಿ ರೂಪುಗೊಂಡಿತು. ಸ್ಥಳೀಯ ಮಡಕೆಯ ವೈಶಿಷ್ಟ್ಯತೆ, ಸಮಾಧಿ ಆಚರಣೆಗಳು, ಶಿಲಾಯುಧಗಳ ಪರಂಪರೆ, ವಿವಿಧಕಲೆ ಮತ್ತು ಕರಕುಶಲ ಕಲೆ, ಅಲಂಕರಣೆ ಮತ್ತು ಆಹಾರ ವ್ಯವಸ್ಥೆಗಳ ಪ್ರಾದೇಶಿಕ ವಿಭಿನ್ನತೆಯಿಂದ ನಾಲ್ಕು ಪ್ರಾದೇಶಿಕ ಹೊಸ ಶಿಲಾಯುಗದ ಸಂಸ್ಕೃತಿಗಳನ್ನು ಭಾರತದಲ್ಲಿ ಗುರುತಿಸಬಹುದು. ಕಾಶ್ಮೀರ ಕಣಿವೆ, ವಿಧ್ಯ ಪರ್ವತ ಪ್ರದೇಶ, ಪೂರ್ವ ಭಾರತ ಮತ್ತು ದಕ್ಷಿಣ ಭಾರತ, ಕರ್ನಾಟಕದಲ್ಲಿ ಹೊಸ ಶಿಲಾಯುಗದ ಮಾನವ ರಾಗಿಯನ್ನು ಬೆಳೆಯುತ್ತಿದ್ದನು. ಹಳ್ಳೂರು, ತೆಕ್ಕಲ ಕೋಟೆ ಉತ್ಖನನಗಳಲ್ಲಿ ರಾಗಿ ದೊರೆತಿದೆ.

ಹೊಸ ಶಿಲಾಯುಗದ ಸಂಸ್ಕೃತಿ ವ್ಯಾಪಕವಾಗಿ ದಕ್ಷಿಣ ಭಾರತ ಕರ್ನಾಟಕದಲ್ಲಿ ದೊರೆತಿವೆ. ವಟಗಲ್, ಪಿಕ್ಲಿಹಾಲ್, ಮಸ್ಕಿ, ಉತ್ನೂರು, ತೆಕ್ಕಲಕೋಟೆ, ಸಂಗನಕಲ್ಲು, ಬ್ರಹ್ಮಗಿರಿ, ಟಿ.ನರಸೀಪುರ, ಹೆಮ್ಮಿಗೆ ಮುಂತಾದವು ಕರ್ನಾಟಕದ ಬಯಲು ಪ್ರಸ್ಥಭೂಮಿಯಲ್ಲಿ ದೊರೆಯುವ ಈ ಕಾಲದ ಪ್ರಮುಖ ನೆಲೆಗಳು. ಮಲೆನಾಡ ಮತ್ತು ಕರಾವಳಿಯಲ್ಲಿ ಹೊಸ ಶಿಲಾಯುಗದ ನೆಲೆಗಳು ವಿರಳವಾಗಿ ಕಾಣಸಿಗುತ್ತವೆ.

ಹೊಸ ಶಿಲಾಯುಗಕ್ಕೆ ಸಂಬಂಧಸಿದಂತೆ ಮತ್ತೊಂದು ಅಂಶವನ್ನು ಗಮನಿಸಬೇಕಾಗುತ್ತದೆ. ಬೂದಿಹಾಳ ಎಂದು ಕರೆಯುವ ಸ್ಥಳಗಳ ಬೂದಿಗೂಡ್ಡ (Ashmounds) ಗಳು ಇದುವರೆವಿಗೂ ಸಮಸ್ಯೆಗಳಾಗಿದ್ದವು. ಇವು ಕರ್ನಾಟಕ ಮತ್ತು ಆಂಧ್ರ ಪ್ರದೇಶದ ಹೊಸ ಶಿಲಾಯುಗದ ನೆಲೆಗಳೆನ್ನುವುದು ಈಗ ಖಚಿತವಾಗಿದೆ. ಇವುಗಳು ಪ್ರಾಣಿಗಳ ಸಗಣಿ ಅಥವಾ ಬೆರಣಿಗಳನ್ನು ಸುಟ್ಟ ಬೂದಿರಾಶಿ. ಇವುಗಳನ್ನು ಮೊದಲಿಗೆ ಗಮನಿಸಿದವರು ಕರ್ನಲ್ ಮೆಕೆಂಜಿ. ಅನಂತರ ರಾಬರ್ಟ್ ಬ್ರೂಸ್ ಪೂಟ್ ಮೆಕೆಂಜಿ ರಾಯಚೂರು ಜಿಲ್ಲೆಯ ಉಡುತಣಿಯಲ್ಲಿ ಬೂದಿಗೂಡುವನ್ನು ಗಮನಿಸಿದರು. ಇದರ ಬಗ್ಗೆ ಆಳವಾದ ಸಂಶೋಧನೆಯನ್ನು ಕೈಗೊಂಡವರು ಪೂಣೆಯ ದಖನ್

ಕಾಲೇಜಿನ ಪ್ರೊ.ಕೆ. ಪದ್ದಯ್ಯ, ಕೃಷ್ಣಾ, ತುಂಗಭದ್ರಾ ಮತ್ತು ಮಲಪ್ರಭಾನದಿ ಜಲಾಶಯದ ಪ್ರದೇಶದಲ್ಲಿ ಬೂದಿ ಗುಡ್ಡಗಳು ಅಧಿಕವಾಗಿ ದೊರೆಯುತ್ತವೆ. ಇಂತಹ 150 ನೆಲೆಗಳು ಪತ್ತೆಯಾಗಿವೆ. ಇವು ಪಶು ಸಂಗೋಪಾನೆ ಮತ್ತು ಕೃಷಿ ಬದುಕು ಸಮೃದ್ಧವಾಗಿದ್ದನ್ನು ಸೂಚಿಸುತ್ತವೆ. ಇವುಗಳಲ್ಲಿ ಹೊಸ ಶಿಲಾಯುಗದ ಆಯುಧಗಳು ಮತ್ತು ಕಲಾ ವಸ್ತುಗಳು ದೊರೆತಿವೆ. ಇವು ಜನ ಸಮೂಹದ ಕೊಟ್ಟಿಗೆಗಳಾಗಿದ್ದವು. ಇವುಗಳ ಪಕ್ಕದಲ್ಲೆ ಮಾನವ ನೆಲೆಯು ಇದ್ದು ಅವನ ಸಮಾಧಿಗಳನ್ನು ಕಾಣಬಹುದು. .ಪ್ರಾಣಿಗಳನ್ನು ಕೊಲ್ಲುವ ಕಟಕಟೆ, ಶಿಲಾಯುಧಗಳನ್ನು ನಯಗೊಳಿಸುವ ಸಾಧನಗಳು ಮುಂತಾದ ಅಂಶಗಳು ಈ ಬೂದಿ ಗುಡ್ಡಗಳಲ್ಲಿ ದೊರಕಿವೆ.

ಹೊಸ ಶಿಲಾಯುಗದ ಶಿಲಾಯುಗಗಳಲ್ಲಿ ಅತಿ ಹರಿತವಾದ ಕೈಕೊಡಲಿ, ಕೈಬಾಚಿ ಮತ್ತು ಉಳಿಗಳನ್ನು ಕಲ್ಲಿನಿಂದ ತಯಾರಿಸುತ್ತಿದ್ದನು. ಬದುಕಿಗೆ ಬೇಕಾದ ಕಟ್ಟಡಗಳನ್ನು ನಿರ್ಮಿಸಲು ಹಾಗೂ ಕೃಷಿಗೆ ಭೂಮಿಯನ್ನು ಪಡೆಯಲು ಮರಗಳನ್ನು ಕಡಿಯಬೇಕಾಗಿತ್ತು. ಇದಕ್ಕಾಗಿ ಬಲವಾದ ಆಯುಧಗಳನ್ನು ತಯಾರು ಮಾಡುವ ಅಗತ್ಯವಿತ್ತು. ಅವುಗಳನ್ನು ನಯಗೊಳಿಸಿ ಹೊಳಪನ್ನು ನೀಡುತ್ತಿದ್ದನು. ಇದು ಹೊಸ ಶಿಲಾಯುಗದ ಒಂದು ಲಕ್ಷಣ. ಪ್ರಾಣಿಗಳ ಮೂಳೆಗಳಿಂದಲೂ ಆಯುಧಗಳನ್ನು ತಯಾರು ಮಾಡುತ್ತಿದ್ದರು.

ಹೀಗೆ ಹಳೆ ಶಿಲಾಯುಗದಲ್ಲಿ ಆಹಾರ ಸಂಗ್ರಹಿಸುತ್ತಾ, ಬೇಟೆಯಾಡುತ್ತಾ, ಅಲೆಮಾರಿಯಾಗಿ ಜೀವಿಸಿದ್ದ ಮಾನವ ಹೊಸ ಶಿಲಾಯುಗದಲ್ಲಿ ಒಂದೆಡೆ ನೆಲೆಯಾಗಿ ನಿಂತು ಮಹತ್ತರ ಬದಲಾವಣೆಗೆ ಕಾರಣನಾದನು. ಪ್ರಾಣಿಗಳನ್ನು ಪಳಗಿಸಿ, ಕೃಷಿಯನ್ನೂ ಬದುಕಿಗೆ ಅಳವಡಿಸಿಕೊಂಡು ಗ್ರಾಮೀಣ ಬದುಕನ್ನು ಆರಂಭಿಸಿದ. ಇದು ಈ ಕಾಲದ ಪ್ರಮುಖ ಸಾಧನೆ.

## 4.5 ತಾಮ್ರ - ಶಿಲಾಯುಗ

ಹೊಸ ಶಿಲಾಯುಗದೊಂದಿಗೆ ಬೆಳೆದು ಬಂದ ಮತ್ತೊಂದು ಸಂಸ್ಕೃತಿಯನ್ನು ದಖನ್ ಮತ್ತು ದಕ್ಷಿಣ ಭಾರತದಲ್ಲಿ ಕಾಣಬಹುದು. ಇದನ್ನು ತಾಮ್ರ - ಶಿಲಾಯುಗ ಅಥವಾ ಚಾಲ್ಕೋಲಿಥಿಕ್ ಎಂದು ಕರೆಯಲಾಗಿದೆ. ಈ ಸಂಸ್ಕೃತಿಯನ್ನು 1950 ರಲ್ಲಿ ಮಹಾರಾಷ್ಟ್ರದ ಜೋರ್ವೆಯಲ್ಲಿ ಪತ್ತೆ ಹಚ್ಚಲಾಯಿತು. ಅದೇ ವರ್ಷ ಸಂಕಾಲಿಯ ನಾಸಿಕ್‌ನಲ್ಲಿ ಉತ್ಖನನವನ್ನು ನಡೆಸಿ ಜೋರ್ವೆ ಸಂಸ್ಕೃತಿಯ ಮಡಕೆಗಳನ್ನು ಹೊರತೆಗೆದರು. ಇಲ್ಲಿ ಕಲ್ಲಿನ ಬ್ಲೇಡುಗಳು ಮತ್ತು ತಾಮ್ರದ ಉಪಕರಣಗಳು ಜೊತೆಯಲ್ಲಿದ್ದವು. ತಾಮ್ರ ಶಿಲಾಯುಗದ ಸಂಸ್ಕೃತಿಯ ಪೂರ್ಣ ದರ್ಶನ ವನ್ನು ಮಾಡಿದವರು ಪೂಣೆಯ ದಖನ್ ಕಾಲೇಜಿನವರು. ಹಾಗೆಯೇ ಕರ್ನಾಟಕದಲ್ಲಿ ಕೃಷ್ಣ ಮತ್ತು ಅದರ ಉಪನದಿಗಳ ಪ್ರದೇಶದಲ್ಲಿ ಈ ಯುಗದ ಸಂಸ್ಕೃತಿ ದಟ್ಟವಾಗಿ ಬೆಳೆದಿದ್ದಿತು. ಚಿತ್ರದುರ್ಗ ಜಿಲ್ಲೆ, ಬಳ್ಳಾರಿ, ಬೆಳಗಾವಿ, ರಾಯಚೂರು, ಗುಲ್ಬರ್ಗಾ ಜಿಲ್ಲೆಗಳು, ತಾಮ್ರ - ಶಿಲಾಯುಗದ ಪ್ರಮುಖ ನೆಲೆಗಳು.

ತಾಮ್ರ - ಶಿಲಾಯುಗದ ಮಾನವನ ಬದುಕು ಗ್ರಾಮೀಣ ಜೀವನವಾಗಿದ್ದು ಜೀವನಕ್ಕೆ ಅಗತ್ಯವಾದ ಕೃಷಿ, ಪಶುಸಂಗೋಪನೆ, ಬೇಟೆಯಾಡುವುದು ಮತ್ತು ಮೀನು ಹಿಡಿಯುವ ಮಿಶ್ರ ಆರ್ಥಿಕ ವ್ಯವಸ್ಥೆ ರೂಪಿಸಿಕೊಂಡಿದ್ದನು. ಸಿಲಿಕಾನ್ ಶಿಲೆಯಿಂದ ಬ್ಲೇಡು ಮತ್ತು ಚಕ್ಕೆ ಆಯುಧಗಳನ್ನು ತಯಾರಿಸುತ್ತಿದ್ದರು. ತಾಮ್ರದ ಆಭರಣ ಮತ್ತು ಉಪಕರಣಗಳನ್ನು ಮಿತವಾಗಿ ಉಪಯೋಗಿಸುತ್ತಿದ್ದರು. ಕಪ್ಪು ಬಣ್ಣದ ಮೇಲೆ ಕೆಂಪು ಬಣ್ಣ ಹಾಕಿದ ಮಡಕೆಗಳು ಹಾಗೂ ಕಪ್ಪು ಮತ್ತು ಕೆಂಪು ಬಣ್ಣ ಹಾಕಿರುವ ಮಡಕೆಗಳನ್ನು ಬಳಸುತ್ತಿದ್ದರು.

## 4.6 ಬೃಹತ್ ಶಿಲಾಯುಗ (ಮೆಗಲಿಥಿಕ್) ಸಂಸ್ಕೃತಿ

ಬೃಹತ್ ಶಿಲಾಯುಗದ ಸಂಸ್ಕೃತಿಯು ಸಮಾಧಿ ಅಥವಾ ಸ್ಮಾರಕಗಳ ಬಗ್ಗೆ ತಿಳಿಸುತ್ತದೆ. ಈ ಸ್ಮಾರಕಗಳನ್ನು ದೊಡ್ಡದಾದ ಒರಟು ಚಪ್ಪಡಿಗಳಿಂದ ಮಾಡಿರುತ್ತಾರೆ. ಕಬ್ಬಿಣವನ್ನು ಉಪಯೋಗಿಸಿರುವುದು ವಿಶಿಷ್ಟಕರವಾದ ಸಂಗತಿ. ಬೃಹತ್ ಶಿಲಾಯುಗದ ಸಮಾಧಿಗಳು ದಕ್ಷಿಣ ಭಾರತದಲ್ಲಿ ವ್ಯಾಪಕವಾಗಿ ಕಾಣಿಸಿಕೊಂಡರೂ ಹೆಚ್ಚಿನವು ತಮಿಳುನಾಡು ಮತ್ತು ಕರ್ನಾಟಕದಲ್ಲಿವೆ.

ಬೃಹತ್ ಶಿಲಾಯುಗದ ಸಮಾಧಿಗಳನ್ನು ಕರ್ನಾಟಕ ಮತ್ತು ತಮಿಳು ನಾಡಿನಲ್ಲಿ ಪಾಂಡುಕಲ್ಲು ಅಥವಾ ಪಾಂಡವರ ಕಲ್ಲು ಎಂದು ಕರೆಯುತ್ತಾರೆ. ತಮಿಳು ಭಾಷೆಯಲ್ಲಿ ಪಾಂಡು ಎಂದರೆ ಸಮಾಧಿ ಎಂದರ್ಥ. ಈ ಕಾಲದ ಸಮಾಧಿಗಳು ವಿವಿಧ ಬಗೆಗಳಲ್ಲಿ ದೊರೆಯುತ್ತವೆ. ಸತ್ತ ವ್ಯಕ್ತಿಯ ಮೇಲೆ ಕಲ್ಲಿನ ರಾಶಿ ಹಾಕುವುದು, ಕಲ್ಲಿನ ಶವ ಪೆಟ್ಟಿಗೆ, ಕಲ್ಲು ಚಪ್ಪಡಿಯ ಗೋರಿ, ಸಮಾಧಿ ಸುತ್ತಲೂ ಕಲ್ಲು ನಿಲ್ಲಿಸುವುದು ಹೀಗೆ ವಿವಿಧ ಬಗೆಯ ಸಮಾಧಿಗಳಿವೆ. ಈ ಸಮಾಧಿಗಳಲ್ಲೂ ಸತ್ತವ್ಯಕ್ತಿ ಉಪಯೋಗಿಸುತ್ತಿದ್ದ ವಸ್ತುಗಳನ್ನು ಸೇರಿಸಲಾಗಿರುತ್ತದೆ. ಆದುದರಿಂದ ಮಡಕೆಗಳು ಮತ್ತು ಕಬ್ಬಿಣದ ವಸ್ತುಗಳು ಸಾಮಾನ್ಯವಾಗಿ ದೊರೆಯುತ್ತವೆ. ಈ ಮಡಕೆಗಳ ಮೇಲೆ ಗೀಚುಗಳಿವೆ. ಇವುಗಳು ತಮ್ಮದೇ ಆದ ಸಂಕೇತಗಳನ್ನು ಒಳಗೊಂಡಿರಬಹುದು. ಇವು ಕುಂಬಾರರ ಗುರುತೋ ಅಥವಾ ಮಾಲೀಕನ ಗುರುತೋ ಎಂಬುವುದರ ಬಗ್ಗೆ ಸ್ಪಷ್ಟ ಅಭಿಪ್ರಾಯವಿಲ್ಲ. ಕೊಯಮತ್ತೂರು ಜಿಲ್ಲೆಯ ಕೊಡುಮಾನು ಉತ್ಖನನದಲ್ಲಿ ದೊರೆತ ಮಡಕೆಗಳ ಮೇಲೆ ಗೀಚುಗಳ ಜೊತೆಗೆ ಬ್ರಾಹ್ಮೀಲಿಪಿಗಳಿವೆಯನ್ನಲಾಗಿದೆ. ಈ ಗೀಚುಗಳು ಬ್ರಾಹ್ಮೀಲಿಪಿಯ ಪೂರ್ವ ರೂಪವಾಗಿರಬಹುದು.

ಈ ಸಂಸ್ಕೃತಿ ಕ್ರಿ.ಪೂ. 1000 ದಿಂದ ಆರಂಭಗೊಂಡು ಕ್ರಿ.ಶ ದ ಮೊದಲ ಒಂದೆರಡು ಶತಮಾನಗಳವರೆಗೂ ಜಾರಿಯಲ್ಲಿದ್ದಿತು. ಬೃಹತ್ ಶಿಲಾಯುಗವನ್ನು ಕಬ್ಬಿಣದ ಯುಗದೊಂದಿಗೆ ಸಮೀಕರಿಸಬಹುದು. ಮಸ್ಕಿ, ಬ್ರಹ್ಮಗಿರಿ, ಕೊಲರದ ಬನಹಳ್ಳಿ, ಸೌಂದತ್ತಿ, ಹಿರೋಬೆನ ಕಲ್ಲು ಮತ್ತು ರಾಯಚೂರು ಜಿಲ್ಲೆಯ ಜಡಿಗೇನಹಳ್ಳಿ ಮುಂತಾದ ನೆಲೆಗಳಲ್ಲಿ ಈ ಸಂಸ್ಕೃತಿಯನ್ನು ಕಾಣಬಹುದು.

## 4.7 ಸಾರಾಂಶ

ಈ ಘಟಕದಲ್ಲಿ ಪ್ರಾಗೈತಿಹಾಸಕಾಲ ಅಥವಾ ಶಿಲಾಯುಗದ ಸಂಸ್ಕೃತಿ ಅಥವಾ ಇತಿಹಾಸ ಪೂರ್ವ ಕಾಲ ಮಾನವನ ಸಾಧನೆಗಳನ್ನು ತಿಳಿಯಲು ಯತ್ನ ಮಾಡಲಾಗಿದೆ. ಈ ಯುಗದ ಮಾನವನ ಸಂಸ್ಕೃತಿಯನ್ನು ತಿಳಿಯಲು ನಮಗೆ ಲಿಖಿತ ಆಧಾರಗಳು ದೊರಕದಿದ್ದಲ್ಲಿ ಆದುದರಿಂದ ಈ ಯುಗವನ್ನು ಇತಿಹಾಸಪೂರ್ವ ಕಾಲವೆಂದು ಕರೆಯಲಾಗಿರುವುದು. ಆದಿಮಾನವನ ದೈಹಿಕ ಹಾಗೂ ಸಾಂಸ್ಕೃತಿಕ ಪಳೆಯುಳಿಕೆಗಳೆ ಈ ಯುಗದ ಮಾನವ ಸಾಧನೆ ಅರಿಯಲು ಪ್ರಮುಖ ಆಧಾರಗಳಿಗೆ ಎಂಬ ಅಂಶವನ್ನು ನೀವು ಗಮನಿಸಿದ್ದೀರಿ.

ದಕ್ಷಿಣ ಭಾರತ ಮತ್ತು ದಖ್ಖನ್ ಪ್ರಸ್ಥಭೂಮಿ ಆದಿಮಾನವ ಅಸ್ತಿತ್ವದ ಬಗೆಗೆ ಇರುವ ಜಿಜ್ಞಾಸೆಗಳನ್ನು ನಿಮ್ಮ ಗಮನಕ್ಕೆ ತರಲಾಗಿದ್ದು ಈ ಭೂಭಾಗ ಪ್ರಪಂಚದ ಪ್ರಾಚೀನ ನಿವಾಸಗಳಲ್ಲೊಂದು ಎಂದು ಪರಿಗಣಿಸಲಾಗಿದೆ ಎಂಬ ಅಂಶವನ್ನು ತಿಳಿಯಪಡಿಸಲಾಗಿದೆ.

ಹಾಗೆಯೇ ಹಳೆ ಶಿಲಾಯುಗದ ಸಂಸ್ಕೃತಿಯ ಪ್ರಮುಖ ಮೈಲಿಗಳನ್ನು ಮತ್ತು ಅದಕ್ಕೂ ಹೊಸ ಶಿಲಾಯುಗ ಸಂಸ್ಕೃತಿಗೂ ಇರುವ ವ್ಯತ್ಯಾಸಗಳನ್ನು ನಿಮಗೆ ತಿಳಿಸಲಾಗಿದೆ. ಹಳೆಶಿಲಾಯುಗದ ಆಹಾರ ಸಂಗ್ರಹಕ ಮತ್ತು ಬೇಟೆಗಾರನಾಗಿದ್ದ ಮಾನವನ ನವ ಶಿಲಾಯುಗದಲ್ಲಿ ಆಹಾರ ಉತ್ಪಾದಿಸುವ ಸ್ಥಿರ ಕೃಷಿಕನಾಗಿ ಪರಿವರ್ತನೆಗೊಂಡ ಸಂಗತಿಗಳನ್ನು ಈ ಘಟಕದಲ್ಲಿ ನಿರೂಪಿಸಲಾಗಿದೆ.

ಹೊಸ ಶಿಲಾಯುಗದೊಂದಿಗೆ ಬೆಳೆದುಬಂದ ಮತ್ತೊಂದು ಸಂಸ್ಕೃತಿಯನ್ನು ದಖ್ಖಿನ್ ಮತ್ತು ದಕ್ಷಿಣ ಭಾರತದಲ್ಲಿ ಅಸ್ತಿತ್ವಕ್ಕೆ ಬಂದ ತಾಮ್ರ - ಶಿಲಾಯುಗ ಅಥವಾ ಚಾಲ್ಕೋಲಿಥಿಕ್ ಎಂದು ಕರೆಯಲಾಗಿದೆ. ಹಾಗೆಯೇ ಬೃಹತ್ ಶಿಲಾಯುಗ ಅಥವಾ ಮೆಗಾಲಿಥಿಕ್ ಯುಗದ ಸಂಸ್ಕೃತಿಯು ದಕ್ಷಿಣ ಭಾರತದಲ್ಲಿ ವ್ಯಾಪಕವಾಗಿ ಕಾಣಿಸಿಕಂಡಿರುವುದನ್ನು ಈ ಪಾಠದಲ್ಲಿ ಗಮನಿಸಿದ್ದೀರಿ.

## 4.8 ಸ್ವಪರೀಕ್ಷೆ ಪ್ರಶ್ನೆಗಳು

(1) ದಕ್ಷಿಣ ಭಾರತದ ಆದಿಮಾನವ ಸಂಸ್ಕೃತಿಯ ಪ್ರಮುಖ ಲಕ್ಷಣಗಳನ್ನು ವಿವರಿಸಿ

(2) ದಕ್ಷಿಣ ಭಾರತದಲ್ಲಿ ಶಿಲಾಯುಗ ಸಂಸ್ಕೃತಿಯ ಮಾನವನ ಸಾಧನೆಗಳನ್ನು ಚಿತ್ರಿಸಿ

ಟಿಪ್ಪಣಿ ಬರೆಯಿರಿ

(1) ದಖಿನ್ ಮತ್ತು ದಕ್ಷಿಣ ಭಾರತದಲ್ಲಿ ಆದಿಮಾನವ ಕುರುಹುಗಳು

(2) ಆದಿಮಾನವನ ಅಥವಾ ಇತಿಹಾಸ ಪೂರ್ವ ಯುಗದ ಸಂಸ್ಕೃತಿಯ ಪುನರ್ ರಚನೆಯಲ್ಲಿ ಪುರಾತತ್ವಶಾಸ್ತ್ರಜ್ಞರ ಪಾತ್ರ

(3) ಹಳೆ ಶಿಲಾಯುಗದ ಸಂಸ್ಕೃತಿ ಪ್ರಮುಖ ಸಾಧನೆಯ ಮೈಲಿಗಲ್ಲುಗಳು

(4) ಹೊಸ ಶಿಲಾಯುಗದ ಮಾನವನ ಪ್ರಮುಖ ಅವಿಶ್ಕಾರಗಳು

(5) ಕರ್ನಾಟಕದಲ್ಲಿ ಇತಿಹಾಸಪೂರ್ವ ಸಂಸ್ಕೃತಿಯ ನೆಲೆಗಳು

## 4.9 ಹೆಚ್ಚಿನ ಅಧ್ಯಯನಕ್ಕಾಗಿ ಗ್ರಂಥಗಳು


1. Chattopadhyaya.B.D. : **Indian Archaelogy and the Epic Tradition.**
2. Sundara .A. : **The Early Chamber Tombs of South India**
3. Sharma .G.R. : **History to Pre-history**
4. Allchin .B.(Ed) : **Living Tradition: Studies in the Ethno-archaelogy of South Asia.**
5. ಎಸ್.ಎನ್. ಶಿವರುದ್ರಸ್ವಾಮಿ : **ಕರ್ನಾಟಕದ ಪ್ರೌಢ ಇತಿಹಾಸ ಮತ್ತು ಸಂಸ್ಕೃತಿ**
6. ಜಿ.ಆರ್. ರಂಗಸ್ವಾಮಯ್ಯ : **ಪ್ರಾಚೀನ ಭಾರತ**
7. Romila Thappar : **Interpreting Early India**
8. A. Sundar (ed.) : **ಕರ್ನಾಟಕ ಚರಿತ್ರೆ, ಪ್ರಸಾರಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪೆ**


**ಪ್ರೊ|| ಮಾದೇಗೌಡ**

# ಟಿಪ್ಪಣಿಗಳು

# ಟಿಪ್ಪಣಿಗಳು


ಆದೇಶ ಸಂಖ್ಯೆ : ಕರಾಮುವಿ/ಅಸಾವಿ/4-060/2013-2014 ದಿನಾಂಕ : 24-09-2013
ಒಳಪುಟ : 60 GSM ವೆಸ್ಟ್‌ಕೋಸ್ಟ್ ಪೇಪರ್ ಮತ್ತು ಹೊರಪುಟ : 220 GSM ಆರ್ಟ್‌ಕಾರ್ಡ್
ಮುದ್ರಕರು : ಪೂರ್ಣಿಮಾ ಪ್ರಿಂಟರ್ಸ್, ಬೆಂಗಳೂರು. ಪ್ರತಿಗಳು : 5000

# Karnataka State Open University

**Mukthagangotri, Mysore - 570 006**

The Open University system has been initiated in order to augment opportunities for higher education and as an instrument of democratizing education.


*National Education Policy 1986*




♣ **REGIONAL CENTRES**

Bangalore
Davanagere
Gulbarga
Dharwad
Shimoga
Mangalore
Tumkur
Hassan
Chamarajanagar
Bellary
Mandya
Kolar
Bijapur
Belagaum
Ramanagar
Bangalore (another one)
Chikmagalur
Udupi
Karwar
Bidar
Mysore

- ● **HEAD QUARTERS**
- ★ **Total Study Centres : 123**
- ♣ **Regional Centres : 21**
- ❄ **B.Ed Study Centres : 10**
- ✦ **M.Ed Study Centres : 06**


Feedback : improvement, revision and launching of new programmes
Multimedia learning material
Academic and other support
Evaluation - methods and modes
STUDENT
INSTRUCTIONAL SYSTEM